ಸಂಪುಟ: 05 ಸಂಚಿಕೆ: 160 ಪುಟಗಳು: 08 ಶನಿವಾರ 23 ಆಗಸ್ಟ್ 2025

www.udayavahini.in  epaper.udayavahini.in  Udayavahini news  Udayavahini news  Udayavahini news youtube  udayavahininews@gmail.com

ಸಂಪಾದಕರು: ಟಿ. ಹೊಂಬೇಗೌಡ  RNI No. KARKAN/2021/80833  9448225696  +91 8035841833  ₹5

**ಮುಂಜಾನೆ ಮಾತು**

ಒಬ್ಬ ಮನುಷ್ಯ ಈಗ ಸ್ವಲ್ಪ ಹಿಂದೆ ಸರಿಯುತ್ತಿದ್ದಾನೆ ಅಂದರೆ ಅವನು ಸೋಲು ಒಪ್ಪಿಕೊಂಡ ಅಂತ ಅಲ್ಲ ಮುಂದೆ ಅವನ ಗುರಿ ದೊಡ್ಡದಿದೆ ಅಂತ ಸಿಂಹ ಮುಂದಿರುವ ಬೇಟೆ ಪಡಿಬೇಕಾದರೆ ಒಂದು ಹೆಜ್ಜೆ ಹಿಂದೆ ಸರಿದು ಓಡಿದ ಹಾಗೆ ಅವನು.

# ಉದಯ ವಾಹಿನಿ

ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

## ಗಿರೀಶ್ ಮಟ್ಟಣ್ಣನವರ್ ವಿರುದ್ಧ ಎಫ್‌ಐಆರ್

• ಉದಯವಾಹಿನಿ, ಬೆಂಗಳೂರು

ಮಹೇಶ್‌ಶೆಟ್ಟಿ ತಿಮರೋಡಿಯವರನ್ನು ವಶಕ್ಕೆ ತೆಗೆದುಕೊಳ್ಳುವ ಸಂದರ್ಭದಲ್ಲಿ ಪೊಲೀಸರ ಕರ್ತವ್ಯಕ್ಕೆ ಅಡ್ಡಿ ಪಡಿಸಿದ ಪ್ರಕರಣದಲ್ಲಿ ಗಿರೀಶ್ ಮಟ್ಟಣ್ಣನವರ್ ಬೆಳ್ತಂಗಡಿ ಪೊಲೀಸ್ ಠಾಣೆಗೆ ವಿಚಾರಣೆಗೆ ಹಾಜರಾದರು. ಬಿ.ಎಲ್ ಸಂತೋಷ್ ಅವರ ವಿರುದ್ಧ ಅವಹೇಳನಕಾರಿ ಹೇಳಿಕೆ ನೀಡಿದ್ದಾರೆಂಬ ಪ್ರಕರಣದಲ್ಲಿ ಮಹೇಶ್‌ಶೆಟ್ಟಿಯವರನ್ನು ನಿನ್ನೆ ದಕ್ಷಿಣ ಕನ್ನಡ ಜಿಲ್ಲೆ ಉಜಿರೆಯ ಅವರ ನಿವಾಸದಲ್ಲಿ ಬ್ರಹ್ಮಾವರ ಠಾಣೆ ಪೊಲೀಸರು ವಶಕ್ಕೆ ಪಡೆಯಲು ಹೋದಾಗ ಗಿರೀಶ್ ಮಟ್ಟಣ್ಣನವರ್ ಸೇರಿದಂತೆ 25 ಕ್ಕೂ ಹೆಚ್ಚು ಮಂದಿ ಕರ್ತವ್ಯಕ್ಕೆ ಅಡ್ಡಿ ಪಡಿಸಿದ್ದರು. ಹಾಗಾಗಿ ಗಿರೀಶ್ ಮಟ್ಟಣ್ಣನವರ್, ಜಯಂತ್ ಸೇರಿದಂತೆ 30 ಮಂದಿ ವಿರುದ್ಧ ಬ್ರಹ್ಮಾವರ ಠಾಣೆ ಸಬ್ ಇನ್ಸ್‌ಪೆಕ್ಟರ್ ಅಶೋಕ್ ಅವರು ಬೆಳ್ತಂಗಡಿ ಪೊಲೀಸ್ ಠಾಣೆಗೆ ದೂರು ನೀಡಿದ್ದರು. ಎಫ್‌ಐಆರ್ ದಾಖಲಿಸಿಕೊಂಡಿರುವ ಪೊಲೀಸರು ಇಂದು ವಿಚಾರಣೆಗೆ ಹಾಜರಾಗುವಂತೆ ಗಿರೀಶ್ ಮಟ್ಟಣ್ಣನವರ್‌ಗೆ ಸೂಚಿಸಿದ್ದರ ಹಿನ್ನೆಲೆಯಲ್ಲಿ ಅವರು ವಿಚಾರಣೆಗೆ ಹಾಜರಾದರು.

## ಧರ್ಮಸ್ಥಳದ ಹುಂಡಿ ಮೇಲೆ ಕಣ್ಣು ಹಾಕಿದರೆ ಸಹಿಸಲು ಸಾಧ್ಯವಿಲ್ಲ : ಬೇಳೂರು

• ಉದಯವಾಹಿನಿ, ಬೆಂಗಳೂರು

ಧರ್ಮಸ್ಥಳದ ಹುಂಡಿಯ ಹಣದ ಮೇಲೆ ಯಾರಾದರೂ ಕಣ್ಣು ಹಾಕಿದರೆ ಅದನ್ನು ಸಹಿಸಲು ಸಾಧ್ಯವಿಲ್ಲ ಎಂದು ಆಡಳಿತಾರೂಢ ಕಾಂಗ್ರೆಸ್ ಪಕ್ಷದ ಶಾಸಕ ಬೇಳೂರು ಗೋಪಾಲಕೃಷ್ಣ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಧರ್ಮಸ್ಥಳದ ಕುರಿತಂತೆ ನಿನ್ನೆ ಪ್ರಗತಿಪರ ಮುಖಂಡರು ಸಭೆ ನಡೆಸಿದ್ದರು. ಅದರಲ್ಲಿ ಮಾತನಾಡಿದ ಹಿರಿಯ ವಕೀಲ ಸಿ.ಎಸ್. ದ್ವಾರಕಾನಾಥ್, ಧರ್ಮಸ್ಥಳದ ಹುಂಡಿಯನ್ನು ರಾಜ್ಯ ಸರ್ಕಾರದ ಸುಪರ್ದಿಗೆ ತೆಗೆದುಕೊಳ್ಳಬೇಕೆಂದು ಒತ್ತಾಯಿಸಿದರು. ಈ ಕುರಿತು ಪ್ರತಿಕ್ರಿಯಿಸಿರುವ ಬೇಳೂರು ಗೋಪಾಲಕೃಷ್ಣ ಇಂತಹ ಬೇಡಿಕೆಗಳನ್ನು ಪರಿಗಣಿಸಲು ಸಾಧ್ಯವಿಲ್ಲ. ಯಾವುದೇ ಕಾರಣಕ್ಕೂ ಧರ್ಮಸ್ಥಳದ ಆದಾಯ ಸರ್ಕಾರದ ವಶವಾಗಲು ನಾವು ಬಿಡುವುದಿಲ್ಲ ಎಂದಿದ್ದಾರೆ. ಧರ್ಮಸ್ಥಳಕ್ಕೆ ಎಂಟುನೂರು ವರ್ಷಗಳ ಇತಿಹಾಸವಿದೆ. ಧರ್ಮಾಧಿಕಾರಿ ವೀರೇಂದ್ರ ಹೆಗ್ಗಡೆ ಅವರ ಕುಟುಂಬ ದೇವಸ್ಥಾನವನ್ನು ಸ್ಥಾಪಿಸಿ, ಮುನ್ನಡೆಸಿಕೊಂಡು ಬಂದಿದೆ. ದೇವಸ್ಥಾನದ ಆದಾಯವನ್ನು ಅವರು ಶೈಕ್ಷಣಿಕ ಅಭಿವೃದ್ಧಿ ಮತ್ತು ಸಾಮಾಜಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದಾರೆ. ಅಂತಹ ಕ್ಷೇತ್ರದ ಆದಾಯದ ಮೇಲೆ ಕಣ್ಣು ಹಾಕುವುದು ಸರಿಯಲ್ಲ ಎಂದರು.

## ವೀರಶೈವ, ಲಿಂಗಾಯತ ನಮೂದು; ಸಮಿತಿ ರಚನೆ: ಈಶ್ವರ ಖಂಡ್ರೆ

• ಉದಯವಾಹಿನಿ, ಬೆಂಗಳೂರು

ಸೆಪ್ಟೆಂಬರ್ 20ರಿಂದ ಆರಂಭವಾಗುವ ಸಾಮಾಜಿಕ, ಶೈಕ್ಷಣಿಕ ಸಮೀಕ್ಷೆ ವೇಳೆ ವೀರಶೈವ ಅಥವಾ ಲಿಂಗಾಯತ ಎಂದು ನಮೂದಿಸುವ ಕುರಿತು ಉನ್ನತ ಮಟ್ಟದ ಸಮಿತಿ ರಚಿಸಲು ಹಾಗೂ ಮಠಾಧೀಶರೊಂದಿಗೆ ಚರ್ಚಿಸಿ ಅಂತಿಮ ತೀರ್ಮಾನ ಕೈಗೊಳ್ಳಲು ಅಖಿಲ ಭಾರತ ವೀರಶೈವ ಲಿಂಗಾಯಿತ ಮಹಾಸಭಾ ಹೇಳಿದೆ. ಸಮೀಕ್ಷೆಯಲ್ಲಿ ವೀರಶೈವ– ಲಿಂಗಾಯತ ಸಮುದಾಯದ ನೈಜ ಸಂಖ್ಯೆ ಖಚಿತಪಡಿಸಿಕೊಳ್ಳುವುದು ನಮ್ಮ ಉದ್ದೇಶವಾಗಿದೆ. ಸಮುದಾಯದ ನೈಜ ಸಂಖ್ಯೆ ತಿಳಿಯಲು ಅಖಿಲ ಭಾರತ ವೀರಶೈವ– ಲಿಂಗಾಯತ ಮಹಾಸಭಾ ತೆಗೆದುಕೊಳ್ಳುವ ತೀರ್ಮಾನ ಒಪ್ಪುವುದಕ್ಕೆ ಸಭೆಯಲ್ಲಿ ಸಮ್ಮತಿ ಸೂಚಿಸಲಾಗಿದೆ ಎಂದು ಈಶ್ವರ ಖಂಡ್ರೆ ಅವರು ಸಭೆ ಬಳಿಕ ತಿಳಿಸಿದರು.

## ಪಾಲಿಕೆ ನೌಕರರ ಹಿತಾಸಕ್ತಿ ಕಾಪಾಡಿ

• ಉದಯವಾಹಿನಿ, ಬೆಂಗಳೂರು

ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಆಡಳಿತಕ್ಕೆ ವೃಂದ ಬಲ, ಮುಂಬಡ್ತಿ, ನೇಮಕಾತಿಗೆ ವಿಧಾನಗಳನ್ನು ರೂಪಿಸುವ ಸಂದರ್ಭದಲ್ಲಿ ಪ್ರಸ್ತುತ ಬಿಬಿಎಂಪಿಯಲ್ಲಿರುವ ಅಧಿಕಾರಿ ಮತ್ತು ನೌಕರರ ಹಿತ ಕಾಪಾಡಬೇಕು ಎಂದು ಬಿಬಿಎಂಪಿ ಅಧಿಕಾರಿ ಮತ್ತು ನೌಕರರ ಕ್ಷೇಮಾಭಿವೃದ್ಧಿ ಸಂಘ ಮನವಿ ಮಾಡಿದೆ.

ಸಿಎಂ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ನಗರಾಭಿವೃದ್ಧಿ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯವರಿಗೆ ಸಂಘದ ಅಧ್ಯಕ್ಷ ಎ. ಅಮೃತ್ ರಾಜ್ ಅವರು ಪತ್ರ ಬರೆದು ಮನವಿ ಮಾಡಿಕೊಂಡಿದ್ದಾರೆ. ಗ್ರೇಟರ್ ಬೆಂಗಳೂರು ಪ್ರಾಧಿಕಾರ ರಚಿಸಿ ಪ್ರತ್ಯೇಕ ವೃಂದ ಮತ್ತು ನೇಮಕಾತಿ ನಿಯಮಗಳನ್ನು ರಚಿಸುವವರೆಗೂ ಬಿಬಿಎಂಪಿಯ ಸಿ ಆ್ಯಂಡ್ ಆರ್ ನಿಯಮಗಳನ್ನೇ ಮುಂದುವರಿಸಬೇಕು. ಹೊಸ ನಿಯಮಾವಳಿ ರೂಪಿಸುವಾಗ, ಪಾಲಿಕೆಯ ನಿಯಮಗಳನ್ನು ಗಣನೆಗೆ ತೆಗೆದುಕೊಂಡು, ನೌಕರರ ಯಾವುದೇ ಸೌಲಭ್ಯಗಳಿಗೆ ಧಕ್ಕೆಯಾಗದಂತೆ ಕ್ರಮ ಕೈಗೊಳ್ಳಬೇಕು ಎಂದಿದ್ದಾರೆ.

# ನಮ್ಮದೇನೂ ತಪ್ಪಿಲ್ಲ... ಒತ್ತಡ ಸರಿಇಲ್ಲ

• ಉದಯವಾಹಿನಿ, ಬೆಂಗಳೂರು

**1** ಆರ್ ಸಿಬಿ ಸಂಭ್ರಮಾಚರಣೆಗೆ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋತ್‌ಅವರನ್ನು ಆಹ್ವಾನಿಸಿದ್ದು ನಾನೇ: ಸಿದ್ದರಾಮಯ್ಯ

**2** ವಿಧಾನಸಭೆಯಲ್ಲಿ ನಿಯಮ 69 ಅಡಿಯಲ್ಲಿ ನಡೆದ ಚರ್ಚೆಗೆ ಉತ್ತರ

**3** ಕಾಲ್ತುಳಿತ ಘಟನೆಯ ಬಗ್ಗೆ ಸಿಎಂ ವಿವರಣೆ

- ದುರಂತಕ್ಕೆ ಸರಕಾರ ಕ್ಷಮೆ ಕೇಳಲಿ
- ನಾನು ಕಬಡ್ಡಿ ಆಟಗಾರ, ಕ್ರಿಕೆಟ್ ಪಟು ಅಲ್ಲ ಫಾಲೋವರ್ ಅಷ್ಟೇ
- ಕಾಲ್ತುಳಿತ:ವಿಪಕ್ಷ ಸಭಾತ್ಯಾಗ
- ಚಿನ್ನಸ್ವಾಮಿ ಕಾಲ್ತುಳಿತದಿಂದ ತುಂಬಾ ಡಿಸ್ಟರ್ಬ್ ಆಗಿದ್ದೇನೆ
- ನನ್ನ ರಾಜಕೀಯ ಬದುಕಿನಲ್ಲೇ ಬಹಳ ದು:ಖ ಕೊಟ್ಟ ಘಟನೆ – ಸಿಎಂ



ಆರ್‌ಸಿಬಿ ತಂಡದ ವಿಜಯೋತ್ಸವದ ವೇಳೆ ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ನಡೆದ ಕಾಲ್ತುಳಿತ ದುರಂತಕ್ಕೆ ಸರ್ಕಾರ ಕಾರಣವಲ್ಲ. ಈ ದುರಂತಕ್ಕೆ ಈಗಲೂ ವಿಷಾದ ವ್ಯಕ್ತಪಡಿಸುತ್ತೇನೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ವಿಧಾನಸಭೆಯಲ್ಲಿಂದು ಹೇಳಿದರು.

ನಿಯಮ 69ರಡಿಯಲ್ಲಿ ನಡೆದ ಚರ್ಚೆಗೆ ಸುದೀರ್ಘ ಉತ್ತರ ನೀಡಿದ ಮುಖ್ಯಮಂತ್ರಿ, ಈ ಘಟನೆ ನಡೆಯಬಾರದಿತ್ತು. ನಮಗೂ ನೋವಾಗಿದೆ. ದುರಂತಕ್ಕೆ ನಾನು ಹಿಂದೆಯೂ ವಿಷಾದ ವ್ಯಕ್ತಪಡಿಸಿದ್ದೆ, ಈಗಲೂ ವಿಷಾದ ವ್ಯಕ್ತಪಡಿಸುತ್ತಿದ್ದೇನೆ.

ಈ ಘಟನೆಗೆ ಸರ್ಕಾರ ಜವಾಬ್ದಾರಿ, ಸಿಎಂ, ಡಿಸಿಎಂ, ಗೃಹ ಸಚಿವರು ರಾಜೀನಾಮೆ ನೀಡಬೇಕು ಎಂಬ ಪ್ರತಿಪಕ್ಷಗಳ ಒತ್ತಾಯ ಸರಿಯಲ್ಲ ಎಂದ ಅವರು, ಕಾಲ್ತುಳಿತದ ಸಂಬಂಧ ಸರ್ಕಾರ ಯಾರ ಮೇಲೆ ಕ್ರಮ ಕೈಗೊಂಡಿದೆ, ಯಾವ ರೀತಿ ತನಿಖೆ ನಡೆಸುತ್ತಿದೆ ಎಂಬುದನ್ನು ಸದನದಲ್ಲಿ ವಿವರಿಸಿದರು.

**ಪ್ರತಿಪಕ್ಷಗಳ ಸಭಾತ್ಯಾಗ:** ಸಿಎಂ ಉತ್ತರದಿಂದ ಅಸಮಾಧಾನಗೊಂಡ ಪ್ರತಿಪಕ್ಷಗಳ ಸದಸ್ಯರು ಈ ದುರಂತದ ಬಗ್ಗೆ ಮುಖ್ಯಮಂತ್ರಿಗಳು ಕ್ಷಮೆ ಕೇಳದೇ ಇರುವುದು, ತಪ್ಪಾಗಿದೆ ಎಂದು ಹೇಳದೇ ಇರುವುದನ್ನು ಪ್ರತಿಭಟಿಸಿ ಸಭಾತ್ಯಾಗ ಮಾಡಿದರು. ಆರ್‌ಸಿಬಿ ವಿಜಯೋತ್ಸವದ ಕಾಲ್ತುಳಿತದ ಬಗ್ಗೆ ಮುಖ್ಯಮಂತ್ರಿಗಳ ಉತ್ತರ ತಮಗೆ ತೃಪ್ತಿ ತಂದಿಲ್ಲ. ಸಿದ್ದರಾಮಯ್ಯನವರ ಉತ್ತರ ಪರೀಕ್ಷೆಯಲ್ಲಿ ಅವರು ಫೇಲಾಗಿದ್ದನ್ನು ಬಿಟ್ಟು, ಉಳಿದವರು ಫೇಲಾಗಿದ್ದನ್ನು ತಂದೆಗೆ ಹೇಳುವ ರೀತಿಯಂತಿದೆ. ಆಟೋದಲ್ಲಿ ಕುಳಿತು ಜಗತ್ತನ್ನೇ ಸುತ್ತಾಡಿಸಿದ ರೀತಿ ಇದೆ. ಮುಖ್ಯಮಂತ್ರಿಗಳು ಸರಿಯಾದ ಉತ್ತರ ಕೊಟ್ಟಿಲ್ಲ. ಕ್ರೀಡಾಂಗಣದಲ್ಲಿ ಸಮಾರಂಭಕ್ಕೆ ಅನುಮತಿ ಕೊಡುವಲ್ಲಿ ಆಗಿರುವ ವೈಫಲ್ಯದ ಬಗ್ಗೆಯೂ ಮಾತನಾಡಿಲ್ಲ ಎಂದು ಪ್ರತಿಪಕ್ಷ ನಾಯಕ ಆರ್.ಅಶೋಕ್ ಹೇಳಿದರು. ಸರ್ಕಾರದ ನಿರ್ಲಕ್ಷ್ಯ, ಪ್ರಚಾರದ ಹಪಹಪಿಯಿಂದ ಈ ದುರಂತ ಸಂಭವಿಸಿದೆ. 11 ಮಂದಿ ಅಮಾಯಕರು ಮೃತಪಟ್ಟಿದ್ದಾರೆ. ಸಿಎಂ ತಪ್ಪನ್ನು ಒಪ್ಪಿಕೊಂಡಿಲ್ಲ. ತಪ್ಪು ಒಪ್ಪಿಕೊಂಡಿದ್ದರೆ, ಗಾಂಧೀಜಿಯವರು ಹೇಳಿದಂತೆ ದೊಡ್ಡ ಮನುಷ್ಯರಾಗುತ್ತಿದ್ದರು. ದುರಂತದಲ್ಲಿ ಸರ್ಕಾರದ ವೈಫಲ್ಯ ಇದ್ದರೂ ಅದನ್ನು ಒಪ್ಪಿಕೊಳ್ಳದೆ ಕ್ಷಮೆಯಾಚಿಸದ ಮುಖ್ಯಮಂತ್ರಿಗಳ ನಡೆಯನ್ನು ಖಂಡಿಸಿ ಸಭಾತ್ಯಾಗ ಮಾಡುತ್ತಿರುವುದಾಗಿ ಹೇಳಿ ಪ್ರತಿಪಕ್ಷಗಳ ಸದಸ್ಯರ ಜೊತೆ ಸದನದಿಂದ ಅಶೋಕ್ ಹೊರನಡೆದರು. ಕಾಲ್ತುಳಿತ ಘಟನೆಯ ಬಗ್ಗೆ ಮುಖ್ಯಮಂತ್ರಿಗಳಿಗೆ ಮನುಷ್ಯತ್ವ ಇದ್ದರೆ, ಹೃದಯ ಇದ್ದಿದ್ದರೆ ತಪ್ಪಾಯಿತು ಎಂದು ಕ್ಷಮೆ ಕೇಳಬೇಕು ಎಂದೆಲ್ಲಾ ಪ್ರತಿಪಕ್ಷ ನಾಯಕರು ಹೇಳಿದ್ದಾರೆ. ಆ ಘಟನೆ ನಡೆದ ದಿನವೇ ನಾನು ವಿಷಾದ ವ್ಯಕ್ತಪಡಿಸಿದ್ದೇನೆ. ನಡೆಯಬಾರದ ಘಟನೆ ನಡೆದಿದೆ. 42 ವರ್ಷಗಳಿಗೂ ಹೆಚ್ಚು ಕಾಲದ ನನ್ನ ರಾಜಕೀಯ ಬದುಕಿನಲ್ಲಿ ಈ ರೀತಿಯ ಕಹಿ ಘಟನೆ ನಡೆದಿದೆ ಎಂದು ನಾನು ಹೇಳಿದ್ದೇನೆ. ನನಗೂ ಈ ಘಟನೆಯ ಬಗ್ಗೆ ದುಃಖ ಇದೆ ಎಂದು ವಿಷಾದ ವ್ಯಕ್ತಪಡಿಸಿದ್ದೇನೆ. ಈ ಘಟನೆಯ ಬಗ್ಗೆ ನನಗೆ ಮಾಹಿತಿ ಗೊತ್ತಾದ ನಂತರ ಇಡೀ ದಿನ ಡಿಸ್ಟರ್ಬ್ ಆಗಿದ್ದೆ. ಈ ಘಟನೆ ಗೊತ್ತಿದ್ದರೂ ಹೋಟೆಲ್‌ಗೆ ದೋಸೆ ತಿನ್ನಲು ಹೋಗಿದ್ದೆ ಎನ್ನುವುದು ತಪ್ಪು. ನಾನು ಹೋಟೆಲ್‌ಗೆ ಹೋಗಿದ್ದು ನಿಜ. ಆದರೆ, ಹೋಟೆಲ್‌ನಲ್ಲಿ ನಾನು ತಿಂಡಿ ತಿಂದ ಮೇಲೆ ಈ ಘಟನೆಯ ಬಗ್ಗೆ ಕಾನೂನು ಸಲಹೆಗಾರರು ಮಾಹಿತಿ ನೀಡಿದರು. ಆಗ ನಾನು ಪೊಲೀಸ್ ಆಯುಕ್ತರಿಗೆ ದೂರವಾಣಿ ಮಾಡಿ ವಿಚಾರಿಸಿದೆ.

ಆಗ ಅವರು ಒಬ್ಬರು ಸತ್ತಿದ್ದಾರೆ ಎಂದು ಹೇಳಿದರು. ಇದು ನಿಜ ಸಂಗತಿ. ನನಗೂ ಬಹಳ ದುಃಖವಾಗಿದೆ ಎಂದು ಹೇಳಿದರು. ಚಿಕ್ಕವಯಸ್ಸಿನ ಹುಡುಗರು ಸತ್ತಿರುವುದು ನನಗೂ ನೋವು ತಂದಿದೆ. ಗೃಹ ಸಚಿವರ ಜತೆ ನಾನು ಸಹ ಆಸ್ಪತ್ರೆಗೆ ಭೇಟಿ ನೀಡಿದ್ದೆ. ನಂತರ ಬೆಂಗಳೂರು ನಗರ ಜಿಲ್ಲಾಧಿಕಾರಿ ಜಗದೀಶ್ ನೇತೃತ್ವದಲ್ಲಿ ಮ್ಯಾಜಿಸ್ಟ್ರಿಯಲ್ ತನಿಖೆಗೂ ಆದೇಶಿಸಿದೆ. ನಂತರ ಹೈಕೋರ್ಟ್‌ನ ನಿವೃತ್ತ ನ್ಯಾಯಧೀಶರಾದ ಕುನ್ಹಾ ಅವರ ನೇತೃತ್ವದಲ್ಲಿ ಆಯೋಗ ರಚಿಸಿ ಒಂದು ತಿಂಗಳಲ್ಲಿ ವರದಿ ನೀಡುವಂತೆಯೂ ತಿಳಿಸಿದ್ದೆ. ಸರ್ಕಾರವನ್ನು ಅಬೆಟರ್ ಎಂದು ಕರೆದಿದ್ದಾರೆ. ಸರ್ಕಾರ ಈ ಘಟನೆಗೆ ಹೊಣೆಯೇ, ಇಲ್ಲವೇ ಎಂಬುದು ಸಾರ್ವಜನಿಕರಿಗೂ ಗೊತ್ತಿದೆ. ಎಲ್ಲವನ್ನೂ ಜನ ತೀರ್ಮಾನ ಮಾಡುತ್ತಾರೆ ಎಂದರು.

ಕಾಲ್ತುಳಿತ ದುರಂತದ ಬಗ್ಗೆ ನಿವೃತ್ತ ನ್ಯಾ.ಕುನ್ಹಾ ಅವರು ಕಳೆದ ಜುಲೈ 10ರಂದು ವರದಿ ಕೊಟ್ಟಿದ್ದಾರೆ. ಜಿಲ್ಲಾಧಿಕಾರಿಗಳು ಜು. 11ರಂದು ವರದಿ ಕೊಟ್ಟಿದ್ದಾರೆ. ಈ ಘಟನೆಯ ಬಗ್ಗೆ ರಾಜ್ಯ ಹೈಕೋರ್ಟ್ ಸಹ ಸ್ವಯಂ ಪ್ರಕರಣ ದಾಖಲಿಸಿಕೊಂಡು ವಿಚಾರಣೆ ನಡೆಸುತ್ತಿದೆ. ಇಡೀ ಘಟನೆಯನ್ನು ನಾವು ಸಿಐಡಿ ತನಿಖೆಗೆ ವಹಿಸಿದ್ದೇವೆ. ದೋಷಾರೋಪ ಪಟ್ಟಿಯೂ ಸಿದ್ಧವಾಗಿದೆ. ನ್ಯಾಯಾಲಯದ ಅನುಮತಿ ಸಿಕ್ಕ ನಂತರ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿಯನ್ನು ಸಲ್ಲಿಸುತ್ತೇವೆ ಎಂದರು.

ಈ ಘಟನೆ ಸಂಬಂಧ ಆರ್‌ಸಿಬಿ, ಕೆಎಸ್‌ಸಿಎ , ಡಿಎನ್‌ಎ ಸಂಸ್ಥೆಗಳ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಿ, ಆ ಸಂಸ್ಥೆಗಳ ಕೆಲವರನ್ನು ಬಂಧಿಸಿದ್ದೆವು. ಈಗ ಅವರೆಲ್ಲಾ ಜಾಮೀನಿನ ಮೇಲೆ ಹೊರಗಿದ್ದಾರೆ ಎಂದು ಮಾಹಿತಿ ನೀಡಿದರು. ಆರ್‌ಸಿಬಿ ಜಗತ್ತಿನಲ್ಲೇ ಅತಿ ಹೆಚ್ಚು ಅಭಿಮಾನಿಗಳನ್ನು ಹೊಂದಿದೆ.

ನಾಡಿನ ಜನತೆ ಬೆಂಗಳೂರಿನ ಅಸ್ಮಿತೆಯನ್ನು ಆರ್‌ಸಿಬಿಯಲ್ಲಿ ಕಂಡಿದ್ದಾರೆ. ಹಾಗಾಗಿ ಆರ್‌ಸಿಬಿ ಗೆದ್ದಾಗ ರಾತ್ರಿಯೆಲ್ಲಾ ಸಂಭ್ರಮಾಚರಣೆ ಆಚರಿಸಿದರು. ಇದೊಂದು ರೀತಿ ಸಮೂಹ ಸನ್ನಿಯಂತಿತ್ತು. ಜನರ ಆಶೋತ್ತರಗಳಿಗೆ ಸ್ಪಂದಿಸಬೇಕು ಎಂಬ ಕಾರಣಕ್ಕೆ ನಾವು ಆರ್‌ಸಿಬಿಯ ವಿಜಯೋತ್ಸವ ಸಮಾರಂಭವನ್ನು ವಿಧಾನಸೌಧದ ಮುಂದೆ ಆಚರಿಸಿದೆವು. ಅದು ಮಳೆಯಿಂದ ಹತ್ತು ನಿಮಿಷದಲ್ಲಿ ಕಾರ್ಯಕ್ರಮ ಮುಗಿಯಿತು. ಬಿಜೆಪಿಯವರು ಸಹ ಆರ್‌ಸಿಬಿ ವಿಜಯೋತ್ಸವ ಮೆರವಣಿಗೆಗೆ ಅನುಮತಿ ನೀಡದ ಬಗ್ಗೆ ಟ್ವೀಟ್ ಮಾಡಿದ್ದಾರೆ. ಈಗ ನಮ್ಮ ವಿರುದ್ಧ ಮಾತನಾಡುತ್ತಿದ್ದಾರೆ ಎಂದು ಪ್ರತಿಪಕ್ಷಗಳನ್ನು ತರಾಟೆಗೆ ತೆಗೆದುಕೊಂಡರು. ಕಳೆದ 10 ವರ್ಷಗಳಲ್ಲಿ ದೇಶದ ಯಾವ ಯಾವ ರಾಜ್ಯಗಳಲ್ಲಿ ಯಾವೆಲ್ಲಾ ಕಾಲ್ತುಳಿತ ದುರಂತಗಳಾಗಿವೆ ಎನ್ನುವುದನ್ನು ಸದನಕ್ಕೆ ಮಾಹಿತಿ ನೀಡಿದ ಮುಖ್ಯಮಂತ್ರಿಗಳು, ಇತ್ತೀಚಿನ ಕುಂಭಮೇಳದಲ್ಲಿ ಕಾಲ್ತುಳಿತ ಘಟನೆ ಸೇರಿದಂತೆ ಗುಜರಾತ್, ಬಿಹಾರ್, ಮಧ್ಯ ಪ್ರದೇಶ, ಉತ್ತರ ಪ್ರದೇಶ, ರಾಜಸ್ಥಾನ, ಉತ್ತರಾಖಂಡಗಳಲ್ಲಿ ಸಂಭವಿಸಿರುವ ಕಾಲ್ತುಳಿತ ಘಟನೆಗಳನ್ನು ಪ್ರಸ್ತಾಪಿಸಿ, ಈ ಘಟನೆಗಳಾದಾಗ ಬಿಜೆಪಿಯವರೇ ಮುಖ್ಯಮಂತ್ರಿಗಳಾಗಿದ್ದರು. ಅವರೆಲ್ಲಾ ರಾಜೀನಾಮೆ ಕೊಟ್ಟಿದ್ದಾರೆಯೇ, ಅವರೆಲ್ಲಾ ಕ್ಷಮೆ ಕೇಳಿದ್ದಾರೆಯೇ ಎಂದು ಪ್ರಶ್ನಿಸಿದರು. ಈ ಹಿಂದೆ ಕೋವಿಡ್ ಸಂದರ್ಭದಲ್ಲಿ ಗುಜರಾತ್ ಟೈಟನ್ ಐಪಿಎಲ್‌ನಲ್ಲಿ ಗೆದ್ದಾಗ ಗುಜರಾತ್‌ನಲ್ಲಿ ಕೇಂದ್ರ ಗೃಹ ಸಚಿವ ಅಮಿತ್ ಶಾ, ಅವರ ಧರ್ಮಪತ್ನಿ, ಅಂದಿನ ಗುಜರಾಜ್ ಮುಖ್ಯಮಂತ್ರಿ ಭೂಪೇಂದ್ರ ಪಟೇಲ್ ಸೇರಿದಂತೆ ಎಲ್ಲರೂ ಸಂಭ್ರಮಾಚರಣೆಯಲ್ಲಿ ಭಾಗಿಯಾಗಿದ್ದರು.

ಅಹಮದಾಬಾದ್‌ನಲ್ಲಿ ವಿಜಯೋತ್ಸವ ಮೆರವಣಿಗೆಯೂ ನಡೆಯಿತು. ಆಗ ನೂರಾರು ಜನ ಕೋವಿಡ್‌ಗೆ ಬಲಿಯಾಗಲಿಲ್ಲವೇ?, ಮೋದಿಯವರು 2020 ರಲ್ಲಿ ಅಮೆರಿಕದ ಟ್ರಂಪ್ ಅವರನ್ನು ಕರೆಸಿ ಮೋದಿ ಕಾರ್ಯಕ್ರಮ ಮಾಡಿದರು. ಆಗ ಸಾವಿರಾರು ಜನ ಕೋವಿಡ್‌ಗೆ ಬಲಿಯಾಲಿಲ್ಲವೇ..?, ಆಗ ಇವರೆಲ್ಲಾ ರಾಜೀನಾಮೆ ಕೊಟ್ಟರಾ?, ನೀವ್ಯಾಕೆ ಇವರನ್ನೆಲ್ಲಾ ಅಬೆಟರ್ ಎಂದು ಕರೆದಿಲ್ಲ ಎಂದು ಪ್ರಶ್ನಿಸಿದರು. ಕೋವಿಡ್ ಸಂದರ್ಭದಲ್ಲಿ ಚಾಮರಾಜನಗರದಲ್ಲಿ 36 ಜನ ಆಮ್ಲಜನಕ ಸಿಗದೆ ಮೃತಪಟ್ಟರು. ಆಗ ಚಾಮರಾಜನಗರ ಉಸ್ತುವಾರಿ ಸುರೇಶ್ ಕುಮಾರ್ ಅವರೇ ಆಗಿದ್ದರು. ಆಗಿನ ಆರೋಗ್ಯ ಸಚಿವ ಡಾ.ಸುಧಾಕರ್ ರಾಜೀನಾಮೆ ಕೊಟ್ಟರಾ?, ಸುರೇಶ್ ಕುಮಾರ್ ಅವರೇ ಆಗ ಆರೋಗ್ಯ ಸಚಿವ ಸುಧಾಕರ್ ಅವರನ್ನು ಹಾಗೂ ಆಗಿನ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರನ್ನು ಅಬೆಟರ್ ಎಂದು ಯಾಕೆ ಕರೆಯಲಿಲ್ಲ ಎಂದು ಪ್ರಶ್ನಿಸಿದರು.

ಆಗ ಮಧ್ಯ ಪ್ರವೇಶಿಸಿದ ಬಿಜೆಪಿ ಶಾಸಕ ಸುರೇಶ್ ಕುಮಾರ್ ಅವರು, ಈ ಘಟನೆ ಸಂಬಂಧ ಸಚಿವ ಸಂಪುಟ ಸಭೆಯಲ್ಲಿ ಬಿಕ್ಕಿ ಬಿಕ್ಕಿ ಅತ್ತಿದ್ದೇನೆ. ರಾಜೀನಾಮೆ ಕೊಡಲು ಸಹ ಮುಂದಾಗಿದ್ದೆ ಎಂದಾಗ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಸಚಿವ ಸಂಪುಟದಲ್ಲಿ ನಾನಿರಲಿಲ್ಲ. ನನಗೆ ಗೊತ್ತಿಲ್ಲ. ಆದರೆ, ನೀವು ಬೊಮ್ಮಾಯಿ ಅವರನ್ನು, ಸುಧಾಕರ್ ಅವರನ್ನು ಅಬೆಟರ್ ಎಂದು ಏಕೆ ಕರೆಯಲಿಲ್ಲ. ಈ ರೀತಿಯ ದುರಂತಗಳಲ್ಲಿ ರಾಜಕೀಯ ಮಾಡಬಾರದು ಎಂದು ವಿಪಕ್ಷಗಳ ಸದಸ್ಯರನ್ನು ಮಾತಿನಿಂದ ತಿವಿದರು.

ಗುಜರಾತ್‌ನಲ್ಲಿ ಇತ್ತೀಚೆಗೆ ಏರ್ ಇಂಡಿಯಾ ವಿಮಾನ ದುರಂತ ಸಂಭವಿಸಿತು. ಈ ಹಿಂದೆ ಹಾವೇರಿಯಲ್ಲಿ ಗೊಬ್ಬರ ಕೇಳಿದ ರೈತರ ಮೇಲೆ ಗೋಲಿಬಾರ್ ಮಾಡಿಸಿದಿರಿ. ವರನಟ ಡಾ. ರಾಜ್‌ಕುಮಾರ್ ಅವರು 2006ರಲ್ಲಿ ಗೋಲಿಬಾರ್ ಆಗಿ ಹಲವರು ಮೃತಪಟ್ಟರು. ಆಗ ಕುಮಾರಸ್ವಾಮಿ ಮುಖ್ಯಮಂತ್ರಿ, ಬಿ.ಎಸ್. ಯಡಿಯೂರಪ್ಪ ಉಪಮುಖ್ಯಮಂತ್ರಿ. ಇವರು ರಾಜೀನಾಮೆ ಕೊಟ್ಟರಾ?, ತಪ್ಪಾಯಿತು ಎಂದು ಹೇಳಿದರಾ? ಎಂದು ಪ್ರಶ್ನೆ ಮಾಡಿದರು.ಯಾವುದೇ ವಿಚಾರವನ್ನು ರಾಜಕೀಯ ಮಾಡುವುದು ಬೇಡ. ಕ್ಷಮಾಪಣೆ ಕೇಳಿ ಎಂದು ನಮಗೆ ಪಾಠ ಮಾಡಲು ಬರಬೇಡಿ ಎಂದು ವಿಪಕ್ಷಗಳ ವಿರುದ್ಧ ಸಿಎಂ ಹರಿಹಾಯ್ದರು.

### ಬಿಜೆಪಿಯಲ್ಲಿ ಬುದ್ಧಿವಂತರಿಗೆ ಸ್ಥಾನ ಇಲ್ಲ

ಬಿಜೆಪಿಯಲ್ಲಿ ಬುದ್ಧಿವಂತರಿಗೆ ಸ್ಥಾನ ಇಲ್ಲ ಎಂದು ಸಿಎಂ ಸಿದ್ದರಾಮಯ್ಯ ಇದೇ ವೇಳೆ ಕಾಲು ಎಳೆದರು. ಉತ್ತರ ನೀಡುವ ಮುನ್ನ, ಪ್ರತಿಪಕ್ಷದ ನಾಯಕ ಆರ್. ಅಶೋಕ್ ಇವತ್ತು ಹೊಸ ಬಟ್ಟೆ ಹಾಕಿದ್ದೀರಾ ಎಂದು ಪ್ರಶಂಸಿದ್ದರು. ಇಲ್ಲ ಇದು ಹಳೆಯ ಬಟ್ಟೆ ಎಂದು ಸಿದ್ದರಾಮಯ್ಯ ಸ್ಪಷ್ಟನೆ ನೀಡಿದರು. ಕೇಸರಿ ಧರಿಸಿದ್ದೀರಲ್ಲ, ಅದನ್ನು ಗಮನಿಸಿದೆ ಎಂದು ಅಶೋಕ್ ಹೇಳಿದಾಗ, ನೀನು ಧರಿಸಿರುವುದು ಕೇಸರಿ. ನನ್ನ ಬಟ್ಟೆ ಕೇಸರಿ ಅಲ್ಲ ಎಂದು ಸಿದ್ದರಾಮಯ್ಯ ಸ್ಪಷ್ಟನೆ ನೀಡಿದರು. ಈ ಸಂದರ್ಭದಲ್ಲಿ ಬಿಜೆಪಿಯ ಸುರೇಶ್ ಕುಮಾರ್ ಮಾತನಾಡಿ, ಬಟ್ಟೆ ಮುಖ್ಯ ಅಲ್ಲ. ಅದನ್ನು ಧರಿಸುವವರು ಮುಖ್ಯ ಎಂಬುದು ಅಶೋಕ್ ಅವರಿಗೆ ಗೊತ್ತಿಲ್ಲ ಎಂದರು.ಪಾಪ ಸುರೇಶ್ ಕುಮಾರ್ ಬುದ್ಧಿವಂತರು. ಬಿಜೆಪಿಯಲ್ಲಿ ಬುದ್ಧಿವಂತರಿಗೆ ಸೂಕ್ತ ಸ್ಥಾನಮಾನ ಇಲ್ಲ ಎಂದು ಸಿಎಂ ಛೇಡಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ಸುರೇಶ್ ಕುಮಾರ್, ಬಿಜೆಪಿ ಪಕ್ಷ ನನ್ನನ್ನು ಚೆನ್ನಾಗಿ ನೋಡಿಕೊಂಡಿದೆ. ಆರು ಬಾರಿ ಶಾಸಕನಾಗಿದ್ದೇನೆ. ಸಚಿವನಾಗಿಯೂ ಕೆಲಸ ಮಾಡಿದ್ದೇನೆ. ಈಗ ಮುಂದಿನ ಸಾಲಿನಲ್ಲಿ ಕುಳಿತಿದ್ದೇನೆ ಎಂದರು. ಆದರೂ ನಿಮನ್ನು ಸಚಿವ ಸ್ಥಾನದಿಂದ ತೆಗೆದರಲ್ಲ ಎಂದು ಸಿದ್ದರಾಮಯ್ಯ ಕಾಲೆಳೆದರು.

### ಯಾವ ಸಿಎಂ ಕೂಡಾ ರಾಜೀನಾಮೆ ಕೊಡಲಿಲ್ಲ!

ಕಾಲ್ತುಳಿತ ಪ್ರಕರಣಗಳಲ್ಲಿ ಯಾವ ಸಿಎಂ ಸಹ ರಾಜೀನಾಮೆ ಕೊಟ್ಟಿಲ್ಲ. ಯೋಗಿ ಆದಿತ್ಯ ನಾಥ್ ರಾಜೀನಾಮೆ ಕೊಟ್ರಾ? ಅಹಮದಾಬಾದ್ ವಿಮಾನದುರಂತಕ್ಕೆ ಗುಜರಾತ್ ಸಿಎಂ ರಾಜೀನಾಮೆ ಕೊಟ್ರಾ? ಎಂದು ಬಿಜೆಪಿಗೆ ಸಿಎಂ ಪ್ರಶ್ನಿಸಿದರು. ಕಾರ್ಯಕ್ರಮದಲ್ಲಿ ಗೊಂದಲ ಆಯ್ತು ಅಂತ ಬಿಜೆಪಿಯವ್ರು ಆರೋಪಿಸಿದ್ದಾರೆ. ಹೌದು, ಈ ಉನ್ಮಾದ ಇದ್ರೆ ಗೊಂದಲ ಆಗುತ್ತೆ. ನಾವು ಪ್ರಕರಣದಲ್ಲಿ ಕ್ರಮ ತಗೊಂಡಿದ್ದೇವೆ, ಐವರು ಅಧಿಕಾರಿಗಳ ಅಮಾನತ್ತು ಮಾಡಿದ್ದೇವೆ. ಆರ್‌ಸಿಬಿ, ಕೆಎಸ್‌ಸಿಎ, ಡಿಎನ್‌ಎ ವಿರುದ್ಧ ಕ್ರಿಮಿನಲ್ ಕೇಸ್ ಹಾಕಿ ಅವರನ್ನು ಅರೆಸ್ಟ್ ಮಾಡಿಸಿದ್ದೇವೆ ಎಂದು ಸಮರ್ಥನೆ ಮಾಡಿಕೊಂಡರು.



### ಬಿಜೆಪಿ ಟ್ವೀಟ್ ಉಲ್ಲೇಖ

ಆರ್ ಸಿ ಬಿ ಮೆರವಣಿಗೆ ನಿರಾಕರಣೆ ಮಾಡಿದ ನಂತರ ಬಿಜೆಪಿಯವರು ಟ್ವೀಟ್ ಮಾಡುತ್ತಾರೆ. ಪೊಲೀಸರು ಸಭೆ ಮಾಡಿ ತೆರೆದ ಬಸ್ಸಿನಲ್ಲಿ ಮೆರವಣಿಗೆ ಕ್ಯಾನ್ಸಲ್ ಮಾಡುತ್ತಾರೆ. ಹಲವಾರು ವರ್ಷಗಳ ಕನಸ್ಸನ್ನು ಆರ್‌ಸಿಬಿ ನನಸು ಮಾಡಿದೆ. ಆದರೆ ತೆರೆದ ವಿಜಯೋತ್ಸವಕ್ಕೆ ನಿರಾಕರಣೆ ಮೂಲಕ ಗೃಹ ಸಚಿವ ಅಸಮರ್ಥ ಎಂದು ಟ್ವಿಟ್ ಮಾಡಿದ್ದಾರೆ. ಹೀಗಂತ ನಾನು ಹೇಳಿದ್ದಲ್ಲ, ಬಿಜೆಪಿಯವರು ಹೇಳಿದ್ದಾರೆ ಎಂದು ವಿವರಿಸಿದರು.

# ಅಕ್ರಮ ಗಣಿಗಾರಿಕೆಯಿಂದ 80 ಸಾವಿರ ಕೋಟಿ ನಷ್ಟ: ಎಚ್.ಕೆ.ಪಾಟೀಲ್

## ರಾಜ್ಯದಲ್ಲಿ 2006 ರಿಂದ 2012 ರವರೆಗೆ ನಡೆದ ಅಕ್ರಮ ಗಣಿಗಾರಿಕೆಯಿಂದ ವಿದೇಶಕ್ಕೆ ಕಾನೂನು ಬಾಹಿರವಾಗಿ ಕಬ್ಬಿಣ ಅದಿರು ರಫ್ತು

• ಉದಯವಾಹಿನಿ, ಬೆಂಗಳೂರು


ರಾಜ್ಯದಲ್ಲಿ 2006 ರಿಂದ 2012 ರವರೆಗೆ ನಡೆದ ಅಕ್ರಮ ಗಣಿಗಾರಿಕೆಯಿಂದ ವಿದೇಶಕ್ಕೆ ಕಾನೂನು ಬಾಹಿರವಾಗಿ ಕಬ್ಬಿಣ ಅದಿರು ರಫ್ತು ಮಾಡಿದ ಕಾರಣ ಬೊಕ್ಕಸಕ್ಕೆ 80 ಸಾವಿರ ಕೋಟಿ ರೂ. ನಷ್ಟವಾಗಿದೆ ಎಂದು ಸಚಿವ ಎಚ್.ಕೆ.ಪಾಟೀಲ್ ವಿಧಾನಪರಿಷತ್‌ನಲ್ಲಿ ಬಹಿರಂಗಪಡಿಸಿದ್ದಾರೆ.

ವಿಧಾನಸಭೆಯಲ್ಲಿ ಅಂಗೀಕೃತವಾಗಿದ್ದ ಕರ್ನಾಟಕ ಅಕ್ರಮ ಗಣಿಗಾರಿಕೆಯ ಆಸ್ತಿ ವಶಪಡಿಸಿಕೊಳ್ಳಲು ಮತ್ತು ಜಪ್ತಿಗಾಗಿ ವಸೂಲಾತಿ ಆಯುಕ್ತರ ನೇಮಕ ಮಸೂದೆ 2005 ಯನ್ನು ಸಚಿವ ಎಸ್.ಎಸ್.ಮಲ್ಲಿಕಾರ್ಜುನ್ ಪರವಾಗಿ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಚ್.ಕೆ.ಪಾಟೀಲ್ ಮಂಡಿಸಿ ವಿವರಣೆ ನೀಡಿದರು. 2006, 2011 ಮತ್ತು 2012 ರ ವೇಳೆ ರಾಜ್ಯದ ವಿವಿಧೆಡೆ ಕಾನೂನು ಬಾಹಿರವಾಗಿ ಅಕ್ರಮ ಗಣಿಗಾರಿಕೆ ನಡೆಸಲಾಗಿದೆ. ಒಟ್ಟು 80 ಸಾವಿರ ಮೆಟ್ರಿಕ್ ಟನ್ ಕಬ್ಬಿಣದ ಅದಿರನ್ನು ಚೀನಾ, ಪಾಕಿಸ್ತಾನ ಸೇರಿದಂತೆ ಹೊರರಾಷ್ಟ್ರಗಳಿಗೆ ರಫ್ತು ಮಾಡಿದ ಪರಿಣಾಮ 80 ಸಾವಿರ ಕೋಟಿ ರೂ. ನಷ್ಟವಾಗಿದೆ ಎಂಬುದನ್ನು ಒಪ್ಪಿಕೊಂಡರು. ನಿವೃತ್ತ ಲೋಕಾಯುಕ್ತ ನ್ಯಾಯಮೂರ್ತಿ ಎನ್.ಸಂತೋಷ್ ಹೆಗ್ಡೆ ಅವರು ಸರ್ಕಾರಕ್ಕೆ ನೀಡಿದ್ದ ವರದಿಯಲ್ಲಿ ವಿದೇಶಕ್ಕೆ ರಫ್ತು ಮಾಡಿರುವ ಕಬ್ಬಿಣದ ಅದಿರು ಮಾಹಿತಿ ಕುರಿತು ಸವಿಸ್ತಾರ ವರದಿಯನ್ನು ನೀಡಿದ್ದಾರೆ. ಪ್ರತಿ ಮೆಟ್ರಿಕ್ ಟನ್ ಅದಿರಿಗೆ 4,300 ಕೋಟಿ ರೂ.ನಂತೆ ಒಟ್ಟು 80 ಸಾವಿರ ಮೆಟ್ರಿಕ್ ಟನ್ ಅದಿರು ರಫ್ತು ಮಾಡಲಾಗಿದೆ. ಇದನ್ನು ವಶಪಡಿಸಿಕೊಳ್ಳುವುದು ಒಂದು ಜವಾಬ್ದಾರಿಯುತ ಸರ್ಕಾರದ ಆದ್ಯ ಕರ್ತವ್ಯ ಎಂದರು.

**ಚೀನಾ, ಪಾಕಿಸ್ತಾನಕ್ಕೆ ರಫ್ತು**

ಈ ಅವಧಿಯಲ್ಲಿ ಗಣಿಗಾರಿಕೆ ನಡೆಸುವವರು ನಿಯಮಗಳನ್ನು ಸಂಪೂರ್ಣವಾಗಿ ಗಾಳಿಗೆ ತೂರಿದ್ದಾರೆ. ಒಂದು ಕಾಲದಲ್ಲಿ ರಾಜ್ಯಪಾಲರ ಕಾರು ಮತ್ತು ಅವರ ಬೆಂಗಾವಲು ವಾಹನಗಳು ಹೋಗುತ್ತಿದ್ದ ವೇಳೆ ಅದನ್ನು ಲೆಕ್ಕಿಸದೆ ಲಾರಿಯು ಸಾಗಾಣಿಕೆ ನಡೆಸಿರುವ ನಿದರ್ಶನವಿದೆ. ಇದು ನಾವು ಕಡಿವಾಣ ಹಾಕದಿದ್ದರ ಪರಿಣಾಮ ಎಂದು ವಿಷಾದಿಸಿದರು.

ಈ ವಿಧೇಯಕದ ಬಗ್ಗೆ ಸಚಿವ ಸಂಪುಟ ಸಭೆ ಹಾಗೂ ಸಚಿವ ಸಂಪುಟದ ಉಪಸಮಿತಿಯಲ್ಲೂ ಸುದೀರ್ಘವಾಗಿ ಚರ್ಚೆ ಮಾಡಲಾಗಿದೆ. ಸರ್ಕಾರದ ಬೊಕ್ಕಸಕ್ಕೆ ನಷ್ಟ ಮಾಡಿರುವುದನ್ನು ಉಸಿ ಮಾಡಲೇಬೇಕು. ಇದರಲ್ಲಿ ರಾಜಿಯಾಗುವ ಪ್ರಶ್ನೆಯೇ ಇಲ್ಲ ಎಂದು ಸ್ಪಷ್ಟಪಡಿಸಿದರು.ಈ ವಿಧೇಯಕದ ಮೇಲೆ ಸದಸ್ಯರಾದ ಐವಾನ್ ಡಿಸೋಜ, ಟಿ.ಎ.ಶರವಣ, ವೈ.ಎಂ.ಸತೀಶ್ ಮತ್ತಿತರ ಸದಸ್ಯರು ಮಾತನಾಡಿ ಸರ್ಕಾರಕ್ಕೆ ಕೆಲವು ಸಲಹೆಗಳನ್ನು ನೀಡಿದರು.



ಅಕ್ರಮ ಗಣಿಗಾರಿಕೆಯ ಆಸ್ತಿ ವಶಪಡಿಸಿಕೊಳ್ಳಲು ಮತ್ತು ಜಪ್ತಿಗಾಗಿ ವಸೂಲಾತಿ ಆಯುಕ್ತರ ನೇಮಕ ಮಸೂದೆ 2005, ಅಕ್ರಮ ಗಣಿಗಾರಿಕೆ ಚಟುವಟಿಕೆಗಳಿಂದ ಪಡೆದ ಆಸ್ತಿಗಳನ್ನು ವಶಪಡಿಸಿಕೊಳ್ಳಲು, ಜಪ್ತಿ ಮಾಡಲು ಆಯುಕ್ತರ ನೇಮಕಕ್ಕೆ ಅವಕಾಶ ನೀಡುತ್ತದೆ. ವಸೂಲಾತಿ ಪ್ರಕ್ರಿಯೆಗಳನ್ನು ಮೇಲ್ವಿಚಾರಣೆ ಮಾಡಲು ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಶ್ರೇಣಿಗಿಂತ ಕಡಿಮೆಯಿಲ್ಲದ ಸೇವೆಯಲ್ಲಿರುವ ಅಥವಾ ನಿವೃತ್ತ ಅಧಿಕಾರಿಯನ್ನು ವಸೂಲಾತಿ ಕಮಿಷನರ್ ಆಗಿ ನೇಮಿಸಲಾಗುತ್ತದೆ. ರಾಜ್ಯದಲ್ಲಿ ಲೆಕ್ಕವಿಲ್ಲದಷ್ಟು ಗುತ್ತಿಗೆದಾರರು, ಸಾಗಾಣಿಕೆದಾರರು, ರಫ್ತುದಾರರು, ದಾಸ್ತಾನು ಧಾರಕರು, ಖರೀದಿದಾರರು ಮತ್ತು ಮಧ್ಯವರ್ತಿಗಳು ಸೇರಿದಂತೆ ಬಹು ವಹಿವಾಟುಗಳಿಂದ ಅಕ್ರಮ ಗಣಿಗಾರಿಕೆ ಚಟುವಟಿಕೆಗಳು ನಡೆದಿವೆ. ಅದು ವ್ಯವಸ್ಥಿತ ಒಳಸಂಚು ಹೊಂದಿರುವ ಸಂಘಟಿತ ಅಪರಾಧ. ಇದರಿಂದ ಸರ್ಕಾರಕ್ಕಾಗಿರುವ ನಷ್ಟದ ವಸೂಲಾತಿಗೆ ವಿಧೇಯಕ ಜಾರಿಗೊಳಿಸಲಾಗುತ್ತಿದೆ.

ಇದಕ್ಕಾಗಿ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ದರ್ಜೆಗಿಂತ ಕಡಿಮೆಯಿಲ್ಲದ, ಸೇವೆಯಲ್ಲಿರುವ ಅಥವಾ ನಿವೃತ್ತ ಅಧಿಕಾರಿಯನ್ನು ವಸೂಲಾತಿ ಆಯುಕ್ತರನ್ನಾಗಿ ನೇಮಕ ಮಾಡಲು ಅವಕಾಶ ಕಲ್ಪಿಸಿಕೊಳ್ಳಲಾಗಿದೆ. ನೇಮಕವಾಗುವ ವಸೂಲಾತಿ ಆಯುಕ್ತರು ಅಕ್ರಮ ಗಣಿಗಾರಿಕೆಯಲ್ಲಿ ಪಾಲ್ಗೊಂಡವರ ಚರ ಮತ್ತು ಸ್ಥಿರಾಸ್ತಿಗಳ ಜಪ್ತಿ ಅಥವಾ ಮುಟ್ಟುಗೋಲು ವಸಲಾತಿ ಕಾರ್ಯಾಚರಣೆಗಳ ಮೇಲೆ ಒಟ್ಟಾರೆ ಮೇಲ್ವಿಚಾರಣಾ ಅಧಿಕಾರವನ್ನು ಹೊಂದಿರುತ್ತಾರೆ. ಅದರ ಜತೆಗೆ ಅಕ್ರಮ ಗಣಿಗಾರಿಕೆಗೆ ಸಂಬಂಧಿಸಿದಂತೆ ಬರುವ ದೂರುಗಳನ್ನು, ದಾಖಲೆ, ವರದಿಯನ್ನು ಪರಿಶೀಲಿಸಬೇಕು. ಅಲ್ಲದೆ, ಸ್ವತ್ತುಗಳ ಜಪ್ತಿಗೆ ಹೊರಡಿಸುವ ಎಲ್ಲಾ ಮುಟ್ಟುಗೋಲು ಆದೇಶಗಳನ್ನು ರಾಜ್ಯ ಸರ್ಕಾರದಿಂದ ದೃಢೀಕರಿಸಿಕೊಳ್ಳಬೇಕು. ಅದರ ಜತೆಗೆ ಜಪ್ತಿ ಅಥವಾ ಮುಟ್ಟುಗೋಲಿಗೂ ಮುನ್ನ ಕಾನೂನು ಪ್ರಕಾರ ಸೂಚನೆಗಳನ್ನು ಪಾಲಿಸಬೇಕು ಎಂಬ ನಿಯಮ ವಿಧೇಯಕದಲ್ಲಿದೆ.

> ಈ ಹಿಂದೆ ಷೇರು ಮಾರುಕಟ್ಟೆಯಲ್ಲಿ ಸಾವಿರಾರು ಕೋಟಿ ವಂಚನೆ ಮಾಡಿದ ಹರ್ಷದ್ ಮೆಹ್ತಾ ಪ್ರಕರಣವನ್ನು ತನಿಖೆ ಮಾಡಿಸಿದಾಗ 7 ಸಾವಿರ ಕೋಟಿ ರೂ.ಗಳನ್ನು ವಶಪಡಿಸಿಕೊಳ್ಳಲಾಯಿತು. ಈಗ ಅಕ್ರಮ ಗಣಿಗಾರಿಕೆ ನಡೆಸಿರುವವರ ಮೇಲೂ ಕಾನೂನು ಪ್ರಕಾರ ಕ್ರಮ ಕೈಗೊಂಡು ವಶಪಡಿಸಿಕೊಳ್ಳಬೇಕು. ಇದಕ್ಕಾಗಿ ಈ ವಿಧೇಯಕವನ್ನು ಜಾರಿಗೆ ತಂದಿದ್ದೇವೆ
>
> –ಎಚ್.ಕೆ.ಪಾಟೀಲ್, ಸಚಿವ

### ವಿಧೇಯಕ ಅನುಮೋದನೆ

ಅಕ್ರಮ ಗಣಿಗಾರಿಕೆ ಮತ್ತು ಅಪರಾಧದ ಉತ್ಪತ್ತಿಗಳಿಂದಾದ ಸ್ವತ್ತನ್ನು ವಶಪಡಿಸಿಕೊಳ್ಳುವುದು ಮತ್ತು ಜಪ್ತಿಗಾಗಿ ವಸೂಲಿ ಆಯುಕ್ತರನ್ನು ನೇಮಿಸುವ ಸಂಬಂಧಪಟ್ಟ ವಿಧೇಯಕಕ್ಕೆ ವಿಧಾನಪರಿಷತ್‌ನಲ್ಲಿ ಅನುಮೋದನೆ ನೀಡಲಾಯಿತು. ಅಕ್ರಮ ಗಣಿಗಾರಿಕೆ ಮತ್ತು ಅಪರಾಧದ ಉತ್ಪತ್ತಿಗಳಿಂದಾದ ಸ್ವತ್ತನ್ನು ವಶ ಪಡಿಸಿಕೊಳ್ಳುವುದಕ್ಕಾಗಿ ಮತ್ತು ಜಪ್ತಿಗಾಗಿ ವಸೂಲಿ ಆಯುಕ್ತರನ್ನು ನೇಮಿಸುವ ಸಂಬಂಧಪಟ್ಟ ವಿಧೇಯಕ ಇದಾಗಿದೆ.

**ಈ ದಿನದ ದರ** | ಪೆಟ್ರೋಲ್: 103.50 ₹/L | ಡೀಸೆಲ್ : 90.03 ₹/L | ಬಂಗಾರ: ₹10,053/Gram(24ct) ₹9,215/Gram(22ct) | ಬೆಳ್ಳಿ: ₹118.00/Gram

# ನವೆಂಬರ್ ಹೊತ್ತಿಗೆ ವಾರ್ಡ್ ಮರುವಿಂಗಡಣೆಗೆ ಚಾಲನೆ

## ಬಿಬಿಎಂಪಿ ಎಲೆಕ್ಷನ್ ನಡೆಸುವಂತೆ ಚುನಾವಣಾ ಆಯೋಗಕ್ಕೆ ಸರ್ಕಾರ ಮನವಿ

• ಉದಯವಾಹಿನಿ, ಬೆಂಗಳೂರು

ಪಾಲಿಕೆ ಚುನಾವಣೆಗೆ ಸಿದ್ಧತೆ ಮಾಡಿಕೊಳ್ಳುವಂತೆ ಚುನಾವಣಾ ಆಯೋಗಕ್ಕೆ ಪತ್ರ ಬರೆಯಲಾಗಿದೆ. ನವೆಂಬರ್ 1ರ ವೇಳೆಗೆ ವಾರ್ಡ್ ಮರುವಿಂಗಡಣೆ ಪ್ರಕ್ರಿಯೆ ನಡೆಯಲಿದೆ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದ್ದಾರೆ. ವಿಧಾನ ಪರಿಷತ್‌ನ ಪ್ರಶ್ನೋತ್ತರ ಕಲಾಪದಲ್ಲಿ ಸದಸ್ಯ ಟಿ.ಎನ್. ಜವರಾಯಿಗೌಡ ಅವರು ಗ್ರೇಟರ್ ಬೆಂಗಳೂರು ಆಡಳಿತ ಕಾಯಿದೆ- 2024ರ ಜಾರಿ ವಿಚಾರವಾಗಿ ಕೇಳಿದ ಪ್ರಶ್ನೆಗೆ ಅವರು ಉತ್ತರಿಸುವಾಗ ಈ ವಿಚಾರ ತಿಳಿಸಿದರು. ಈ ಮೂಲಕ, ಹಲವಾರು ವರ್ಷಗಳಿಂದ ನೆನೆಗುದಿಗೆ ಬಿದ್ದಿರುವ ಬೆಂಗಳೂರು ಮಹಾನಗರ ಪಾಲಿಕೆ ಚುನಾವಣೆಗೆ ಕಾಲ ಕೂಡಿಬಂದಂತಾಗಿದೆ..

ಮೇ 15ರಂದು ಗ್ರೇಟರ್ ಬೆಂಗಳೂರು ಪ್ರಾಧಿಕಾರ (ಜಿಬಿಎ) ಕಾಯಿದೆ ಜಾರಿಗೊಳಿಸಿದ್ದು, ಬಿಬಿಎಂಪಿ ವ್ಯಾಪ್ತಿಯ ಪ್ರದೇಶವನ್ನು ಗ್ರೇಟರ್ ಬೆಂಗಳೂರು ಪ್ರಾಕಾರದ ವ್ಯಾಪ್ತಿಗೆ ಸೇರಿಸಲಾಗಿದೆ. ಜುಲೈ 19ರಂದು ಐದು ಪಾಲಿಕೆಗಳನ್ನು ರಚಿಸಿ, ಆಗಸ್ಟ್ 18ರವರೆಗೆ ಆಕ್ಷೇಪಣೆಗೆ ಕಾಲಾವಕಾಶ ನೀಡಲಾಗಿತ್ತು. ದಾಸರಹಳ್ಳಿ, ಆರ್‌ಆರ್ ನಗರ, ಪದ್ಮನಾಭನಗರ, ಮಹದೇವಪುರ, ಯಶವಂತಪುರ ಸೇರಿದಂತೆ ಕೆಲವು ವಿಧಾನಸಭಾ ಕ್ಷೇತ್ರಗಳು ಇಬ್ಭಾಗವಾಗಿರುವುದು ನಿಜ. ಇನ್ನೂ ಕೆಲವು ಪ್ರದೇಶಗಳನ್ನು ಮುಂದಿನ ದಿನಗಳಲ್ಲಿಸೇರಿಸಬೇಕಿದೆ, ಎಂದು ಸ್ಪಷ್ಟಪಡಿಸಿದರು.


ಉದಯವಾಹಿನಿ ಚಿತ್ರ

ಸೆಪ್ಟೆಂಬರ್ 1ರಿಂದ ವಾರ್ಡ್‌ಗಳ ಪುನರ್ ವಿಂಗಡಣೆ ನಡೆಯಲಿದೆ. ಅದಕ್ಕಾಗಿ ಪಾಲಿಕೆ ಆಯುಕ್ತರ ನೇತೃತ್ವದ ಪ್ರತ್ಯೇಕ ತಂಡವಿದೆ. ವಾರ್ಡ್‌ಗಳ ರಚನೆ ಬಗ್ಗೆ ಪುನರ್ ವಿಂಗಡಣೆ ಬಳಿಕ ಅಸೂಚನೆ ಹೊರಡಿಸಲಾಗುವುದು, ಎಂದು ವಿವರಿಸಿದರು.

**ಡಿಸೆಂಬರ್ ನಲ್ಲಿ ಬೆಂಗಳೂರಿನ 5 ಪಾಲಿಕೆಗಳಿಗೆ ಚುನಾವಣೆ?**

ಡಿಸೆಂಬರ್ ವೇಳೆಗೆ 6 ವರ್ಷಗಳಿಂದ ಮುಂದೂಡಲ್ಪಟ್ಟಿರುವ ಬಿಬಿಎಂಪಿ ಚುನಾವಣೆ ನಡೆಯುವ ಸಾಧ್ಯತೆ ಇದೆ. ಈಗಾಗಲೇ ಗ್ರೇಟರ್ ಬೆಂಗಳೂರು ವ್ಯಾಪ್ತಿಯನ್ನು 5 ಪಾಲಿಕೆಗಳಾಗಿ ವಿಭಜಿಸುವ ಕುರಿತ ಕರಡು ಅಧಿಸೂಚನೆ ಹೊರಡಿಸಲಾಗಿದೆ. ಜನರಿಂದ ಆಕ್ಷೇಪಣೆಗಳನ್ನು ಸ್ವೀಕರಿಸಿದ ನಂತರ ವಾರ್ಡ್‌ಗಳ ವಿಂಗಡಣೆ ಮತ್ತು ಮೀಸಲಾತಿ ಹಂಚಿಕೆ ಪ್ರಕ್ರಿಯೆ ಪೂರ್ಣಗೊಂಡ ಬಳಿಕ ಡಿಸೆಂಬರ್‌ನಲ್ಲಿ ಚುನಾವಣೆಯನ್ನು ನಡೆಸುವ ಸಾಧ್ಯತೆ ಇದೆ ಎಂದು ತಿಳಿಸಲಾಗಿದೆ.

**ಸುಪ್ರೀಂ ಕೋರ್ಟ್‌ಗೆ ರಾಜ್ಯ ಸರ್ಕಾರದಿಂದ ಪ್ರಮಾಣಪತ್ರ**

ಬಿಬಿಎಂಪಿ ಚುನಾವಣೆ ನಡೆಸುವ ಬಗ್ಗೆ ಇದೇ ಜುಲೈ 29ರಂದು ಕರ್ನಾಟಕ ಸರ್ಕಾರವು ಸುಪ್ರೀಂ ಕೋರ್ಟ್‌ಗೆ ಪ್ರಮಾಣಪತ್ರವನ್ನು ಸಲ್ಲಿಸಿದೆ. ಬೆಂಗಳೂರಿನ ಮಹಾನಗರ ಪಾಲಿಕೆಯನ್ನು ಐದು ಭಾಗಗಳಾಗಿ ವಿಭಜಿಸಿ ಹೊಸ ಗಡಿಗಳನ್ನು ಗುರುತಿಸಲಾಗಿದೆ ಎಂದು ಸರ್ಕಾರ ತಿಳಿಸಿದೆ. ಡಿಸೆಂಬರ್‌ನಲ್ಲಿ ಚುನಾವಣೆ ನಡೆಸಲು ತಾವು ಸಿದ್ಧರಾಗಿರುವುದಾಗಿ ಸರ್ಕಾರವು ನ್ಯಾಯಾಲಯಕ್ಕೆ ಸ್ಪಷ್ಟಪಡಿಸಿದೆ. ಈಗಾಗಲೇ ಆಕ್ಷೇಪಣೆಗಳನ್ನು ಸಲ್ಲಿಸಲು ಅವಕಾಶ ಕಲ್ಪಿಸಲಾಗಿದ್ದು, ನವೆಂಬರ್ 1ರೊಳಗೆ ಅಂತಿಮ ಅಧಿಸೂಚನೆ ಹೊರಡಿಸಲಾಗುವುದು. ನಂತರ ವಾರ್ಡ್‌ಗಳಿಗೆ ಮೀಸಲಾತಿ ನಿಗದಿಪಡಿಸಿ, ನವೆಂಬರ್ ಅಂತ್ಯದ ವೇಳೆಗೆ ಪ್ರಕ್ರಿಯೆ ಪೂರ್ಣಗೊಳ್ಳಲಿದೆ ಎಂದು ವರದಿಯಾಗಿದೆ.

### ಐದು ಪಾಲಿಕೆಗಳ ಚುನಾವಣೆಗೆ ಅಧಿಸೂಚನೆ

**ಇದೇ ಆಗಸ್ಟ್ 9ರಂದು ರಾಜ್ಯ ಸರ್ಕಾರವು ಹೊಸದಾಗಿ ರಚನೆಯಾದ ಐದು ನಗರ ಪಾಲಿಕೆಗಳಿಗೆ ಚುನಾವಣೆ ನಡೆಸುವ ಉದ್ದೇಶದಿಂದ ಗ್ರೇಟರ್ ಬೆಂಗಳೂರು ಆಡಳಿತ (ಚುನಾವಣೆ) ನಿಯಮಗಳು-2025 ಕರಡು ಅಧಿಸೂಚನೆಯನ್ನು ಹೊರಡಿಸಿದೆ. ಈ ಚುನಾವಣೆ ಚುನಾವಣಾ ಆಯೋಗದ ಮೇಲ್ವಿಚಾರಣೆಯಡಿಯಲ್ಲಿ ನಡೆಯಲಿದ್ದು, ಆಯುಕ್ತರು ಚುನಾವಣಾ ಆಯೋಗದೊಂದಿಗೆ ಸಮನ್ವಯ ಸಾಧಿಸುವಂತೆ ಸೂಚಿಸಲಾಗಿದೆ. ನಾಮಪತ್ರಗಳ ಸ್ವೀಕಾರ, ಪರಿಶೀಲನೆ, ಅಭ್ಯರ್ಥಿಗಳ ಪಟ್ಟಿ ಸಿದ್ಧಪಡಿಸುವುದು ಸೇರಿದಂತೆ ಹಲವು ಕಾರ್ಯವಿಧಾನಗಳನ್ನು ಈ ನಿಯಮಗಳಲ್ಲಿ ವಿವರಿಸಲಾಗಿದೆ.**

# ಕಾಂಗ್ರೇಸ್ ನಾಯಕಿ ಕುಸುಮಾ ನಿವಾಸ ಮೇಲೆ ಇಡಿ ದಾಳಿ

• ಉದಯವಾಹಿನಿ, ಬೆಂಗಳೂರು

ಅತ್ತ ಕಾಂಗ್ರೆಸ್ ಶಾಸಕ ಕೆ ಸಿ ವೀರೇಂದ್ರ ನಿವಾಸ ಮೇಲೆ ಇಡಿ ದಾಳಿ ನಡೆಯುತ್ತಿದ್ದಂತೆ ಇತ್ತ ಇಂದು ಬೆಳ್ಳಂಬೆಳಗ್ಗೆ ಬೆಂಗಳೂರಿನ ರಾಜರಾಜೇಶ್ವರಿನಗರದ ಕಾಂಗ್ರೆಸ್ ನಾಯಕಿ ಕುಸುಮಾ ಮನೆ ಮೇಲೆ ಇಡಿ ದಾಳಿ ನಡೆಸಿದೆ. ಕಾಂಗ್ರೆಸ್ ಶಾಸಕ ವೀರೇಂದ್ರ ಪಪ್ಪಿ ಅವರೊಂದಿಗೆ ಆರ್ಥಿಕ ವ್ಯವಹಾರ ಹೊಂದಿದ್ದ ಹಿನ್ನೆಲೆ ದಾಳಿ ನಡೆಸಲಾಗಿದ್ದು, ಬೆಳಗ್ಗೆಯಿಂದಲೇ ಇಡಿ ಶೋಧ ಆರಂಭಿಸಿದೆ.



**16 ಕಡೆ ಇಡಿ ದಾಳಿ:** ಬೆಂಗಳೂರು, ಚಳ್ಳಕೆರೆ, ಚಿತ್ರದುರ್ಗ ಹಾಗೂ ಗೋವಾ ಸೇರಿದಂತೆ 16 ಕಡೆಗಳಲ್ಲಿ ಇಂದು ಬೆಳ್ಳಂಬೆಳಗ್ಗೆ ಇಡಿ ಅಧಿಕಾರಿಗಳು ದಾಳಿ ನಡೆಸಿದ್ದಾರೆ. ಕಾಂಗ್ರೆಸ್ ಶಾಸಕ ವಿರೇಂದ್ರ ಪಪ್ಪಿ ಅವರಿಗೆ ಸೇರಿದ ಚಿತ್ರದುರ್ಗ ಮತ್ತು ಬೆಂಗಳೂರಿನ ಪ್ರೆಸ್ಟೀಜ್ ಎಡ್ವರ್ಡಿಯನ್ ಅಪಾರ್ಟ್ಮೆಂಟ್ ಫ್ಲಾಟ್ ಸೇರಿದಂತೆ ನಾಲ್ಕು ಮನೆಗಳ ಮೇಲೆ ಇಡಿ ತಂಡ ದಾಳಿ ನಡೆಸಿದೆ. ಅಕ್ರಮ ಹಣ ವರ್ಗಾವಣೆ, ವೀರೇಂದ್ರ ಪಪ್ಪಿ ಒಡೆತನದ ಕಂಪನಿಗಳಿಂದ ಗೇಮಿಂಗ್ ಆಪ್‌ಗಳಿಗೆ ಅಕ್ರಮ ಹಣ ವರ್ಗಾವಣೆ ಆರೋಪದ ಮೇಲೆ ಪಪ್ಪಿ ಮನೆಗಳ ಮೇಲೆ ಇಡಿ ದಾಳಿ ನಡೆಸಿದೆ.

# ಬೂಕರ್ ಪ್ರಶಸ್ತಿ ವಿಜೇತೆ ಬಾನು ಮುಷ್ತಾಕ್ ರಿಂದ ಮೈಸೂರು ದಸರಾ ಉದ್ಘಾಟನೆ

• ಉದಯವಾಹಿನಿ, ಬೆಂಗಳೂರು

ಪ್ರತಿಷ್ಠಿತ ಬೂಕರ್ ಪ್ರಶಸ್ತಿ ವಿಜೇತರಾದ ಬಾನು ಮುಷ್ತಾಕ್ ಅವರು ಈ ಬಾರಿ ವಿಶ್ವವಿಖ್ಯಾತ ಮೈಸೂರು ದಸರಾವನ್ನು ಉದ್ಘಾಟಿಸಲಿದ್ದಾರೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಘೋಷಿಸಿದ್ದಾರೆ. ವಿಧಾನಸೌಧದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಸಿಎಂ ಸಿದ್ದರಾಮಯ್ಯ ಅವರು, ಬಾನು ಮುಷ್ತಾಕ್ ಅವರ ಹೃದಯ ದೀಪ' ಕೃತಿಗೆ ಬೂಕರ್ ಪ್ರಶಸ್ತಿ ಸಿಕ್ಕಿದೆ. ಕರ್ನಾಟಕದ ಮಹಿಳೆಗೆ ಬೂಕರ್ ಸಿಕ್ಕಿದ್ದು ಬಹಳ ಸಂತೋಷವಾಗಿದೆ. ಹೋರಾಟದ ಹಿನ್ನೆಲೆಯಿಂದ ಬಂದವರು ಬಾನು ಮುಷ್ತಾಕ್. ರೈತ ಮತ್ತು ಕನ್ನಡ ಚಳವಳಿಯಲ್ಲೂ ಕೆಲಸ ಮಾಡಿದ್ದಾರೆ. ಹೀಗಾಗಿ ಅವರನ್ನು ದಸರಾ ಮಹೋತ್ಸವದ ಉದ್ಘಾಟನೆಗೆ ಆಹ್ವಾನಿಸಿದ್ದೇವೆ ಎಂದರು. ಈ ಬಾರಿ ಮೈಸೂರು ದಸರಾ ಸೆ. 22ರಿಂದ ಅಕ್ಟೋಬರ್ 2ರವರೆಗೆ 11 ದಿನಗಳ ಕಾಲ ನಡೆಯಲಿದ್ದು, ಉದ್ಘಾಟನೆಗೆ ಮೈಸೂರು ಜಿಲ್ಲಾಡಳಿತವು, ಕನ್ನಡದ ಲೇಖಕಿ ಬಾನು ಮುಷ್ತಾಕ್ ಅವರನ್ನು ಗೌರವದಿಂದ ಅಧಿಕೃತವಾಗಿ ಆಹ್ವಾನಿಸಲಿದೆ ಎಂದು ಸಿಎಂ ತಿಳಿಸಿದರು.

# ರಾಹುಲ್ ಗಾಂಧಿ ಮತದಾರರ ಅಧಿಕಾರ ಯಾತ್ರೆ: ಆ. 29 ರಂದು ಸಿಎಂ ಭಾಗಿ

• ಉದಯವಾಹಿನಿ, ಬೆಂಗಳೂರು

ಬಿಹಾರದಲ್ಲಿ ಮತ ಕಳ್ಳತನ ಮತ್ತು ವಿಶೇಷ ತೀವ್ರ ಪರಿಷ್ಕರಣೆ ವಿರುದ್ಧ ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಮತದಾರ ಅಧಿಕಾರ ಯಾತ್ರೆ ನಡೆಸುತ್ತಿದ್ದಾರೆ. ಸಸರಾಂನಿಂದ ಆರಂಭವಾಗಿರುವ ಯಾತ್ರೆ 16 ದಿನಗಳ ಕಾಲ ನಡೆಯಲಿದ್ದು, ಸುಮಾರು 1,300 ಕಿಲೋ ಮೀಟರ್ ದೂರ ಕ್ರಮಿಸಲಿದೆ. ಬಿಹಾರದ 25 ಕ್ಕೂ ಹೆಚ್ಚು ಜಿಲ್ಲೆಗಳ ಮೂಲಕ ಇದು ಹಾದುಹೋಗಲಿದ್ದು, ಸೆಪ್ಟೆಂಬರ್ 1 ರಂದು ಪಾಟ್ನಾದಲ್ಲಿ ಮುಕ್ತಾಯಗೊಳ್ಳಲಿದೆ. ಈ ಯಾತ್ರೆಯಲ್ಲಿ ಕರ್ನಾಟಕದ ಮುಖ್ಯಮಂತ್ರಿ ಸಿದ್ದರಾಮಯ್ಯ ಕೂಡಾ ಭಾಗವಹಿಸಲಿದ್ದಾರೆ. ಈ ಕುರಿತು ಸುದ್ದಿಗಾರರೊಂದಿಗೆ ಮಾತನಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಆಗಸ್ಟ್ 29 ರಂದು ಬಿಹಾರಕ್ಕೆ ತೆರಳಲಿದ್ದು, ರಾಹುಲ್ ಗಾಂಧಿ ಅವರ ಮತದಾರರ ಅಧಿಕಾರ ಯಾತ್ರೆಯಲ್ಲಿ ಪಾಲ್ಗೊಳ್ಳುವುದಾಗಿ ತಿಳಿಸಿದರು. ಇದೇ ವೇಳೆ ಈ ಬಾರಿಯ ವಿಶ್ವ ವಿಖ್ಯಾತ ಮೈಸೂರು ದಸರಾ ಮಹೋತ್ಸವನ್ನು ಬೂಕರ್ ಪ್ರಶಸ್ತಿ ಪುರಸ್ಕೃತ ಸಾಹಿತಿ ಬಾನು ಮುಷ್ತಾಕ್ ಉದ್ಘಾಟಿಸಲಿದ್ದಾರೆ ಎಂದು ಮುಖ್ಯಮಂತ್ರಿ ತಿಳಿಸಿದರು. ಸೆಪ್ಟೆಂಬರ್ 22 ರಂದು ಆರಂಭವಾಗಲಿದ್ದು, ಅಕ್ಟೋಬರ್ 2ರವರೆಗೂ ಈ ಬಾರಿ 11 ದಿನಗಳ ಕಾಲ ದಸರಾ ಮಹೋತ್ಸವ ನಡೆಯಲಿದೆ. ಕೇಂದ್ರ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರನ್ನು ಆಹ್ವಾನಿಸಲಾಗಿದೆ ಎಂದು ಮುಖ್ಯಮಂತ್ರಿ ಹೇಳಿದರು.

# 500 ಕಂಟೋರಾ ಎಕ್ಸಿಮರ್ ಲೇಸರ್ ಹೊಸ ಮಶಿನ್ ಬಿಡುಗಡೆ



ಉದಯವಾಹಿನಿ ಚಿತ್ರ

• ಉದಯವಾಹಿನಿ,ಕೆ.ಆರ್.ಪುರ

ಹೆಚ್ಚು ಸಮಯ ಸ್ಕ್ರೀನ್ ವೀಕ್ಷಣೆ ಮತ್ತು ಹೊರಾಂಗಣ ಚಟುವಟಿಕೆ ಕಡಿಮೆಯಾದ ಕಾರಣ ಮೈಯೋಪಿಯಾ ಮತ್ತು ಆಸ್ಟಿಗ್ಮ್ಯಾಟಿಸಂ ಪ್ರಕರಣಗಳು ಹೆಚ್ಚುತ್ತಿವೆ ಎಂದು . ಡಾ. ಅಗರ್ವಾಲ್ಸ್ ಕಣ್ಣಿನ ಆಸ್ಪತ್ರೆಯ ಕ್ಲಿನಿಕಲ್ ಸೇವೆಗಳ ಮುಖ್ಯಸ್ಥ ಡಾ. ಅಮೋದ್ ನಾಯಕ್ ತಿಳಿಸಿದರು.

ಮಹದೇವಪುರ ಕ್ಷೇತ್ರದ ವೈಟ್ ಫೀಲ್ಡ್ ರಸ್ತೆಯಲ್ಲಿರುವ ಅಗರ್ವಾಲ್ ಕಣ್ಣಿನ ಆಸ್ಪತ್ರೆಯಲ್ಲಿ ವೇವ್‌ಲೈಟ್ ಇಂಗ್ಸ್ಯ 500 ಕಂಟೋರಾ ಎಕ್ಸಿಮರ್ ಲೇಸರ್ ಎಂಬ ಹೊಸ ಮಶಿನ್ ಬಿಡುಗಡೆ ಮಾಡಿ ಮತನಾಡಿದ ಅವರು. ಹೆಚ್ಚು ಸ್ಕೀನ್ ನೋಡುವ ಮಕ್ಕಳು, ಯುವಕರು ಮತ್ತು ಐಟಿ ವೃತ್ತಿಪರರಲ್ಲಿ ಮಯೋಪಿಯಾ ಮತ್ತು ಆಸ್ಟಿಗ್ಮಾಟಿಸಂ ನಂತಹ ರಿಫ್ರಾಕ್ಟಿವ್ ಪ್ರಕರಣಗಳ ಆತಂಕಕಾರಿ ಹೆಚ್ಚಳಕ್ಕೆ ಬೆಂಗಳೂರು ಸಾಕ್ಷಿಯಾಗಿದೆ ಎಂದು ಹೇಳಿದರು. ವಿಷನ್ ಟೆಕ್ನಾಲಜಿಯನ್ನು ಪರಿಚಯಿಸಲಾಗಿದ್ದು, ಟೋಪೋಗ್ರಫಿ ಮಾರ್ಗದರ್ಶಿತ ಲಸಿಕ್ ಸಿಸ್ಟಮ್ ಆಗಿದೆ. ಇದು ಅಧಿಕ ನಿಖರ ಮತ್ತು ಕಸ್ಟಮೈಸ್ ಮಾಡಿದ ಚಿಕಿತ್ಸೆಗಳನ್ನು ನೀಡುವ ಮೂಲಕ ಸ್ಪಷ್ಟ ದೃಷ್ಟಿಯನ್ನು ಪಡೆಯಲು ರೋಗಿಗಳಿಗೆ ಸಹಾಯ ಮಾಡುತ್ತದೆ ಎಂದರು. ಕಾರ್ನಿಯಾ ಮತ್ತು ರಿಫ್ರಾಕ್ಟಿವ್ ಐ ಸರ್ಜನ್ ಆಗಿರುವ ಡಾ. ಸಂಜನಾ ಮಾತನಾಡಿ, ಡಿಜಿಟಲ್ ಸ್ಕ್ರೀನ್ ನೋಡುವ ಸಮಯ ಹೆಚ್ಚುತ್ತಿರುವುದು, ಶೈಕ್ಷಣಿಕ ಮತ್ತು ಕಾರ್ಯದ ಒತ್ತಡದಿಂದಾಗಿ ಈ ಪ್ರಕರಣಗಳಲ್ಲಿ ಹೆಚ್ಚಳ ಕಾಣುತ್ತಿದೆ. ಇದಕ್ಕೆ ಸೂಕ್ತ ಚಿಕಿತ್ಸೆ ಪಡೆಯಬಹುದು ಎಂದು ನುಡಿದರು.

# DCET: ಅಂತಿಮ ಸುತ್ತಿನ ಫಲಿತಾಂಶ ಪ್ರಕಟ-ಕೆಇಎ

• ಉದಯವಾಹಿನಿ, ಬೆಂಗಳೂರು

ಪ್ರಸಕ್ತ ಸಾಲಿನ DCET ಮೂರು ಹಾಗೂ ಅಂತಿಮ ಸುತ್ತಿನ ಸೀಟು ಹಂಚಿಕೆಯ ಫಲಿತಾಂಶವನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಪ್ರಕಟಿಸಿದೆ. ಆ.25ರಿಂದ 27ರವರೆಗೆ ಚಲನ್ ಡೌನ್‌ಲೋಡ್ ಮಾಡಿಕೊಂಡು, ಆ.28ರೊಳಗೆ ಶುಲ್ಕ ಪಾವತಿಸುವುದು. ಕಾಷನ್ ಡೆಪಾಸಿಟ್ ಕಟ್ಟಿದವರ ಹಣವನ್ನು ಶುಲ್ಕದ ಜತೆ ಹೊಂದಾಣಿಕೆ ಮಾಡಿಕೊಳ್ಳಲಾಗುವುದು ಎಂದು ಅವರು ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ. ಸೀಟು ಖಾತರಿ ಚೀಟಿಯನ್ನು ಆ.29ರೊಳಗೆ ಡೌನ್‌ಲೋಡ್ ಮಾಡಿಕೊಂಡು ಆ.30ರೊಳಗೆ ಸಂಬಂಧಪಟ್ಟ ಕಾಲೇಜುಗಳಿಗೆ ವರದಿ ಮಾಡಿ ಕೊಳ್ಳಬೇಕು ಎಂದು ಅವರು ಮಾಹಿತಿ ನೀಡಿದ್ದಾರೆ. ಕೊನೆ ಸುತ್ತಿನಲ್ಲಿ ಒಟ್ಟು 860 ಮಂದಿಗೆ ವಿವಿಧ ವಿಭಾಗಗಳಿಗೆ ಸೀಟು ಹಂಚಿಕೆ ಮಾಡಲಾಗಿದೆ ಎಂದು ಪ್ರಕಟಣೆಯಲ್ಲಿ ಮಾಹಿತಿ ಹಂಚಿಕೊಂಡಿದ್ದಾರೆ.

# ಸೆ.7ಕ್ಕೆ ತಾವರೆಕೆರೆಯಲ್ಲಿ ಜೆಡಿಎಸ್ ಬೃಹತ್ ಸಮಾವೇಶ

• ಉದಯವಾಹಿನಿ, ಬೆಂಗಳೂರು

ಜೆಡಿಎಸ್ ಪಕ್ಷದ ಸಂಘಟನೆಯ ಉದ್ದೇಶದಿಂದ ಸೆ.7ರಂದು ತಾವರೆಕೆರೆಯಲ್ಲಿ ಬೃಹತ್ ಸಮಾವೇಶ ಹಮ್ಮಿಕೊಳ್ಳಲಾಗುವುದು ಎಂದು ವಿಧಾನ ಪರಿಷತ್ ಸದಸ್ಯ ಟಿ.ಎನ್. ಜವರಾಯಿಗೌಡ ತಿಳಿಸಿದರು

ತಾವರೆಕೆರೆಯಲ್ಲಿ ಆಯೋಜಿಸಿದ್ದ ಜೆಡಿಎಸ್ ಮುಖಂಡರು, ಕಾರ್ಯಕರ್ತರ ಸಭೆಯಲ್ಲಿ ಅವರು ಮಾತನಾಡಿದರು.

ಜೆಡಿಎಸ್ ಯುವ ಘಟಕದ ರಾಜ್ಯ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಅವರ ನೇತೃತ್ವದಲ್ಲಿ ರಾಜ್ಯದಾದ್ಯಂತ ನಡೆಯುತ್ತಿರುವ ಸದಸ್ಯತ್ವ ನೋಂದಣಿ ಅಭಿಯಾನಕ್ಕೆ ಉತ್ತಮ ಸ್ಪಂದನೆ ದೊರೆಯುತ್ತಿದೆ. ಜೆಡಿಎಸ್ ಭದ್ರಕೋಟೆ ಆಗಿರುವ ಯಶವಂತಪುರ ವಿಧಾನಸಭಾ ಕ್ಷೇತ್ರದಲ್ಲಿ ನಾಲ್ಕು ಸ್ಥಳಗಳಲ್ಲಿ ಬೃಹತ್ ಸಮಾವೇಶ ಹಮ್ಮಿಕೊಳ್ಳಲಾಗುವುದು' ಎಂದು ಹೇಳಿದರು.

ಜೆಡಿಎಸ್ ಯುವ ಮುಖಂಡ ಸಂತೋಷ್ ಜವರಾಯಿಗೌಡ, ತಾವರೆಕೆರೆ ಹೋಬಳಿ ಜೆಡಿಎಸ್ ಅಧ್ಯಕ್ಷ ಶಂಕರೇಗೌಡ, ಕೆಂಗೇರಿ ತಾವರೆಕೆರೆ ಹೋಬಳಿ ಘಟಕದ ಅಧ್ಯಕ್ಷ ಕೇಶವಮೂರ್ತಿ ಹಾಗೂ ತಾವರೆಕೆರೆ ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ಮನೋಹರ್, ಮುಖಂಡರಾದ ಮಂಜುನಾಥ್, ಚೇತನ್ ಗೌಡ, ಮಾರೇಗೌಡ, ತಾರಾ ಲೋಕೇಶ್, ಕೋಟಿ ರಾಜಣ್ಣ ಉಪಸ್ಥಿತರಿದ್ದರು.


ಉದಯವಾಹಿನಿ ಚಿತ್ರ

**'ವಿಧಾನಸಭಾ ಚುನಾವಣೆಯಲ್ಲಿ ನಾಲ್ಕು ಬಾರಿ ನಾನು ಪರಾಭವಗೊಂಡರೂ, ಪಕ್ಷದ ನಿಷ್ಠಾವಂತ ಕಾರ್ಯಕರ್ತರ ಬೆಂಬಲದಿಂದ ಕ್ಷೇತ್ರದಲ್ಲಿ ಬಲವಾಗಿ ಬೇರೂರಿದ್ದೇನೆ. ಪಕ್ಷದ ಬಲವರ್ಧನೆಗೆ ಮುಖಂಡರು, ಕಾರ್ಯಕರ್ತರು ಶಕ್ತಿ ಮೀರಿ ಶ್ರಮಿಸಿ ಜೆಡಿಎಸ್ ವರಿಷ್ಠ ಎಚ್.ಡಿ.ದೇವೇಗೌಡ ಹಾಗೂ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರ ಕೈ ಬಲಪಡಿಸಬೇಕು' ಎಂದು ಕರೆ ನೀಡಿದರು.**

# ಬೆಂಗಳೂರಲ್ಲಿ ಯುಟ್ಯೂಬರ್ ಸಮೀರ್ ಮಾಹಿತಿ ಕಲೆಹಾಕಿದ ಪೊಲೀಸರು

• ಉದಯವಾಹಿನಿ, ಬೆಂಗಳೂರು

ಅನೇಕಲ್ ತಾಲ್ಲೂಕಿನ ಜಿಗಣಿ ಸಮೀಪದ ಹುಲ್ಲಹಳ್ಳಿಯ ಬಾಡಿಗೆ ಮನೆಯೊಂದರಲ್ಲಿ ಯುಟ್ಯೂಬರ್ ಎಂ.ಡಿ.ಸಮೀರ್ ಅವರು ನೆಲಸಿದ್ದಾರೆ ಎಂಬ ಮಾಹಿತಿ ಮೇರೆಗೆ ದಕ್ಷಿಣ ಕನ್ನಡ ಜಿಲ್ಲಾ ಪೊಲೀಸರು ಬೆಳಿಗ್ಗೆ ಭೇಟಿ ನೀಡಿ ಪರಿಶೀಲಿಸಿದರು. ಆರು ಮಂದಿ ಒಳಗೊಂಡ ಪೊಲೀಸ್ ತಂಡವು ಬೆಳಿಗ್ಗೆ 8.30ರ ಸುಮಾರಿಗೆ ಜಿಗಣಿಗೆ ಭೇಟಿ ನೀಡಿತ್ತು. ಸಮೀರ್ ಅವರು ವಾಸ ಮಾಡುತ್ತಿದ್ದರು ಎನ್ನಲಾದ ಬಾಡಿಗೆ ಮನೆಗೆ ಬೀಗ ಹಾಕಲಾಗಿತ್ತು. ಮಧ್ಯಾಹ್ನದವರೆಗೂ ಅದೇ ಗ್ರಾಮದ ನಿವಾಸಿಗಳಿಂದ ಪೊಲೀಸರು ಮಾಹಿತಿ ಕಲೆ ಹಾಕಿ ತೆರಳಿದರು ಎಂದು ಗೊತ್ತಾಗಿದೆ.

ಧರ್ಮಸ್ಥಳ ಪೊಲೀಸ್ ಠಾಣಾ ವ್ಯಾಪ್ತಿಯ ಪ್ರಕರಣಕ್ಕೆ ಸಂಬಂಧಿಸಿದಂತೆ ಸಮೀರ್ ಅವರು ವಿಡಿಯೊವೊಂದನ್ನು ಮಾಡಿ. ಯುಟ್ಯೂಬ್‌ನಲ್ಲಿ ಅಪ್‌ಲೋಡ್ ಮಾಡಿದ್ದರು. ಆ ವೀಡಿಯೋಗೆ ಸಂಬಂಧಿಸಿದಂತೆ ಮಾಹಿತಿ ಕಲೆ ಹಾಕಲು, ದಾಖಲೆ ಸಂಗ್ರಹಿಸಲು ವಿಶೇಷ ತನಿಖಾ ದಳದ (ಎಸ್ ಐಟಿ) ಸೂಚನೆ ಮೇರೆಗೆ ಪೊಲೀಸ್ ತಂಡವು ಜಿಗಣಿಗೆ ಭೇಟಿ ನೀಡಿತ್ತು ಎಂದು ಗೊತ್ತಾಗಿದೆ.



'ಸಮೀರ್ ಅವರ ಪರಿಚಯ ಇಲ್ಲ. ಅವರು ಹೊರಗೆ ಕಾಣಿಸಿಕೊಳ್ಳುತ್ತಿರಲಿಲ್ಲ. ಯುಟ್ಯೂಬ್‌ನಲ್ಲಿ ಅಪ್‌ಲೋಡ್ ಆಗಿದ್ದ ವಿಡಿಯೊವೊಂದರಲ್ಲಿ ಅವರನ್ನು ನೋಡಿದ್ದೇವೆ ಎಂಬುದಾಗಿ ಅಕ್ಕಪಕ್ಕದ ನಿವಾಸಿಗಳು ಪೊಲೀಸ್ ತಂಡಕ್ಕೆ ಮಾಹಿತಿ ನೀಡಿದ್ದಾರೆ' ಎಂದು ಮೂಲಗಳು ಹೇಳಿವೆ.

# ಕೃಷ್ಣಾ ಮೇಲ್ದಂಡೆ-3 ಭೂಸ್ವಾಧೀನ ಕುರಿತಂತೆ ನ್ಯಾಯಾಲಯಗಳಲ್ಲಿ 28,407 ಪ್ರಕರಣ ದಾಖಲು

• ಉದಯವಾಹಿನಿ, ಬೆಂಗಳೂರು

ಕೃಷ್ಣಾ ಮೇಲ್ದಂಡೆ ಯೋಜನೆ ಪೂರ್ಣಗೊಳಿಸಲು ಭೂಸ್ವಾಧೀನಕ್ಕೆ ನ್ಯಾಯಾಲಯಗಳು ನೀಡಿರುವ ಆದೇಶದ ಅನುಸಾರ ಹೆಚ್ಚುವರಿ ಪರಿಹಾರದ ಸರಾಸರಿಯಂತೆ ರೂ.2.01 ಲಕ್ಷ ಕೋಟಿ ವೆಚ್ಚವಾಗಲಿದೆ ಎಂದು ಅಂದಾಜಿಸಲಾಗಿದೆ ಎಂದು ಡಿ.ಕೆ. ಶಿವಕುಮಾರ್ ತಿಳಿಸಿದರು.

ವಿಧಾನ ಪರಿಷತ್‌ನಲ್ಲಿ ಬಿಜೆಪಿಯ ಪಿ.ಎಚ್. ಪೂಜಾರ್ ಅವರ ಪ್ರಶ್ನೆಗೆ ಉತ್ತರಿಸಿದ ಜಲಸಂಪನ್ಮೂಲ ಸಚಿವರೂ ಆದ ಶಿವಕುಮಾರ್, 'ಕೃಷ್ಣಾ ಮೇಲ್ದಂಡೆ ಯೋಜನೆ ಹಂತ-3ರಡಿ ಭೂಸ್ವಾಧೀನ ಕುರಿತಂತೆ ನ್ಯಾಯಾಲಯಗಳಲ್ಲಿ 28,407 ಪ್ರಕರಣಗಳು ದಾಖಲಾಗಿದ್ದು, ಇವುಗಳಲ್ಲಿ 29,556 ಎಕರೆ ಜಮೀನಿದೆ. ಹೆಚ್ಚುವರಿ ಪರಿಹಾರ ಘೋಷಣೆಯಾದ ಪ್ರಕರಣಗಳ ಸರಾಸರಿ ದರವನ್ನು ಪರಿಗಣಿಸಿ, ಈಗಾಗಲೇ ಭೂಸ್ವಾಧೀನ ಪಡಿಸಿಕೊಂಡ 29,566 ಎಕರೆಗೆ ರೂ.66,563 ಕೋಟಿ ಹೆಚ್ಚುವರಿ ಪರಿಹಾರಧನ ಪಾವತಿಸಬೇಕಾಗುತ್ತದೆ. ಒಟ್ಟಾರೆ 1,33,867 ಎಕರೆ ಭೂಮಿ ಸ್ವಾಧೀನವಾಗಬೇಕಿದೆ' ಎಂದರು. ರೂ.2 ಲಕ್ಷ ಕೋಟಿ ಪರಿಹಾರ ನೀಡಲು ಸಾಧ್ಯವಾಗುತ್ತದೆಯೇ? ಈ ಯೋಜನೆ ವಿಚಾರದಲ್ಲಿ ದೊಡ್ಡ ಹಗರಣವೇ ನಡೆಯುತ್ತಿದೆ. ಭೂಮಿ ಪರಿಹಾರ ವಿಚಾರದಲ್ಲಿ ವಕೀಲರುಗಳು ಹಣ ಮಾಡುತ್ತಿದ್ದಾರೆ ವಿನಃ ರೈತರಿಗೆ ಪರಿಹಾರ ದೊರೆಯುವುದಿಲ್ಲ. ಆದ ಕಾರಣಕ್ಕೆ ಪರಿಷತ್ ಸದಸ್ಯರಾದ ಪೂಜಾರ್ ಅವರು ಅಲ್ಲಿನ ರೈತರನ್ನು ಸಮಾಧಾನ ಪಡಿಸಿದರೆ 15 ದಿನಗಳಲ್ಲಿ ಒಂದು ತೀರ್ಮಾನಕ್ಕೆ ಬರಲು ಸಾಧ್ಯವಾಗುತ್ತದೆ' ಎಂದರು.



**ಮತ್ತೆ ಅದೇ ಅಂಕಿ ಅಂಶಗಳು, ಭರವಸೆಯನ್ನು ನೀಡುವುದು ಬೇಡ. ರೈತರ ಸಮಸ್ಯೆಗಳನ್ನು ಪರಿಗಣಿಸಿ, ಪರಿಹಾರ ನೀಡಿ, ಈ ಯೋಜನೆಯನ್ನು ಪೂರ್ಣಗೊಳಿಸಲು ಆದಷ್ಟು ಬೇಗ ಕ್ರಮ ವಹಿಸಬೇಕು ಎಂದು ಪೂಜಾರ್ ಒತ್ತಾಯಿಸಿದರು. ಆ ಭಾಗದ ರೈತರ ಜೊತೆಗೆ ಸಭೆಯನ್ನು ಕರೆದು, ತೀರ್ಮಾನ ಕೈಗೊಳ್ಳಲಾಗುವುದು' ಎಂದು ಸಚಿವರು ಭರವಸೆ ನೀಡಿದರು.**

# ಗಣೇಶ ಚತುರ್ಥಿಯ ಪ್ರಯುಕ್ತ ಹೆಚ್ಚುವರಿ 265 ವಿಶೇಷ ಸಾರಿಗೆ ಬಸ್ಸುಗಳ ಸಂಚಾರ

• ಉದಯವಾಹಿನಿ, ಬೆಂಗಳೂರು

ಗಣೇಶ ಚತುರ್ಥಿ ಸಮೀಪಿಸುತ್ತಿರುವ ಹಿನ್ನೆಲೆ ಸಾರ್ವಜನಿಕರು ತಮ್ಮ ಊರುಗಳಿಗೆ ತೆರಳುವುದರಿಂದ ಹೆಚ್ಚುವರಿ 265 ವಿಶೇಷ ಸಾರಿಗೆ ಬಸ್ಸುಗಳು ಬೆಂಗಳೂರಿನಿಂದ ರಾಜ್ಯ, ಅಂತರ ರಾಜ್ಯಗಳಿಗೆ ಕಾರ್ಯಾಚರಣೆ ನಡೆಸಲಿವೆ.

ಆ.22ರಂದು ಶುಕ್ರವಾರ, ಆ.23ರಂದು ಬೆನಕನ ಅಮವಾಸ್ಯೆ, ಆ.24ರಂದು ನಾಲ್ಕನೇ ಶನಿವಾರ, ಆ.25ರಂದು ಭಾನುವಾರ, ಆ.25ರಂದು ಸ್ವರ್ಣಗೌರಿ ವ್ರತ ಮತ್ತು ಆ.26ರಂದು ಗಣೇಶ ಹಬ್ಬ ಇರುವುದರಿಂದ ಸಾರ್ವಜನಿಕರು ಬೆಂಗಳೂರು ಮತ್ತು ಇತರೇ ಪ್ರಮುಖ ಸ್ಥಳಗಳಿಂದ ತಮ್ಮ ಊರುಗಳಿಗೆ ತೆರಳಲು ಹೆಚ್ಚುವರಿ ಸಾರಿಗೆ ಬಸ್‌ಗಳು ಕಾರ್ಯನಿರ್ವಹಿಸಲಿವೆ. ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ವ್ಯಾಪ್ತಿಯ ಹುಬ್ಬಳ್ಳಿ, ಧಾರವಾಡ, ಗದಗ, ಬೆಳಗಾವಿ, ಉತ್ತರ ಕನ್ನಡ, ಹಾವೇರಿ, ಚಿಕ್ಕೋಡಿ ಮತ್ತು ಬಾಗಲಕೋಟೆ ವಿಭಾಗಗಳಿಂದ ಸುಮಾರು 265 ಹೆಚ್ಚುವರಿ ವಿಶೇಷ ಸಾರಿಗೆ ಬಸ್ಸುಗಳು ಕಾರ್ಯನಿರ್ವಹಿಸಲಿವೆ.

ಬೆಂಗಳೂರಿನಿಂದ ರಾಜ್ಯ / ಅಂತರರಾಜ್ಯ ವಿವಿಧ ಸ್ಥಳಗಳಿಗೆ ತೆರಳಲು ಆ.22ರಿಂದ ಆ.26ರವರೆಗೆ ಹೆಚ್ಚುವರಿ ವಿಶೇಷ ಸಾರಿಗೆ ಸೌಲಭ್ಯವನ್ನು ಕಲ್ಪಿಸಲಾಗಿದೆ. ಹಬ್ಬ ಮುಗಿದ ನಂತರ ಆ.27 ಹಾಗೂ ನಂತರ ದಿನಗಳಂದು ಪ್ರಮುಖ ಸ್ಥಳಗಳಿಗೆ ಜನದಟ್ಟಣೆಗೆ ಅನುಗುಣವಾಗಿ ಹೆಚ್ಚುವರಿ ಸಾರಿಗೆ ಬಸ್ಸುಗಳ ವ್ಯವಸ್ಥೆ ಮಾಡಲಾಗುವುದು. ಸದರಿ ಹೆಚ್ಚುವರಿ ಸಾರಿಗೆಗಳ ಸದುಪಯೋಗ ಪಡಿಸಿಕೊಳ್ಳುವದರೊಂದಿಗೆ, ಸುಖಕರ ಹಾಗೂ ಸುರಕ್ಷಿತ ಪ್ರಯಾಣಕ್ಕಾಗಿ ಸಂಸ್ಥೆಯ ಬಸ್ಸುಗಳಲ್ಲಿ ಪ್ರಯಾಣಿಸುವಂತೆ ಮತ್ತು ವಿಶೇಷ ಹೆಚ್ಚುವರಿ ಸಾರಿಗೆಗಳ ಸದುಪಯೋಗಪಡೆದುಕೊಳ್ಳುವಂತೆ ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ಪ್ರಕಟಣೆಯಲ್ಲಿ ತಿಳಿಸಿದೆ.


ಉದಯವಾಹಿನಿ ಚಿತ್ರ

# ಖಾಲಿ ನಿವೇಶನಗಳ ಸ್ವಚ್ಛತೆಗಾಗಿ ಹೊಸ ಕಾನೂನು ಜಾರಿ

• ಉದಯವಾಹಿನಿ, ಬೆಂಗಳೂರು

ನಗರದಲ್ಲಿ ಖಾಲಿ ನಿವೇಶನಗಳ ಸ್ವಚ್ಛತೆಗಾಗಿ ಹೊಸ ಕಾನೂನು ಜಾರಿಗೊಳಿಸಲು ಸರಕಾರ ಮುಂದಾಗಿದೆ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ವಿಧಾನ ಪರಿಷತ್ತಿಗೆ ಗುರುವಾರ ತಿಳಿಸಿದರು. ಪ್ರಶ್ನೋತ್ತರ ಕಲಾಪದಲ್ಲಿಸದಸ್ಯ ಕೇಶವ ಪ್ರಸಾದ್ ಅವರು ಬೆಂಗಳೂರಿನ ಕಸ ವಿಲೇವಾರಿ, ಕಸದ ಸೆಸ್ ವಿಚಾರವಾಗಿ ಕೇಳಿದ ಪ್ರಶ್ನೆಗೆ ಉತ್ತರಿಸಿದ ಅವರು, ಇತ್ತೀಚೆಗೆ ಪ್ರಧಾನಿ ನರೇಂದ್ರ ಮೋದಿ ನಗರಕ್ಕೆ ಆಗಮಿಸಿದ್ದಾಗ ಅರಮನೆ ರಸ್ತೆಯಲ್ಲಿಹಸಿರು ಪರದೆ ಕಟ್ಟಲಾಯಿತು. ಅಲ್ಲಿಜಾಗ ಖಾಲಿಯಿದೆ ಎಂದು ಜನರು ಕಸ ಎಸೆಯುತ್ತಿದ್ದಾರೆ.

ಇದರಿಂದ ಸರ್ಕಾರ ಎಚ್ಚೆತ್ತಿದೆ. ಖಾಲಿ ನಿವೇಶನಗಳನ್ನು ಸ್ವಚ್ಛತೆಯಿಂದ ಇಟ್ಟುಕೊಳ್ಳಬೇಕು ಎಂಬ ಉದ್ದೇಶದಿಂದ ಹೊಸ ಕಾನೂನು ಮಾಡಲು ಮುಂದಾಗಿದ್ದೇವೆ., ಎಂದು ಹೇಳಿದರು. ಇದೇ ವೇಳೆ, ದೊಡ್ಡ ಮಾಲ್‌ಗಳು ತಾವು ಉತ್ಪಾದಿಸುವ ಕಸವನ್ನು ತಾವೇ ವಿಲೇವಾರಿ ಮಾಡಿಕೊಳ್ಳುವುದಾಗಿ ಘೋಷಿಸಿವೆ. ಅದಕ್ಕೆ ಸರಕಾರ ಸಹ ಬೆಂಬಲ ನೀಡುತ್ತದೆ'' ಎಂದು ತಿಳಿಸಿದ್ದರು. ಇದೇ ವೇಳೆ, ಕಸದ ಮೇಲೆ ಸೆಸ್ ಜಾರಿಗೊಳಿಸಿದ್ದು ಮೊದಲು ನಾವಲ್ಲ, ಹಿಂದಿನ ಬಿಜೆಪಿ ಸರ್ಕಾರ ಎಂದು ಸಚಿವರು ಸ್ಪಷ್ಟಪಡಿಸಿದರು. 2016ರಲ್ಲಿಕೇಂದ್ರ ಸರಕಾರ ಘನತ್ಯಾಜ್ಯ ನಿರ್ವಹಣಾ ನಿಯಮದ ಪ್ರಕಾರ ನೂತನ ಆದೇಶ ನೀಡಿತು. 2020ರಲ್ಲಿರಾಜ್ಯದಲ್ಲಿ ಅಧಿಕಾರದಲ್ಲಿದ್ದ ಬಿಜೆಪಿ ಸರಕಾರ ಕೇಂದ್ರ ಸರಕಾರ ಕಳುಹಿಸಿದ ಕಸ ಸಂಗ್ರಹ ದರಪಟ್ಟಿ ಅಳವಡಿಸಿಕೊಂಡಿತು, ಎಂದು ಗೆಜೆಟ್ ಪ್ರತಿಯ ವಿವರವನ್ನು ಸದನದ ಗಮನಕ್ಕೆ ತಂದರು. ಈ ಗೆಜೆಟ್ ಪ್ರತಿಯಲ್ಲಿ ಐದು ಕೆಜಿಗೆ 500 ರೂ., 10 ಕೆಜಿಗೆ 1,400 ರೂ., 25 ಕೆಜಿಗೆ 3,400 ರೂ., 50 ಕೆಜಿಗೆ 7 ಸಾವಿರ ರೂ., 100 ಕೆಜಿಗೆ 14 ಸಾವಿರ ರೂ. ಶುಲ್ಕ ವಿಧಿಸಬೇಕು ಎಂದು ಹೇಳಲಾಗಿದೆ. ಇದನ್ನು ನೋಡಿ ನನಗೂ ಆಶ್ಚರ್ಯವಾಯಿತು'' ಎಂದು ತಿಳಿಸಿದರು



### ಖಾಲಿ ನಿವೇಶನದ ಚದುರಡಿಗೆ ಇಂತಿಷ್ಟು ಹಣ

**ಕಸದ ಮೇಲಿನ ಸೆಸ್ ವಿಚಾರದ ಬಗ್ಗೆ ಉತ್ತರಿಸಿದ ಡಿಸಿಎಂ, ಕಸ ತುಂಬಿರುವ ಖಾಲಿ ಇರುವ ನಿವೇಶನಗಳಿಗೆ ಪ್ರತಿ ಚದರ ಅಡಿಗೆ 20 ರೂ. ಶುಲ್ಕ ವಿಧಿಸಬೇಕು ಎಂದಿದೆ. ಈ ದರಗಳು ಹೆಚ್ಚಾಗಿವೆ ಎಂದು ಮನಗಂಡು ಅದರಲ್ಲಿ ಕೇವಲ ಶೇ. 25ರಷ್ಟು ಮಾತ್ರ ಸಂಗ್ರಹಿಸುತ್ತಿದ್ದೇವೆ. ಒಂದು ನಿವೇಶನಕ್ಕೆ ಪ್ರತಿ ಚದರ ಅಡಿಗೆ 2.40 ರೂ. ಸಂಗ್ರಹ ಮಾಡಲು ತೀರ್ಮಾನಿಸಲಾಗಿದೆ, ಎಂದು ಮಾಹಿತಿ ನೀಡಿದರು.**

# ಬೈಕ್ ಟ್ಯಾಕ್ಸಿ ಸೇವೆಗಳನ್ನು ಒದಗಿಸಲು ಅಗ್ರಿಗೇಟರ್ ಕಂಪನಿಗಳಿಗೆ ಅನುಮತಿ ನೀಡಿಲ್ಲ

## ಕಂಪನಿಗಳ ವಿರುದ್ಧ ಕ್ರಮ ಕೈಗೊಳ್ಳಲು ರಾಜ್ಯ ಸರ್ಕಾರ ಸಂಪೂರ್ಣ ಸ್ವತಂತ್ರ ಇದೆ : ಹೈಕೋರ್ಟ್ ಸ್ಪಷ್ಟನೆ

• ಉದಯವಾಹಿನಿ, ಬೆಂಗಳೂರು

ಹಲವು ದಿನಗಳ ಕಾಲ ಕಣ್ಮರೆ ಆಗಿದ್ದ ಬೈಕ್ ಟ್ಯಾಕ್ಸಿಗಳು ಮತ್ತೆ ರಾಜಧಾನಿ ಬೆಂಗಳೂರಿನಲ್ಲಿ ರಾರಾಜಿಸಲಾರಂಭಿಸಿವೆ. ಆದರೆ, ರಾಜ್ಯದಲ್ಲಿ ಬೈಕ್ ಟ್ಯಾಕ್ಸಿ ಸೇವೆಗಳನ್ನು ಒದಗಿಸಲು ಯಾವುದೇ ಅಗ್ರಿಗೇಟರ್ ಕಂಪನಿಗಳಿಗೆ ತಾವು ಅನುಮತಿ ನೀಡಿಲ್ಲ ಎಂದು ಕರ್ನಾಟಕ ಹೈಕೋರ್ಟ್ ಸ್ಪಷ್ಟಪಡಿಸಿದೆ.

ಅಲ್ಲದೆ ನಿಯಮ ಉಲ್ಲಂಘಿಸಿ ಸೇವೆ ಆರಂಭಿಸಿರುವ ಕಂಪನಿಗಳ ವಿರುದ್ಧ ಕ್ರಮ ಕೈಗೊಳ್ಳಲು ರಾಜ್ಯ ಸರ್ಕಾರ ಸಂಪೂರ್ಣ ಸ್ವತಂತ್ರವಾಗಿದೆ ಎಂದು ಮಹತ್ವದ ಸ್ಪಷ್ಟನೆ ನೀಡಿದೆ. ಬೆಂಗಳೂರು ನಗರದಲ್ಲಿ ರ್‍ಯಾಪಿಡೋ, ಉಬರ್‌ನಂತಹ ಕಂಪನಿಗಳು ತಮ್ಮ ಬೈಕ್ ಟ್ಯಾಕ್ಸಿ ಸೇವೆಗಳನ್ನು ಪುನರಾರಂಭಿಸಿದ ಒಂದು ದಿನದ ಬಳಿಕ ಹೈಕೋರ್ಟ್‌ನಿಂದ ಈ ಸ್ಪಷ್ಟನೆ ಬಂದಿದೆ.

ವಿಚಾರಣೆ ವೇಳೆ ಅಡ್ವೋಕೇಟ್ ಜನರಲ್ ಶಶಿ ಕಿರಣ್ ಶೆಟ್ಟಿ ಅವರು, ಬೈಕ್ ಟ್ಯಾಕ್ಸಿಗಳ ಮೇಲಿನ ಸಂಪೂರ್ಣ ನಿಷೇಧವನ್ನು ಪ್ರಶ್ನಿಸಿ ನ್ಯಾಯಾಲಯವು ಅಭಿಪ್ರಾಯ ವ್ಯಕ್ತಪಡಿಸಿದ ಕೂಡಲೇ, ಅಗ್ರಿಗೇಟರ್ ಅಪ್ಲಿಕೇಶನ್‌ಗಳು ತಮ್ಮ ಕಾರ್ಯಾಚರಣೆಯನ್ನು ಮತ್ತೆ ಪ್ರಾರಂಭಿಸಿವೆ, ಎಂದು ನ್ಯಾಯಾಲಯದ ಗಮನಕ್ಕೆ ತಂದರು.




**ಬೈಕ್ ಟ್ಯಾಕ್ಸಿಗಳ ಮೇಲೆ ಸಂಪೂರ್ಣ ನಿಷೇಧ**

**ಓಲಾ, ಉಬರ್ ಮತ್ತು ರ್‍ಯಾಪಿಡೋ ಸಲ್ಲಿಸಿದ್ದ ಅರ್ಜಿಗಳ ವಿಚಾರಣೆ ನಡೆಸಿದ್ದ ಹೈಕೋರ್ಟ್, ಬೈಕ್ ಟ್ಯಾಕ್ಸಿಗಳ ಮೇಲೆ ಸಂಪೂರ್ಣ ನಿಷೇಧ ಹೇರುವ ಬದಲು ಅವುಗಳನ್ನು ನಿಯಂತ್ರಿಸಲು ಏಕೆ ಸಾಧ್ಯವಿಲ್ಲ ಎಂದು ರಾಜ್ಯ ಸರ್ಕಾರವನ್ನು ಪ್ರಶ್ನಿಸಿತ್ತು. ಇಲ್ಲಿ ಜನರ ಜೀವನೋಪಾಯವು ಅಡಗಿದೆ, ಗಂಭೀರವಾಗಿ ಯೋಚಿಸಿ. ಯಾವುದೇ ವ್ಯಾಪಾರವನ್ನು ನಿಯಂತ್ರಿಸುವವರೆಗೆ ಅದು ಕಾನೂನುಬದ್ಧವಾಗಿರುತ್ತದೆ, ಎಂದು ಪೀಠ ಅಭಿಪ್ರಾಯಪಟ್ಟಿತ್ತು.**

ಇದಕ್ಕೆ ಪ್ರತಿಕ್ರಿಯಿಸಿದ ಮುಖ್ಯ ನ್ಯಾಯಮೂರ್ತಿ ವಿಭು ಬಕ್ರು, ನ್ಯಾಯಮೂರ್ತಿ ಸಿ.ಎಂ. ಜೋಶಿ ಅವರಿದ್ದ ವಿಭಾಗೀಯ ಪೀಠವು, ನಾವು ಯಾವುದೇ ಆದೇಶವನ್ನು ನೀಡಿಲ್ಲ. ಅವರು ತಮ್ಮ ವ್ಯವಹಾರವನ್ನು ಪ್ರಾರಂಭಿಸಿದ್ದರೆ, ನಿಮಗೆ (ರಾಜ್ಯ ಸರ್ಕಾರ) ಬೇಕಾದ ಯಾವುದೇ ಕ್ರಮವನ್ನು ತೆಗೆದುಕೊಳ್ಳಬಹುದು, ಎಂದು ವಿವರಿಸಿತು. ಯಾವುದೇ ಕ್ರಮ ತೆಗೆದುಕೊಳ್ಳುವ ಮುನ್ನ ನ್ಯಾಯಾಲಯಕ್ಕೆ ಮಾಹಿತಿ ನೀಡುವುದು ತಮ್ಮ ಕರ್ತವ್ಯ ಎಂದು ಇದಕ್ಕೆ ಅಡ್ವೋಕೇಟ್ ಜನರಲ್ ಪ್ರತಿಕ್ರಿಯಿಸಿದರು. ಈ ಹಿಂದಿನ ಆದೇಶದಲ್ಲಿ ಕೇವಲ ವೈಯಕ್ತಿಕ ಬೈಕ್ ಮಾಲೀಕರನ್ನು ಗುರಿಯಾಗಿಸಿಕೊಂಡು ಕ್ರಮ ಜರುಗಿಸುವುದಕ್ಕೆ ತಡೆಯಾಜ್ಞೆ ನೀಡಲಾಗಿತ್ತೇ ವಿನಃ ಅಗ್ರಿಗೇಟರ್ ಕಂಪನಿಗಳಿಗೆ ಅಲ್ಲ ಎಂದು ಪೀಠವು ಸ್ಪಷ್ಟಪಡಿಸಿತು. ಬೈಕ್ ಟ್ಯಾಕ್ಸಿ ನೀತಿಯು ಸರ್ಕಾರದ ಪರಿಗಣನೆಯಲ್ಲಿದೆ.

ಇದೇ ವೇಳೆ, ಆದೇಶದ ನಂತರವೂ ವೈಯಕ್ತಿಕ ಬೈಕ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ, ಎಂದು ವಕೀಲರೊಬ್ಬರು ದೂರಿದಾಗ, ಅಡ್ವೋಕೇಟ್ ಜನರಲ್ ಅದನ್ನು ನಿರಾಕರಿಸಿದರು. ಆಗ ಪೀಠವು, ಬೈಕ್‌ಗಳ ಮಾಲೀಕರಿಗೆ ಕಿರುಕುಳ ನೀಡಬೇಡಿ, ಎಂದು ಪೀಠವು ಪುನರುಚ್ಚರಿಸಿತು. ಸರ್ಕಾರದ ನೀತಿ ನಿರ್ಧಾರಗಳಲ್ಲಿ ತಾವು ಹಸ್ತಕ್ಷೇಪ ಮಾಡುವುದಿಲ್ಲ,

ಆದರೆ ಸರ್ಕಾರದ ಕ್ರಮವು ಸ್ವೇಚ್ಛಾಚಾರದಿಂದ ಕೂಡಿದೆಯೇ ಅಥವಾ ದುರುದ್ದೇಶದಿಂದ ಕೂಡಿದೆಯೇ ಎಂಬುದನ್ನು ಮಾತ್ರ ಪರಿಶೀಲಿಸುವುದಾಗಿ ನ್ಯಾಯಾಲಯ ಇದೇ ವೇಳೆ ಸ್ಪಷ್ಟಪಡಿಸಿದ್ದು, ಪ್ರಕರಣದ ಮುಂದಿನ ವಿಚಾರಣೆಯನ್ನು ಸೆಪ್ಟೆಂಬರ್ 22ಕ್ಕೆ ಮುಂದೂಡಿದೆ.

# ಸೆ.15ರೊಳಗೆ ಪೂರ್ಣ ದಾಖಲೆ ಸಲ್ಲಿಸಿ: ಕೆ.ವೈ.ನಂಜೇಗೌಡ

## 22 ವರ್ಷಗಳ ಹಿಂದೆ ಪುರಸಭೆಯಿಂದ ಆಶ್ರಯ ಯೋಜನೆಯಡಿ ನಿವೇಶನ

• **ಉದಯವಾಹಿನಿ, ಮಾಲೂರು**

ಆಶ್ರಯ ಯೋಜನೆಯಡಿ ನಿವೇಶನ ಪಡೆಯಲು ಸಲ್ಲಿಕೆ ಮಾಡಿದ್ದ 1,369 ಅರ್ಜಿಗಳಲ್ಲಿ 689 ಮಂದಿ ಫಲಾನುಭವಿಗಳು ಪೂರ್ಣ ದಾಖಲೆ ಸಲ್ಲಿಸಿದ್ದು, ಉಳಿದ 474 ಮಂದಿ ಸೆ.15ರೊಳಗೆ ಪೂರ್ಣ ದಾಖಲೆ ನೀಡಿದರೆ ಅವರಿಗೂ ಸಹ ಲಾಟರಿ ಮೂಲಕ ನಿವೇಶನ ಹಂಚಿಕೆ ಮಾಡಲಾಗುವುದು ಎಂದು ಶಾಸಕ ಕೆ.ವೈ.ನಂಜೇಗೌಡ ಅವರು ತಿಳಿಸಿದರು. ನಗರಸಭೆ ವತಿಯಿಂದ ನಗರಸಭೆ ಸಭಾಂಗಣದಲ್ಲಿ ನಡೆದ ಆಶ್ರಯ ಸಮಿತಿ ಸಭೆಯಲ್ಲಿ ಮಾತನಾಡಿದ ಅವರು, 22 ವರ್ಷಗಳ ಹಿಂದೆ ಪುರಸಭೆಯಿಂದ ಆಶ್ರಯ ಯೋಜನೆಯಡಿ ನಿವೇಶನ ಪಡೆಯಲು 1,369 ಮಂದಿ ಫಲಾನುಭವಿಗಳು ಅರ್ಜಿ ಸಲ್ಲಿಸಿದ್ದರು. ಆ ಪೈಕಿ 780 ಮಂದಿ ರೂ.35 ಸಾವಿರ ಪಾವತಿಸಿದ್ದರು. ನಿವೇಶನ ಹಂಚಿಕೆ ಮಾಡಿಲ್ಲ. ಪುರಸಭೆಯಲ್ಲಿ ಸಭೆ ನಡೆಸಿ ಬ್ಯಾಂಕ್ ಖಾತೆಯಲ್ಲಿದ್ದ ಹಣವನ್ನು ರೂ.35 ಸಾವಿರಕ್ಕೆ ಬಡ್ಡಿ ಸಮೇತ ಫಲಾನುಭವಿಗಳಿಗೆ ಹಿಂದಿರುಗಿಸುವ ಮೂಲಕ ಉಚಿತ ನಿವೇಶನ ನೀಡಲು ತೀರ್ಮಾನಿಸಲಾಗಿತ್ತು.

ನಿವೇಶನ ಹಂಚಿಕೆ ಮಾಡಲು ಭೂಮಿಯ ಕೊರತೆ ನೀಗಿಸಲು ಜಿಲ್ಲಾಡಳಿತದಿಂದ 27 ಎಕರೆ ಜಮೀನು ಮಂಜೂರಾತಿ ಪಡೆದುಕೊಳ್ಳಲಾಗಿದೆ.


ಉದಯವಾಹಿನಿ ಚಿತ್ರ

ರಾಜ್ಯ ಸರ್ಕಾರದ ಸಹಕಾರ ಪಡೆದು ನಿವೇಶನದ ಹಕ್ಕು ಪತ್ರ ಹಾಗೂ ಮನೆ ಮಂಜೂರಾತಿ ಪತ್ರಗಳು ಮುಖ್ಯಮಂತ್ರಿಗಳಿಂದ ವಿತರಿಸಲು ತೀರ್ಮಾನಿಸಲಾಗಿದೆ ಎಂದರು. ಪಟ್ಟಣದ ಇಂದಿರಾನಗರದ ಸಮೀಪ, ಕೆಎಲ್ಇ ಶಾಲೆ ಮತ್ತು ದೊಡ್ಡ ಕಡೂರು ಗ್ರಾಮದ ಬಳಿ ನಿವೇಶನ ಹಂಚಿಕೆ ಮಾಡಲಾಗುವುದು. ಇದೇ ರೀತಿ ತಾಲ್ಲೂಕಿನ 28 ಗ್ರಾಮಗಳಲ್ಲಿ ನಿವೇಶನ ರೈತ ಫಲಾನುಭವಿಗಳಿಗೆ ನಿವೇಶನ ನೀಡಲು ಈಗಾಗಲೇ ಗ್ರಾಮ ಹಾಗೂ ತಾಲ್ಲೂಕು ಪಂಚಾಯಿತಿ 14 ಸಾವಿರ ಫಲಾನುಭವಿಗಳನ್ನು ಗುರುತಿಸಿದೆ. ಅದಕ್ಕೆ 400 ಎಕರೆ ಜಮೀನಿನ ಅಗತ್ಯವಿದ್ದು ತಹಶೀಲ್ದಾರ್ ಹಾಗೂ ಸರ್ವೆ ಇಲಾಖೆಯವರು ಭೂಮಿ ಗುರುತಿಸುವ ಕೆಲಸ ಮಾಡುತ್ತಿದ್ದಾರೆ. ಸರ್ಕಾರದ ನೀತಿ ನಿಯಮನುಸಾರ ನಿವೇಶನ ನೀಡಲಾಗುವುದು ಎಂದರು.

ವಿಜಯಲಕ್ಷ್ಮಿ, ವಿ.ಕೃಷ್ಣಪ್ಪ, ರಾಜಪ್ಪ, ಎಂ.ವಿ.ವೇಮನ, ಇಂತಿಯಾಜ್ ಖಾನ್, ಪದ್ಮಾವತಿ, ಮುರುಳಿಧರ್, ಅನಿತಾ ನಾಗರಾಜ್, ಶ್ರೀನಿವಾಸ್, ಭಾರತೀ ಶಂಕ್ರಪ್ಪ, ಎ.ಬಿ.ಪ್ರದೀಪ್ ಕುಮಾರ್, ಶ್ರೀನಿವಾಸ್ ಸೇರಿದಂತೆ ಇತರರು ಇದ್ದರು.

> **ಮುಖ್ಯಮಂತ್ರಿ ಸಿದ್ದರಾಮಯ್ಯ ಶೀಘ್ರ ತಾಲ್ಲೂಕಿಗೆ ಆಗಮಿಸಿ ರೂ.2500 ಕೋಟಿ ವೆಚ್ಚದ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಲಿದ್ದಾರೆ.**
> **ಶಾಸಕ ಕೆ.ವೈ.ನಂಜೇಗೌಡ**

> **ಇನ್ನೂ 200 ನಿವೇಶನಗಳು ನಮ್ಮಲ್ಲಿ ಲಭ್ಯವಿದ್ದು 474 ಮಂದಿ ಅರ್ಜಿದಾರರು ದಾಖಲೆ ಸಲ್ಲಿಸಿದರು, ಅವರಿಗೂ ಸಹ 2ನೇ ಹಂತದಲ್ಲಿ ನಿವೇಶನ ಹಂಚಿಕೆ ಮಾಡಲಾಗುವುದು. ಸೆ.15ರೊಳಗೆ ಪೂರ್ಣ ದಾಖಲೆ ನೀಡಿದರೆ ಅಂದು ಲಾಟರಿ ಮೂಲಕ ನಿವೇಶನ ವಿತರಣೆ ಫಲಾನುಭವಿಗಳನ್ನು ಆಯ್ಕೆ ಪಟ್ಟಿಗೆ ಸೇರಿಸಲಾಗುವುದು. ನಂತರದ ದಿನಗಳಲ್ಲಿಯೂ ಸಹ ನೀಡಿದರೆ ಅವರನ್ನು ಎರಡನೇ ಹಂತದಲ್ಲಿ ಆಯ್ಕೆ ಮಾಡಲು ಸಭೆ ನಡೆಸಲಾಗುವುದು ಎಂದು ಹೇಳಿದರು.**

## ಮಿನಿ ನ್ಯೂಸ್

### ಪೆನುಗೊಂಡ ರಸ್ತೆ ಬಳಿ ಕಾರಿನಲ್ಲಿ ಬೆಂಕಿ, ತಪ್ಪಿದ ಅನಾಹುತ

• **ಉದಯವಾಹಿನಿ, ಪಾವಗಡ**

ಪಟ್ಟಣದ ಪೆನುಗೊಂಡ ರಸ್ತೆ ಬಳಿ ಕಾರಿನ ಮುಂಭಾಗ ಬೆಂಕಿ ಕಾಣಿಸಿಕೊಂಡಿದೆ. ಕೂಡಲೆ ಬೆಂಕಿನಂದಿಸಿ ಅನಾಹುತ ತಪ್ಪಿಸಲಾಗಿದೆ. ತಾಲ್ಲೂಕಿನ ಗ್ಯಾದಿಗುಂಟೆ ಗ್ರಾಮದ ವೆಂಕಟರಮಣಪ್ಪ ಎಂಬುವರು ಕಾರಿಗೆ ಪೆನುಗೊಂಡ ರಸ್ತೆಯ ಪೆಟ್ರೋಲ್ ಬಂಕ್ ಬಳಿ ಪೆಟ್ರೋಲ್ ಹಾಕಿಸಿಕೊಂಡಿದ್ದಾರೆ. ಕೆಲವೇ ನಿಮಿಷಗಳಲ್ಲಿ ಪೆಟ್ರೋಲ್ ಬಂಕ್ ಸಮೀಪದಲ್ಲಿಯೇ ಕಾರಿನ ಮುಂಭಾಗದಲ್ಲಿ ಹೊಗೆ ಕಾಣಿಸಿಕೊಂಡಿದೆ. ಕಾರಿನಲ್ಲಿದ್ದವರು ಹೊರ ಬಂದಿದ್ದಾರೆ. ಪೆಟ್ರೋಲ್ ಬಂಕ್ ಸಿಬ್ಬಂದಿ ಬೆಂಕಿ ನಂದಿಸಲು ಯತ್ನಿಸಿದ್ದಾರೆ. ಕೆಲವೇ ನಿಮಿಷಗಳಲ್ಲಿ ಅಗ್ನಿಶಾಮಕ ಸಿಬ್ಬಂದಿ ಸ್ಥಳಕ್ಕೆ ಆಗಮಿಸಿ ಬೆಂಕಿ ನಂದಿಸಿದ್ದಾರೆ. ಹಳೆಯದಾದ ಕಾರಿನ ಬ್ಯಾಟರಿ ಹಾಳಾಗಿ ಶಾರ್ಟ್‌ಸರ್ಕಿಟ್ ಉಂಟಾಗಿದೆ. ಕಾರಿನ ಎಂಜಿನ್ ಇತ್ಯಾದಿ ಭಾಗಗಳು ಸುಟ್ಟಿವೆ.

### ಮಂಜುನಾಥಸ್ವಾಮಿಗೆ ಬೆದರಿಕೆ ಹಾಕಿ ರೂ.25 ಲಕ್ಷಕ್ಕೆ ಬೇಡಿಕೆ ಇಟ್ಟ ಆರೋಪ

• **ಉದಯವಾಹಿನಿ, ಕುಣಿಗಲ್**

ತಾಲ್ಲೂಕಿನ ಹಂಗರಹಳ್ಳಿ ವಿದ್ಯಾ ಚೌಡೇಶ್ವರಿ ಮಠದ ಬಾಲ ಮಂಜುನಾಥಸ್ವಾಮಿಗೆ ಬೆದರಿಕೆ ಹಾಕಿ ರೂ.25 ಲಕ್ಷಕ್ಕೆ ಬೇಡಿಕೆ ಇಟ್ಟ ಆರೋಪದಲ್ಲಿ ತುಮಕೂರಿನ ಯೂಟೂಬ್ ಚಾಲನ್ ವೊಂದರ ಸುಧೀಂದ್ರ ಎಂಬಾತನನ್ನು ಪೊಲೀಸರು ಬಂಧಿಸಿದ್ದಾರೆ. ಸುಧೀಂದ್ರ ಜನವರಿ 21 ರಿಂದಲೂ ಹಣಕ್ಕೆ ಬೇಡಿಕೆ ಇಡುತ್ತಿದ್ದ. ಜೂನ್ 28ರಂದು ಮಠದ ಸಿಬ್ಬಂದಿ ಅಭಿಲಾಷ್, ಸುರೇಶ್ ಮತ್ತು ಭಕ್ತರಾದ ಬೀಚನಹಳ್ಳಿ ಕರಿಗೌಡ ಅವರನ್ನು ಸಂಪರ್ಕಿಸಿ 'ಮಠಕ್ಕೆ ಸಂಬಂಧಿಸಿದಂತೆ ಹಲವು ವಿಷಯಗಳನ್ನು ಹೊಂದಿದ್ದು, ಅವುಗಳನ್ನು ಪ್ರಕಟಿಸಿದರೆ ಮಠದ ಹೆಸರು ಹಾಳಾಗುತ್ತದೆ. ಇದನ್ನು ಪ್ರಸಾರ ಮಾಡದಿರಲು 25 ಲಕ್ಷ ನೀಡಿ ಎಂದು ಬೆದರಿಕೆ ಹಾಕಿದ್ದ ಎಂದು ಸ್ವಾಮೀಜಿ ದೂರಿದ್ದಾರೆ. ಹಣ ನೀಡದ ಕಾರಣ ಜುಲೈ 10ರಂದು ಸುಧೀಂದ್ರ ತನ್ನ ಯೂಟೂಬ್ ಚಾನಲ್‌ನಲ್ಲಿ ಪುಣ್ಯ ಕ್ಷೇತ್ರ ಪಾಪಿ ಬಾಲ ಮೌಢ್ಯ ಲೀಲೆ ಭಾಗ 1 ನಂತರ 17ರಂದು ಭಾಗ 2 ಪ್ರಸಾರ ಮಾಡಿದ್ದಾನೆ. ಇವೆಲ್ಲವೂ ಕಲ್ಪಿತ ಆಧಾರ ರಹಿತ ಆರೋಪ. ಆತನ ವಿರುದ್ಧ ಕ್ರಮ ಕೈಗೊಳ್ಳಬೇಕು' ಎಂದು ಬಾಲಮಂಜುನಾಥ ಸ್ವಾಮೀಜಿ ನೀಡಿದ್ದ ದೂರಿನ ಮೇರೆಗೆ ಪೊಲೀಸರು ಆರೋಪಿಯನ್ನು ಬಂಧಿಸಿದ್ದಾರೆ.

### ಆಗಸ್ಟ್ 23ರಂದು ಧರ್ಮಸ್ಥಳಕ್ಕಾಗಿ ಧರ್ಮಯುದ್ಧ: ಗಂಗರಾಜು

• **ಉದಯವಾಹಿನಿ, ತಿಪಟೂರು**

ಹಿಂದೂ ವಿರೋಧಿ ನೀತಿ ಅನುಸರಿಸುತ್ತಿರುವ ರಾಜ್ಯ ಸರ್ಕಾರ ಹಾಗೂ ಲಕ್ಷಾಂತರ ಜನರ ಧಾರ್ಮಿಕ ಶ್ರದ್ಧಾ ಕೇಂದ್ರವಾಗಿರುವ ಧರ್ಮಸ್ಥಳದ ವಿರುದ್ಧ ಷಡ್ಯಂತ್ರ ರೂಪಿಸಿ ಅಪಪ್ರಚಾರ ಮಾಡಿರುವ ಎಡಪಂಥೀಯ ಸಂಘಟನೆಯ ಕೃತ್ಯ ವಿರೋಧಿಸಿ 'ಧರ್ಮಸ್ಥಳಕ್ಕಾಗಿ ಧರ್ಮಯುದ್ಧ' ಪ್ರತಿಭಟನೆಯನ್ನು ಅಗಸ್ಟ್ 23ರಂದು ತಾಲ್ಲೂಕು ಬಿಜೆಪಿ ಘಟಕದಿಂದ ನಡೆಸಲಾಗುವುದು ಎಂದು ಜಿಲ್ಲಾ ಬಿಜೆಪಿ ಪ್ರಧಾನ ಕಾರ್ಯದರ್ಶಿ ಗಂಗರಾಜು ತಿಳಿಸಿದರು. ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಶನಿವಾರ ಬೆಳಗ್ಗೆ ನಗರದ ಕೆಂಪಮ್ಮ ದೇವಾಸ್ಥಾನದಿಂದ ಸಾವಿರಾರು ಬಿಜೆಪಿ ಕಾರ್ಯಕರ್ತರು, ಹಿಂದೂ ಧಾರ್ಮಿಕ ಸಂಘ ಸಂಸ್ಥೆಯವರು ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಸ್ಥೆಯ ಸದಸ್ಯರನ್ನು ಒಳಗೊಂಡು ಜಾಥಾ ಪ್ರಾರಂಭಿಸಿ ನಗರದ ಸಿಂಗ್ರಿ ನಂಜಪ್ಪ ವೃತ್ತದಲ್ಲಿ ಬೃಹತ್ ಪತ್ರಿಭಟನೆ ನಡೆಸಲಾಗುವುದು ಎಂದರು. ಸಿಂಗ್ರಿ ನಂಜಪ್ಪ ವೃತ್ತದಲ್ಲಿನ ಹೈಮಾಸ್ಟ್ ದೀಪ ತೆರವುಗೊಳಿಸಿ ಗಡಿಯಾರ ಅಳವಡಿಸಿರುವುದು ಖಂಡನೀಯ. ಗಡಿಯಾರ ಬದಲಾವಣೆ ಮಾಡದಿದ್ದರೆ ಮುಂದಿನ ದಿನಗಳಲ್ಲಿ ತಾಲ್ಲೂಕು ಬಿಜೆಪಿಯಿಂದ ಹೋರಾಟ ನಡೆಸಲಾಗುವುದು ಎಂದು ಎಚ್ಚರಿಸಿದರು. ಗೋಷ್ಠಿಯಲ್ಲಿ ಬಿಜೆಪಿ ಜಿಲ್ಲಾ ಉಪಾಧ್ಯಕ್ಷ ಹರಿಸಮುದ್ರ ಗಂಗಾಧರ್, ನಗರಾಧ್ಯಕ್ಷ ಜಗದೀಶ್, ಮಂಡಲ ಅಧ್ಯಕ್ಷ ಸತೀಶ್, ದೀಶಾ ಸದಸ್ಯ ಅಯರಹಳ್ಳಿ ಶಂಕರಪ್ಪ, ಹಿಂದುಳಿದ ವರ್ಗದ ಜಿಲ್ಲಾ ಕಾರ್ಯದರ್ಶಿ ಗಿರೀಶ್ ಈಚನೂರು.

ರೈತಮೋರ್ಜಾ ಜಿಲ್ಲಾ ಪ್ರದಾನ ಕಾರ್ಯದರ್ಶಿ ರವೀಂದ್ರ, ಬಿಸಲೇಹಳ್ಳಿ ಜಗದೀಶ್, ತಾಲ್ಲೂಕು ಕಾರ್ಯದರ್ಶಿ ಗುರಗದಹಳ್ಳಿ ಉಮಾಶಂಕರ್, ಶಶಿಕುಮಾರ್ ಸಿಂಗೇನಹಳ್ಳಿ ಹಾಜರಿದ್ದರು.

# ಗಣಿಗಾರಿಕೆ ಅನುಮತಿಗೆ ರೂ.30 ಕೋಟಿ ಲಂಚ

• **ಉದಯವಾಹಿನಿ, ಶಿಡ್ಲಘಟ್ಟ**

ತಾಲ್ಲೂಕಿನ ಪುರಬೈರನಹಳ್ಳಿಯಲ್ಲಿ ಗಣಿಗಾರಿಕೆಗೆ ಅನುಮತಿ ಕೊಡಲು ಈ ಹಿಂದಿನ ಜಿಲ್ಲಾಧಿಕಾರಿ, ಗಣಿ, ಭೂ ವಿಜ್ಞಾನ ಇಲಾಖೆ ಉಪ ನಿರ್ದೇಶಕ, ಹಿಂದಿನ ಜಿಲ್ಲಾ ಉಸ್ತುವಾರಿ ಸಚಿವ ರೂ.30 ಕೋಟಿ ಲಂಚ ಪಡೆದಿದ್ದಾರೆ ಎಂದು ಶಾಸಕ ಬಿ.ಎನ್. ರವಿಕುಮಾರ್ ಗಂಭೀರ ಆರೋಪ ಮಾಡಿದ್ದಾರೆ. ವಿಧಾನಸಭೆ ಕಲಾಪದಲ್ಲಿ ಮಾತನಾಡಿದ ಅವರು, ಸಾದಲಿ ಹೋಬಳಿಯ ಪುರಬೈರನಹಳ್ಳಿ ಗ್ರಾಮದ ಸರ್ವೆ ನಂಬರ್ 2ರಲ್ಲಿ ಒಂದೇ ಕುಟುಂಬದವರಿಗೆ 60.27 ಎಕರೆ ಜಮೀನು ಮಂಜೂರು ಮಾಡಲಾಗಿದೆ ಎಂದು ಆರೋಪಿಸಿದರು.

ಈ ಜಮೀನಿನಲ್ಲಿ ಗಣಿಗಾರಿಕೆ ಆರಂಭಿಸಿದರೆ, ಅರಣ್ಯ ಪ್ರದೇಶದಲ್ಲಿರುವ ಪ್ರಾಣಿ, ಪಕ್ಷಿಗಳು ಹಾಗೂ ರೈತರಿಗೂ ತೊಂದರೆ ಆಗುತ್ತದೆ. ಸರ್ಕಾರ ಗಣಿಗಾರಿಕೆ ರದ್ದುಪಡಿಸದಿದ್ದರೆ, ದೊಡ್ಡ ಮಟ್ಟದ ಗಲಾಟೆಯಾಗಲಿದೆ. ಮುಂದಿನ ಅನಾಹುತಕ್ಕೆ ಸರ್ಕಾರವೇ ನೇರ ಹೊಣೆಯಾಗಲಿದೆ ಎಂದು ಎಚ್ಚರಿಕೆ ನೀಡಿದರು. ನಮ್ಮ ವಿಧಾನಸಭಾ ಕ್ಷೇತ್ರವು, ಹಿಂದುಳಿದ ತಾಲ್ಲೂಕಾಗಿದೆ. 100 ಹಾಸಿಗೆಗಳ ಆಸ್ಪತ್ರೆಯಿಲ್ಲ, 11 ಸಾವಿರ ಮಕ್ಕಳು ನಗರ ವ್ಯಾಪ್ತಿಯಲ್ಲಿ ಓದುತ್ತಿದ್ದಾರೆ. ಸುಸಜ್ಜಿತ ಗ್ರಂಥಾಲಯವಿಲ್ಲ. ನಮ್ಮ ಕ್ಷೇತ್ರಕ್ಕೆ ಅನುದಾನ ಕೊಡಬೇಕು. ಈ ಹಿಂದೆ ಯಾವ ಮುಖ್ಯಮಂತ್ರಿಗಳು ಹೀಗೆ ಮಾಡಿರಲಿಲ್ಲ. ಕಾಂಗ್ರೆಸ್ ದ್ವೇಷದ ರಾಜಕಾರಣ ಮಾಡುತ್ತಿದೆ ಎಂದು ಆರೋಪಿಸಿದ್ದಾರೆ.



> **ಗಣಿಗಾರಿಕೆಗೆ ಅವಕಾಶ ಕೊಟ್ಟ ಪ್ರದೇಶದ ಸಮೀಪ ಕಿತ್ತೂರು ರಾಣಿ ಚನ್ನಮ್ಮ ವಸತಿ ಶಾಲೆಯಿದೆ. ಅಲ್ಲಿ 300 ಮಕ್ಕಳು ಓದುತ್ತಿದ್ದಾರೆ. ದಿಟ್ಟೂರಹಳ್ಳಿ ಪೊಲೀಸ್ ಠಾಣೆಯಿದೆ. ನಾಲ್ಕು ಗ್ರಾಮಗಳಲ್ಲಿ ಕಲ್ಲು ಕುಟುಕರ 700 ಕುಟುಂಬಸ್ಥರು 1974ರಿಂದ ಜೀವನ ಮಾಡುತ್ತಿದ್ದಾರೆ. ಸ್ಥಳೀಯರು ನನಗೆ ದೂರು ಕೊಟ್ಟಿದ್ದಾರೆ. ಕೈಗಾರಿಕೆ ಸಚಿವರಿಗೆ ದೂರು ಕೊಟ್ಟ ನಂತರ, ಪ್ರಭ ಅರ್ಥ್ ಮೂವರ್ಸ್, ಶಕ್ತಿ ಎಂಟರ್ ಪ್ರೈಸಸ್‌ನ 18.22 ಜಮೀನು ವಜಾಗೊಳಿಸಿದ್ದಾರೆ. ಉಳಿದ 42.05 ಎಕರೆ ವಜಾ ಆಗಿಲ್ಲ. ನೈಸರ್ಗಿಕ ಸಂಪತ್ತು ಲೂಟಿಯಾಗುತ್ತಿದೆ. ಈ ಬಗ್ಗೆ ತನಿಖೆ ಕೈಗೊಂಡು, ಗಣಿಗಾರಿಕೆಯನ್ನು ನಿಷೇಧಿಸಬೇಕು ಎಂದು ಒತ್ತಾಯಿಸಿದರು.**

# ಹದ ಮಳೆಗೆ ಮೊಳಕೆಯೊಡೆದ ರಾಗಿ; ಬಂಪರ್ ಬೆಳೆ

• **ಉದಯವಾಹಿನಿ, ಕನಕಪುರ**

ತಾಲ್ಲೂಕಿನಲ್ಲಿ ಈ ವರ್ಷ ನಿಗದಿತ ಸಮಯ, ಗುರಿಯಂತೆ ಸರಿಯಾಗಿ ರಾಗಿ ಬಿತ್ತನೆ ಪೂರ್ಣಗೊಂಡಿದೆ. ವಾಡಿಕೆಯಂತೆ ಉತ್ತಮ ಮಳೆಯಾಗಿದ್ದು ಸಂತಸಗೊಂಡಿರುವ ರೈತರು ಈ ಬಾರಿ ಉತ್ತಮ ಬೆಳೆಯ ನಿರೀಕ್ಷೆಯಲ್ಲಿದ್ದಾರೆ. ಬಿತ್ತನೆ ಮಾಡಿದ ರಾಗಿ ಮೊಳಕೆ ಒಡೆದು ಪೈರು ಚಿಗುರಿದ್ದು, ಕಳೆ ತೆಗೆದು ಅರಗಣೆ ಮಾಡುವ ಚಟುವಟಿಕೆಯಲ್ಲಿ ರೈತರು ನಿರತರಾಗಿದ್ದಾರೆ.

ಕನಕಪುರ ತಾಲ್ಲೂಕಿನಲ್ಲಿ ಒಟ್ಟು 18ಸಾವಿರ ಹೆಕ್ಟೇರ್‌ನಲ್ಲಿ ರಾಗಿ ಬಿತ್ತನೆ ಗುರಿ ಪೈಕಿ ಈಗಾಗಲೇ 17,648 ಹೆಕ್ಟೇರ್ ಭೂಮಿಯಲ್ಲಿ ರಾಗಿ ಬಿತ್ತನೆ ಕಾರ್ಯ ಮುಗಿದಿದೆ.

ವಾಡಿಕೆಯಂತೆ ರಾಗಿ ಬಿತ್ತನೆ ಕಾರ್ಯಕ್ಕೆ ಆಗಸ್ಟ್ 16 ಕೊನೆಯಾಗಿದ್ದು, ಅಷ್ಟರೊಳಗೆ ಬಿತ್ತನೆ ಕಾರ್ಯವು ಪೂರ್ಣಗೊಳ್ಳಬೇಕು. ಈ ಸಮಯದಲ್ಲಿ ಬಿತ್ತನೆ ಮಾಡಿದರೆ ಹದವಾಗಿ ಮಳೆ ಬಿದ್ದರೆ ರಾಗಿ ಚೆನ್ನಾಗಿ ಮೊಳಕೆ ಒಡೆದು ಪೈರು ಬರುತ್ತದೆ. ಅ.15ರ ಒಳಗೆ ತಾಲ್ಲೂಕಿನಲ್ಲಿ ನಿಗದಿತ ಗುರಿಯಂತೆ ಶೇಕಡ 95ರಷ್ಟು ರಾಗಿ ಬಿತ್ತನೆ ಕಾರ್ಯ ಮುಗಿದಿದೆ. ಉಯ್ಯಂಬಳ್ಳಿ ಹೋಬಳಿಯಲ್ಲಿ ಈ ಬಾರಿ ಮುಂಗಾರು ಮಳೆ ಸ್ವಲ್ಪ ತಡವಾಗಿ ಬಿದ್ದ ಕಾರಣ ಅಲ್ಲಿ 3,106 ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆ ಕಾರ್ಯ ಆಗಬೇಕಿದ್ದು ಈಗ 2.850 ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆಯಾಗಿದೆ. ಇನ್ನೂ 256 ಹೆಕ್ಟೇರ್ ಪ್ರದೇಶದಲ್ಲಿ ರಾಗಿ ಬಿತ್ತನೆ ಕಾರ್ಯ ಬಾಕಿ ಉಳಿದಿದೆ.



> **ಈ ಬಾರಿ ತಾಲ್ಲೂಕಿನಲ್ಲಿ ಉತ್ತಮ ಮಳೆಯಾಗಿ ಸಮಯಕ್ಕೆ ಸರಿಯಾಗಿ ಬಿತ್ತನೆ ಆಗಿದೆ. ಕೃಷಿ ಅಧಿಕಾರಿಗಳು ಜಮೀನಿಗೆ ಭೇಟಿ ನೀಡಿ ರೈತರಿಗೆ ಸಲಹೆ ಸೂಚನೆ ನೀಡಬೇಕು. ರಿಯಾಯಿತಿ ದರದಲ್ಲಿ ಸುಲಭವಾಗಿ ಕೃಷಿ ಯಂತ್ರೋಪಕರಣ ಬಾಡಿಗೆಗೆ ಸಿಗುವಂತೆ ಮಾಡಬೇಕುರಸಗೊಬ್ಬರ ಕೊರತೆ ಆಗದಂತೆ ನೋಡಿಕೊಳ್ಳಬೇಕು**

# ಅಂಗನವಾಡಿ ಕಾರ್ಯಕರ್ತೆಯರ ಪ್ರತಿಭಟನೆ

• **ಉದಯವಾಹಿನಿ, ಗೌರಿಬಿದನೂರು**

ನಗರದ ಮಹಿಳಾ ಮತ್ತು ಶಿಶು ಅಭಿವೃದ್ಧಿ ಇಲಾಖೆ ಕಚೇರಿ ಮುಂಭಾಗದಲ್ಲಿ ಸಿಐಟಿಯು ವತಿಯಿಂದ ಅಂಗನವಾಡಿ ಕಾರ್ಯಕರ್ತೆಯರು ಕಪ್ಪುಪಟ್ಟಿ ಧರಿಸಿ, ಕಪ್ಪುದಿನ ಆಚರಿಸಿದರು.ಸಿಐಟಿಯು ಜಿಲ್ಲಾ ಪ್ರಧಾನ ಕಾರ್ಯದರ್ಶಿ ಸಿದ್ದಗಂಗಪ್ಪ ಮಾತನಾಡಿ, ಅಂಗನವಾಡಿ ನೌಕರರ ಅಖಿಲ ಭಾರತ ಫೆಡರೇಶನ್ ವತಿಯಿಂದ ದೇಶದಾದ್ಯಂತ ಕಪ್ಪು ದಿನ ಆಚರಿಸಲಾಗುತ್ತಿದೆ.

ಅಂಗನವಾಡಿಗಳಲ್ಲಿ 6 ತಿಂಗಳಿಂದ 6 ವರ್ಷದವರೆಗಿನ ಮಕ್ಕಳು, ಗರ್ಭಿಣಿಯರು ಮತ್ತು ಬಾಣಂತಿಯರಿಗೆ ರಕ್ತಹೀನತೆ ಕಡಿಮೆ ಮಾಡಲು ಪೌಷ್ಟಿಕ ಆಹಾರ ನೀಡಲಾಗುತ್ತಿದೆ. ಆದರೆ, ಕೇಂದ್ರ ಸರ್ಕಾರ ಇತ್ತೀಚೆಗೆ ಜಾರಿಗೆ ತಂದಿರುವ ಎಫ್ಆರ್‌ಎಸ್ ಯೋಜನೆಯಿಂದ ಫಲಾನುಭವಿಯ ಮುಖಚಿತ್ರ ಸೆರೆ ಹಿಡಿದು ಅಪ್ಲೋಡ್ ಮಾಡಲು ಸಮಸ್ಯೆಯಾಗುತ್ತಿದೆ ಎಂದರು.

ಹೀಗಾಗಿ, ಎಫ್ಆರ್‌ಎಸ್ ಅನ್ನು ರದ್ದುಪಡಿಸಿ, ಹಳೆಯ ಯೋಜನೆ ಐಎಸ್‌ಡಿಎಸ್ ಯೋಜನೆಯನ್ನೇ ಮುಂದುವರೆಸಬೇಕು. ಅಂಗನವಾಡಿ ಕಾರ್ಯಕರ್ತೆಯರಿಗೆ ಉದ್ಯೋಗ ಭದ್ರತೆ ಮತ್ತು ಉತ್ತಮ ವೇತನ ನೀಡಬೇಕು. ಇಲ್ಲವಾದರೆ, ಮುಂದಿನ ದಿನಗಳಲ್ಲಿ ಉಗ್ರ ಹೋರಾಟ ಮಾಡಲಾಗುವುದು ಎಂದು ಎಚ್ಚರಿಕೆ ನೀಡಿದರು.




> **ಇಲಾಖೆಗೆ ಅಪ್ಲೋಡ್ ಮಾಡುವಾಗ ಕೆಲವು ಫಲಾನುಭವಿಗಳ ಮುಖಚಿತ್ರ ಸರಿಯಾಗಿ ಸೆರೆ ಹಿಡಿಯಲಾಗುವುದಿಲ್ಲ. ಮಕ್ಕಳ ಆಧಾರ್ ಕಾರ್ಡ್ ಇರುವುದಿಲ್ಲ. ಕೆಲವು ಫಲಾನುಭವಿಗಳ ಬಳಿ ಫೋನ್ ನಂಬರ್ ಇರುವುದಿಲ್ಲ. ಕೆಲವರಿಗೆ ಒಟಿಪಿ ಹೇಳಲು ಬರುವುದಿಲ್ಲ. ಸರ್ವರ್ ಸಮಸ್ಯೆ ಸೇರಿದಂತೆ ಇನ್ನಿತರ ಸಮಸ್ಯೆಗಳಿಂದಾಗಿ ಫಲಾನುಭವಿಗಳು ಆಹಾರ ಪದಾರ್ಥಗಳಿಂದ ವಂಚಿತರಾಗುವ ಸಾಧ್ಯತೆ ಹೆಚ್ಚಾಗಿದೆ ಎಂದು ಹೇಳಿದರು.**

# ಹುಚ್ಚು ನಾಯಿ ಕಡಿತ: ವ್ಯಕ್ತಿಗೆ ಗಾಯ

• **ಉದಯವಾಹಿನಿ, ಗುಂಡ್ಲುಪೇಟೆ**

ಪಟ್ಟಣದ ಹೊರವಲಯದ ಮೈಸೂರು ರಸ್ತೆಯಲ್ಲಿರುವ ಕಾರ್ ಗ್ಯಾರೇಜ್ ವೊಂದರ ಬಳಿ ಹುಚ್ಚುನಾಯಿ ಕಡಿತದಿಂದ ಕಾರ್ಮಿಕರೊಬ್ಬರು ಗಂಭೀರವಾಗಿ ಗಾಯಗೊಂಡಿದ್ದಾರೆ. ರಾಷ್ಟ್ರೀಯ ಹೆದ್ದಾರಿ-766ರಲ್ಲಿರುವ ತಾಜ್ ಕಾರ್ ಗ್ಯಾರೇಜ್ ನಲ್ಲಿ ಕೆಲಸ ಮಾಡುವ ಅಬ್ದುಲ್ ಖಾಲಿಕ್ ನಾಯಿ ಕಡಿತಕ್ಕೆ ಒಳಗಾದವರು. ಎಂದಿನಂತೆ ಗ್ಯಾರೇಜ್ ಕೆಲಸ ಮುಗಿಸಿ ಮನೆಗೆ ಹೊರಡುವಾಗ ಏಕಾಏಕಿ ಹುಚ್ಚುನಾಯಿ ದಾಳಿ ಮಾಡಿದೆ. ಕೂಡಲೇ ಅವರನ್ನು ಗುಂಡ್ಲುಪೇಟೆ ಸಾರ್ವಜನಿಕ ಆಸ್ಪತ್ರೆಗೆ ಕರೆದೊಯ್ದು ಚಿಕಿತ್ಸೆ ಕೊಡಿಸಲಾಯಿತು. ವೈದ್ಯರ ಸಲಹೆಯಂತೆ ಮೈಸೂರಿನ ಖಾಸಗಿ ಆಸ್ಪತ್ರೆಗೆ ದಾಖಲು ಮಾಡಲಾಗಿದೆ. ಪಟ್ಟಣ ವ್ಯಾಪ್ತಿಯಲ್ಲಿ ಬೀದಿ ನಾಯಿಗಳ ಹಾವಳಿ ಮಿತಿಮೀರಿದ್ದು ಮಕ್ಕಳು ವೃದ್ಧರು ಒಂಟಿಯಾಗಿ ತಿರುಗಾಡಲು ಭಯಪಡುವಂತಾಗಿದೆ. ಪುರಸಭೆ ಬೀದಿನಾಯಿಗಳಿಗೆ ಕಡಿವಾಣ ಹಾಕಬೇಕು ಎಂದು ಕರ್ನಾಟಕ ಕಾವಲು ಪಡೆಯ ತಾಲ್ಲೂಕು ಅಧ್ಯಕ್ಷ ಎ.ಅಬ್ದುಲ್ ಮಾಲಿಕ್ ಒತ್ತಾಯಿಸಿದ್ದಾರೆ.



# ಗಣೇಶೋತ್ಸವಕ್ಕೆ ಸಿದ್ಧತೆ: 40 ಸೂಕ್ಷ್ಮ ಪ್ರದೇಶದಲ್ಲಿ ಮುನ್ನೆಚ್ಚರಿಕೆ

• **ಉದಯವಾಹಿನಿ, ಮೈಸೂರು**

ಜಿಲ್ಲೆಯಲ್ಲಿ 2 ಸಾವಿರಕ್ಕೂ ಅಧಿಕ ಗಣೇಶೋತ್ಸವ ಸಮಿತಿಗಳು ಹಬ್ಬದ ಆಚರಣೆಗೆ ಸಿದ್ಧತೆ ನಡೆಸುತ್ತಿದ್ದು, ಜಿಲ್ಲೆ ಹಾಗೂ ನಗರ ಪೊಲೀಸರು ಧಾರ್ಮಿಕ ಮುಖಂಡರ ಶಾಂತಿ ಸಭೆ ನಡೆಸಿ, ಶಾಂತಿ ಸೌಹಾರ್ದದ ಪಾಠ ಹೇಳುತ್ತಿದ್ದಾರೆ. ಜಿಲ್ಲೆ ಹಾಗೂ ನಗರ ವ್ಯಾಪ್ತಿಯ ಎಲ್ಲಾ ಠಾಣೆಗಳಲ್ಲಿ ಸ್ಥಳೀಯ ಮುಖಂಡರ ಶಾಂತಿ ಸಭೆಯ ಬಳಿಕ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎನ್.ವಿಷ್ಣುವರ್ಧನ್ ಹಾಗೂ ನಗರ ಪೊಲೀಸ್ ಆಯುಕ್ತ ಸೀಮಾ ಲಾಟ್ಕರ್ ತಮ್ಮ ಕಚೇರಿಯಲ್ಲಿ ಸಭೆ ನಡೆಸಿ ಶಾಂತಿಯುತವಾಗಿ ಗಣೇಶೋತ್ಸವ ಹಾಗೂ ಈದ್ ಮಿಲಾದ್ ಆಚರಣೆಗೆ ಸಲಹೆ ನೀಡಿದ್ದಾರೆ.

ಗಣೇಶೋತ್ಸವ ಆಚರಿಸಲು ಸಮಿತಿಗಳಿಗೆ ಏಕಗವಾಕ್ಷಿ (ಸಿಂಗಲ್ ವಿಂಡೋ) ಅನುಮತಿ ನೀಡಲು ಜಿಲ್ಲಾ ಪೊಲೀಸರು ಚಿಂತನೆ ನಡೆಸಿದ್ದು, ಜಿಲ್ಲಾಧಿಕಾರಿಯೊಂದಿಗೆ ಚರ್ಚಿಸಿದ್ದಾರೆ. ಕಮಿಷನರೇಟ್ ವ್ಯಾಪ್ತಿಯಲ್ಲಿ ಗಣೇಶ ಪ್ರತಿಷ್ಠಾಪನೆ ಮಾಡಲು ಅನುಮತಿಗಾಗಿ ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿ ವ್ಯವಸ್ಥೆ ಮಾಡಿದ್ದು, ಎಲ್ಲಾ ಇಲಾಖೆಯ ಅಧಿಕಾರಿಗಳೂ ಒಂದೇ ಸ್ಥಳದಲ್ಲಿ ಲಭ್ಯರಿದ್ದಾರೆ.

**ಪೊಲೀಸ್ ಭದ್ರತೆ:** ಗಣೇಶ ವಿಸರ್ಜನೆ ಮೆರವಣಿಗೆ ಹಾಗೂ ಈದ್ ಮಿಲಾದ್ ಸಮಯದಲ್ಲಿ ನಡೆಯುವ 'ಚಾಂದ್' ಮೆರವಣಿಗೆಗೆ ಭದ್ರತೆ ಒದಗಿಸುವ ಬಗ್ಗೆ ಪೊಲೀಸ್ ಅಧಿಕಾರಿಗಳು ವಿವಿಧ ಹಂತದ ಸಭೆ ನಡೆಸಿದ್ದು, ಸೂಕ್ಷ್ಮ ಸ್ಥಳಗಳಲ್ಲಿ ಹೆಚ್ಚಿನ ಭದ್ರತೆ ನಿಯೋಜಿಸುವ ಕುರಿತು ಚರ್ಚಿಸಿದರು. 'ಜಿಲ್ಲಾ ಪೊಲೀಸ್ ವ್ಯಾಪ್ತಿಯಲ್ಲಿ 1,724 ಸಮಿತಿಗಳು ಗಣೇಶೋತ್ಸವ ಆಚರಿಸುತ್ತಿದ್ದು, 40 ಕಡೆ ಸೂಕ್ಷ್ಮ ಪ್ರದೇಶ ಗುರುತಿಸಿದ್ದೇವೆ. ಯಾವುದೇ ತೊಂದರೆ ಇಲ್ಲದ ಹಬ್ಬ ನಡೆಸಲು ಭದ್ರತೆ ಒದಗಿಸಲಿದ್ದೇವೆ' ಎಂದು ಎಸ್‌ಪಿ ಮಲ್ಲಿಕ್ 'ತಿಳಿಸಿದರು. ಕಮಿಷನರೇಟ್ ವ್ಯಾಪ್ತಿಯಲ್ಲಿ ಕಳೆದ ವರ್ಷ ಒಟ್ಟು 567 ಸಮಿತಿಗಳು ಗಣೇಶೋತ್ಸವಕ್ಕೆ ಅನುಮತಿ ಪಡೆದಿದ್ದವು. ಈ ವರ್ಷದ ಗಣೇಶೋತ್ಸವಕ್ಕೆ ಅರ್ಜಿ ಸ್ವೀಕರಿಸಲಾಗುತ್ತಿದೆ.

'ನಗರ ಪೊಲೀಸ್ ಠಾಣೆಗಳಲ್ಲಿ ಶಾಂತಿ ಸಭೆ ನಡೆಸಿ ಗಣೇಶ ಪ್ರತಿಷ್ಠಾಪನೆ ಮಾಡುವ ಸ್ಥಳ ಸಾರ್ವಜನಿಕ ಸ್ಥಳವಾಗಿದ್ದರೆ ಪಾಲಿಕೆ. ಪ್ರಾಧಿಕಾರ ಮತ್ತು ಖಾಸಗಿ ಜಾಗವಾಗಿದ್ದರೆ ಅದರ ಮಾಲೀಕರಿಂದ ಅನುಮತಿ ಪಡೆಯಬೇಕು. ಆ ಸ್ಥಳದಲ್ಲಿ ಸಾರ್ವಜನಿಕರು ಮತ್ತು ವಾಹನಗಳ ಸಂಚಾರಕ್ಕೆ ತೊಂದರೆ ಆಗದಂತೆ ನೋಡಿಕೊಳ್ಳಬೇಕು ಮತ್ತು ಸಂಚಾರ ವಿಭಾಗದಿಂದ ನಿರಾಕ್ಷೇಪಣಾ ಪತ್ರ ಪಡೆಯಬೇಕು' ಎಂದು ಪೊಲೀಸ್ ಅಧಿಕಾರಿಗಳು ಮುಖಂಡರಿಗೆ ಸೂಚಿಸಿದ್ದಾರೆ.

> **ಗಣೇಶ ಮೂರ್ತಿ ಮೆರವಣಿಗೆಯಲ್ಲಿ ಡಿಜೆ ಬಳಸುವಂತಿಲ್ಲ. ನ್ಯಾಯಾಲಯದ ಸೂಚನೆಯಂತೆ ಸೌಂಡ್ ಡೆಸಿಬಲ್ 70 ಮೀರುವಂತಿಲ್ಲ. ಅನುಮತಿ ಪಡೆದ ಮಾರ್ಗದಲ್ಲಿ ಮಾತ್ರ ಸಂಚರಿಸಬೇಕು. ವಿಗ್ರಹ ವಿಸರ್ಜನೆ ಸ್ಥಳದಲ್ಲಿ ಸಿಸಿಟಿವಿ ಕ್ಯಾಮೆರಾ ಅಳವಡಿಸಬೇಕು' ಎಂದು ಹೇಳಿದ್ದಾರೆ.**


ಉದಯವಾಹಿನಿ ಚಿತ್ರ

## ಸಾಮಾಜಿಕ ಮಾಧ್ಯಮಗಳ ಮೇಲೆ ಹದ್ದಿನ ಕಣ್ಣು

**ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡುವ ಪೋಸ್ಟ್‌ಗಳ ಮೇಲೆ ಪೊಲೀಸ್ ಇಲಾಖೆ ಹದ್ದಿನ ಕಣ್ಣು ಇಟ್ಟಿದೆ. ಈಗಾಗಲೇ ಅದಕ್ಕಾಗಿ ಪ್ರತ್ಯೇಕ ಸಿಬ್ಬಂದಿಯಿದ್ದು ಹಬ್ಬದ ಸಮಯದಲ್ಲಿ ಸಾಮಾಜಿಕ ಮಾಧ್ಯಮದಲ್ಲಿ ಹರಿದಾಡುವ ಸೂಕ್ಷ್ಮ ವಿಚಾರಗಳ ಬಗ್ಗೆ ಗಮನಹರಿಸಲಿದ್ದಾರೆ. ಅನ್ಯ ಧರ್ಮೀಯರ ಭಾವನೆಗೆ ಧಕ್ಕೆ ತರುವ ಪೋಸ್ಟ್‌ಗಳು ಕಂಡುಬಂದರೆ ಅವರ ವಿರುದ್ಧ ಇಲಾಖೆ ಕ್ರಮವಹಿಸಲಿದೆ.**

> **ಹಬ್ಬದಲ್ಲಿ ಮೈಸೂರಿನಲ್ಲಿ ಗಲಭೆ ನಡೆದಿಲ್ಲ. ಆ ಪರಂಪರೆ ಮುಂದುವರಿಸುತ್ತೇವೆ. ಸಾರ್ವಜನಿಕ ಗಣೇಶೋತ್ಸವ ಮೆರವಣಿಗೆಯಲ್ಲಿ ಚರ್ಚ್ ಮಸೀದಿ ಮುಖಂಡರೂ ನಮ್ಮನ್ನು ಸ್ವಾಗತಿಸುತ್ತಾರೆ**
> **ಸಿ.ಕೆ.ರುದ್ರಮೂರ್ತಿ ಮಾಧವ ಕೃಪಾ**
> **ಗಣೇಶೋತ್ಸವ ಸಮಿತಿ ಸಂಚಾಲಕ**

# ಗಾರ್ಮೆಂಟ್ಸ್ ಕಾರ್ಮಿಕರ ವಜಾ: ನೌಕರರ ಪ್ರತಿಭಟನೆ

## ಭಾರತದ ಮೇಲೆ ಅಮೆರಿಕ ಸುಂಕ ಕಾರ್ಮಿಕರಿಗೆ ವೇತನ, ಪಿಎಫ್ ವೆಚ್ಚವನ್ನು ಭರಿಸಲು ಸಾಧ್ಯವಾಗುತ್ತಿಲ್ಲ: ಮಹೇಂದರ್

• **ಉದಯವಾಹಿನಿ, ಬಾಗೇಪಲ್ಲಿ**

ಇಲ್ಲಿನ ಟೋಲ್ ಪ್ಲಾಜಾ ಪಕ್ಕದಲ್ಲಿರುವ ಚೌದರಿ ಗಾರ್ಮೆಂಟ್ಸ್‌ನಲ್ಲಿ ಕೆಲಸ ಮಾಡುತ್ತಿದ್ದ ಸುಮಾರು 130 ಕಾರ್ಮಿಕರನ್ನು ಏಕಾಏಕಿ ಕೆಲಸದಿಂದ ವಜಾ ಮಾಡಲಾಗಿದೆ ಎಂದು ಆರೋಪಿಸಿ ಗಾರ್ಮೆಂಟ್ಸ್ ಎದುರು ಕಾರ್ಮಿಕರು ಪ್ರತಿಭಟನೆ ನಡೆಸಿದರು. ರಾಷ್ಟ್ರೀಯ ಹೆದ್ದಾರಿ-44ರ ಟೋಲ್ ಪ್ಲಾಜಾದ ಬಳಿಯ ಚೌದರಿ ಗಾರ್ಮೆಂಟ್ಸ್‌ನಲ್ಲಿ ಘಂಟಂವಾರಿಪಲ್ಲಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಪುಟ್ಟಪರ್ತಿ, ಕೊಂಡರೆಡ್ಡಿಪಲ್ಲಿ, ಅದಿಗಾನಹಳ್ಳಿ ಸೇರಿದಂತೆ 500ಕ್ಕೂ ಹೆಚ್ಚು ಮಂದಿ ಕಾರ್ಮಿಕರು ಕೆಲಸ ಮಾಡುತ್ತಿದ್ದಾರೆ. ಆದರೆ, ಸಂಜೆ ಗಾರ್ಮೆಂಟ್ಸ್ ವ್ಯವಸ್ಥಾಪಕ ಮಹೇಂದರ್ ಅವರು, 130 ಕಾರ್ಮಿಕರನ್ನು ಕೆಲಸದಿಂದ ತೆಗೆದು ಹಾಕಲಾಗಿದೆ ಎಂದು ಹೇಳುತ್ತಿದ್ದಾರೆ ಎಂದು ಪ್ರತಿಭಟನಕಾರರು ದೂರಿದರು.

ಕಾರ್ಮಿಕರಿಗೆ ನೋಟಿಸ್ ನೀಡದೆ, ಏಕಾಏಕಿ ಕೆಲಸದಿಂದ ತೆಗೆದು ಹಾಕಲಾಗಿದೆ. ಕಾರ್ಮಿಕರು ಚೀಟಿ, ಮನೆ ಹಾಗೂ ಆರೋಗ್ಯ ಚಿಕಿತ್ಸೆ, ಸಾಲ ತೀರಿಸುವುದು ಸೇರಿದಂತೆ ವಿವಿಧ ಖರ್ಚುಗಳಿಗಾಗಿ ವೇತನವನ್ನೇ ನಂಬಿಕೊಂಡು ಕೆಲಸ ಮಾಡುತ್ತಿದ್ದೇವೆ. ನಮ್ಮಿಂದ ಕಂಪನಿಗೆ ಯಾವುದೇ ತೊಂದರೆ ಇಲ್ಲ. ಆದರೆ, ಏಕಾಏಕಿ 130 ಕಾರ್ಮಿಕರನ್ನು ಕೆಲಸದಿಂದ ತೆಗೆಯಲು ಕಾರಣವೇನು ಎಂದು ಪ್ರತಿಭಟನಕಾರರು ಪ್ರಶ್ನಿಸಿದರು.

ಪ್ರತಿಭಟನಾ ಸ್ಥಳಕ್ಕೆ ಗಾರ್ಮೆಂಟ್ಸ್ ಅಧಿಕಾರಿಗಳು ಬರದಿದ್ದಕ್ಕೆ ಆಕ್ರೋಶಗೊಂಡ ಕಾರ್ಮಿಕರು, ಗಾರ್ಮೆಂಟ್ ಕೊಠಡಿಗಳಿಗೆ ನುಗ್ಗಿ ಕೆಲಸ ಮಾಡುತ್ತಿದ್ದ ಕಾರ್ಮಿಕರನ್ನು ತಮಗೆ ಬೆಂಬಲಿಸುವಂತೆ ಮನವಿ ಮಾಡಿದರು. ಇದರಿಂದಾಗಿ ಕಾರ್ಖಾನೆಯಲ್ಲಿ ಕೆಲಹೊತ್ತು ಕೆಲಸ ಸ್ಥಗಿತಗೊಂಡಿತು. ಸಿಐಟಿಯುನ ಕಾರ್ಮಿಕ ಮುಖಂಡ ಡಿ.ಟಿ.ಮುನಿಸ್ವಾಮಿ, ಕೆ.ಮುನಿಯಪ್ಪ, ಅಶ್ವಥಪ್ಪ, ಜಿ.ಕೃಷ್ಣಪ್ಪ, ದಲಿತ ಸಂಘಟನೆಯ ಕೆ.ವೆಂಕಟೇಶ್ ನೇತೃತ್ವದಲ್ಲಿ ಗಾರ್ಮೆಂಟ್ ಮುಂದೆ ಕಾರ್ಮಿಕರು ಪ್ರತಿಭಟನೆ ಮುಂದುವರೆಸಿದರು. ಪ್ರತಿಭಟನೆ ತೀವ್ರಗೊಳ್ಳುತ್ತಿದ್ದಂತೆ ಸ್ಥಳಕ್ಕೆ ಸಬ್ ಇನ್‌ಸ್ಪೆಕ್ಟರ್ ನಾಗಮ್ಮ, ಸಹಾಯಕ ಸಬ್ ಇನ್‌ಸ್ಪೆಕ್ಟರ್ ಹನುಮಂತರಾಯಪ್ಪ, ಗಾರ್ಮೆಂಟ್ಸ್ ವ್ಯವಸ್ಥಾಪಕ ಮಹೇಂದರ್ ಪ್ರತಿಭಟನಕಾರರ ಸಮಸ್ಯೆಗಳನ್ನು ಆಲಿಸುವ ಮೂಲಕ ಮನವೊಲಿಕೆಗೆ ಯತ್ನಿಸಿದರು. ಕೆಲಸದಿಂದ ತೆಗೆಯಲಾದ ಕಾರ್ಮಿಕರನ್ನು ಮತ್ತೆ ಕೆಲಸಕ್ಕೆ ಸೇರಿಸಿಕೊಳ್ಳಬೇಕು. ವೇತನ. ಪಿಎಫ್ ಹಣವನ್ನು ಸಕಾಲಕ್ಕೆ ವಿತರಣೆ ಮಾಡಬೇಕು. ಇಲ್ಲವಾದರೆ, ಅನಿರ್ದಿಷ್ಟಾವಧಿ ಪ್ರತಿಭಟನೆ ಮಾಡಲಾಗುವುದು ಎಂದು ಪ್ರತಿಭಟನಕಾರರು ಎಚ್ಚರಿಕೆ ನೀಡಿದರು.

ಗಾರ್ಮೆಂಟ್ ವ್ಯವಸ್ಥಾಪಕ ಮಹೇಂದರ್ ಪ್ರತಿಕ್ರಿಯಿಸಿ ಭಾರತದ ಮೇಲೆ ಅಮೆರಿಕ ವಿಧಿಸಿದ ಹೆಚ್ಚುವರಿ ಸುಂಕದಿಂದ ಹೆಚ್ಚು ಕಾರ್ಮಿಕರಿಗೆ ವೇತನ, ಪಿಎಫ್ ಸೇರಿದಂತೆ ಇನ್ನಿತರ ವೆಚ್ಚವನ್ನು ಭರಿಸಲು ಸಾಧ್ಯವಾಗುತ್ತಿಲ್ಲ. ಇದರಿಂದಾಗಿ ಅನಿವಾರ್ಯವಾಗಿ ಕಾರ್ಮಿಕರನ್ನು ಕೆಲಸದಿಂದ ತೆಗೆಯಲಾಗಿದೆ ಎಂದು ಸಮುಜಾಯಿಷಿ ನೀಡಿದರು. ನಮಗೆ ಕೆಲಸ ಕೊಟ್ಟರೆ ಮಾಡಲು ಸಿದ್ಧರಿದ್ದೇವೆ. ನಮ್ಮನ್ನು ಏಕಾಏಕಿ ಕೆಲಸದಿಂದ ತೆಗೆಯಬೇಡಿ' ಎಂದು ಕಾರ್ಮಿಕರು ಮನವಿ ಮಾಡಿದರು.



> **ಗಾರ್ಮೆಂಟ್ ವ್ಯವಸ್ಥಾಪಕ ಮಹೇಂದರ್, ಮುಖ್ಯಸ್ಥರೊಡನೆ ಮಾತನಾಡಿದರು. ಕಾರ್ಮಿಕರನ್ನು ಕೆಲಸದಲ್ಲಿ ಮುಂದುವರೆಸುವಂತೆ, ಹಾಗೂ ಗುರುವಾರದ ವೇತನ ಕಡಿತ ಮಾಡದೆ ಕಾರ್ಮಿಕರಿಗೆ ವಿತರಿಸುವಂತೆ ಮುಖ್ಯಸ್ಥರು ತಿಳಿಸಿದ್ದಾರೆ ಎಂದು ಘೋಷಿಸಿದರು. ಆಗ ಕಾರ್ಮಿಕರು ಪ್ರತಿಭಟನೆ ವಾಪಸ್ ಪಡೆದರು.**

> **ಕಾರ್ಮಿಕರು ಮನೆ ಆಳುಗಳಲ್ಲ' ಕಾರ್ಮಿಕರು ಇಷ್ಟ ಬಂದಾಗ ಕೆಲಸ ಮಾಡಿಸೋದು ಕಷ್ಟ ಆದಾಗ ಮನೆಗೆ ಕಳಿಸೋದು ಅಲ್ಲ. ಕಾರ್ಮಿಕರಿಗೂ ಬಾಧ್ಯತೆಗಳಿರುತ್ತವೆ. ತಮ್ಮ ಮನೆ ಮಕ್ಕಳ ಶಾಲಾ ಶುಲ್ಕ ಸೇರಿದಂತೆ ಇನ್ನಿತರ ವೆಚ್ಚಗಳಿಗಾಗಿ ವೇತನವನ್ನೇ ನಂಬಿಕೊಂಡಿರುತ್ತಾರೆ ಎಂದು ಸಿಐಟಿಯು ತಾಲ್ಲೂಕು ಮುಖಂಡ ಕೆ.ಮುನಿಯಪ್ಪ ಹೇಳಿದರು. ಕಾರ್ಮಿಕರನ್ನು ಕೆಲಸದಿಂದ ತೆಗೆಯಬೇಕಾದರೆ ಮೂರು ತಿಂಗಳ ಮುಂಚಿತವಾಗಿ ನೋಟಿಸ್ ನೀಡಬೇಕು. ಆ ನೋಟಿಸ್‌ಗೆ ಕಾರ್ಮಿಕರಿಂದ ಉತ್ತರ ಪಡೆಯಬೇಕು. ಆದರೆ ಏಕಾಏಕಿ 130 ಕಾರ್ಮಿಕರನ್ನು ಕೆಲಸದಿಂದ ತೆಗೆದಿರುವುದು ಕಾರ್ಮಿಕ ಕಾಯ್ದೆಗಳ ಉಲ್ಲಂಘನೆ. ವಜಾಗೊಳಿಸಿದ ಕಾರ್ಮಿಕರನ್ನು ತಕ್ಷಣವೇ ಕೆಲಸಕ್ಕೆ ಸೇರಿಸಿಕೊಳ್ಳಬೇಕು ಎಂದು ಆಗ್ರಹಿಸಿದರು.**

# ನಗರಕ್ಕೆ ನೀರು: ರೂ.500 ಕೋಟಿಗೆ ಸರ್ಕಾರಕ್ಕೆ ಬೇಡಿಕೆ

• **ಉದಯವಾಹಿನಿ, ತುಮಕೂರು**

ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ವ್ಯವಸ್ಥಿತವಾಗಿ ಕುಡಿಯುವ ನೀರು ಸರಬರಾಜು ಮಾಡಲು, ಒಳಚರಂಡಿ ವ್ಯವಸ್ಥೆಯನ್ನು ಸರಿಪಡಿಸಲು ರೂ.500 ಕೋಟಿ ವಿಶೇಷ ಅನುದಾನ ನೀಡುವಂತೆ ನಗರ ಶಾಸಕ ಜಿ.ಬಿ.ಜ್ಯೋತಿಗಣೇಶ್ ಒತ್ತಾಯಿಸಿದ್ದಾರೆ. ವಿಧಾನಸಭೆ ಅಧಿವೇಶನದಲ್ಲಿ ಮಾತನಾಡಿದ ಅವರು, ಕಳೆದ ಹತ್ತು ವರ್ಷಗಳ ಹಿಂದೆ ಜನ ಸಂಖ್ಯೆ, ನಗರದ ಅಭಿವೃದ್ಧಿಯನ್ನು ದೃಷ್ಟಿಯಲ್ಲಿ ಇಟ್ಟುಕೊಂಡು ರೂ 200 ಕೋಟಿಯಿಂದ ರೂ.300 ಕೋಟಿ ವೆಚ್ಚದಲ್ಲಿ ಕುಡಿಯುವ ನೀರು, ಒಳಚಂರಡಿ ವ್ಯವಸ್ಥೆ ಕಲ್ಪಿಸಲಾಗಿದೆ. ಒಂದು ದಶಕದ ಅವಧಿಯಲ್ಲಿ ನಗರದ ಜನ ಸಂಖ್ಯೆ ಹಾಗೂ ಮನೆಗಳ ನಿರ್ಮಾಣ ದುಪ್ಪಟ್ಟಾಗಿದೆ. ಎಲ್ಲರಿಗೂ ಸಮರ್ಪಕವಾಗಿ ಕುಡಿಯುವ ನೀರು, ಮೂಲ ಸೌಕರ್ಯ ಕಲ್ಪಿಸಲು ನೆರವು ನೀಡಬೇಕು' ಎಂದು ಮನವಿ ಮಾಡಿದರು.

ನಗರದಲ್ಲಿ ಸಮರ್ಪಕವಾಗಿ ಕುಡಿಯುವ ನೀರು ಸರಬರಾಜು ಮಾಡಲು ಹೊಸದಾಗಿ 15 ಮೇಲ್ಮಟ್ಟದ ಟ್ಯಾಂಕ್‌ಗಳನ್ನು ನಿರ್ಮಿಸಬೇಕಿದೆ. ಜಲಸಂಗ್ರಹಗಾರ, ಪೈಪ್‌ಲೈನ್ ನಿರ್ಮಾಣ ಮಾಡಬೇಕಿದೆ ಎಂದರು. ಎರಡನೇ ಹಂತದ ಒಳಚರಂಡಿ ವ್ಯವಸ್ಥೆ ಕಾರ್ಯಗತಗೊಳಿಸಬೇಕಿದ್ದು, 51 ಬ್ಲಾಕ್ ಸ್ಪಾಟ್‌ಗಳು ಅಡ್ಡ ಬಂದಿವೆ. ಇಂತಹ ಸ್ಥಳಗಳಲ್ಲಿ ಭೂ ಸ್ವಾಧೀನ ಮಾಡಬೇಕಿದೆ. ಒಳಚರಂಡಿ ವ್ಯವಸ್ಥೆ ಸರಿ ಇಲ್ಲದೆ ಮಳೆ ಬಂದ ಸಮಯದಲ್ಲಿ ಮ್ಯಾನ್‌ಹೋಲ್‌ಗಳಲ್ಲಿ ಚರಂಡಿ ನೀರು ಉಕ್ಕುತ್ತಿದೆ. ಇದರಿಂದ ಸಾರ್ವಜನಿಕರು ಸಾಕಷ್ಟು ಸಮಸ್ಯೆ ಎದುರಿಸಬೇಕಾಗಿದೆ.

ಮಳೆ ಬಂದ ಸಮಯದಲ್ಲಿ ತಗ್ಗು ಪ್ರದೇಶಗಳ ಮನೆಗಳಿಗೆ ಚರಂಡಿ ನೀರು ನುಗ್ಗಿ ಸಮಸ್ಯೆಯಾಗುತ್ತಿದೆ. ಹೆಚ್ಚುವರಿ ಅನುದಾನ ನೀಡಿದರೆ ಸಮಸ್ಯೆ ಸರಿಪಡಿಸಬಹುದು ಎಂದು ಹೇಳಿದರು. ನಗರದ ಮರಳೂರು ಗ್ರಾಮದ ಸರ್ವೆ ನಂ 87/2ರಲ್ಲಿ 2 ಎಕರೆ ಜಾಗವನ್ನು ಕಾಂಗ್ರೆಸ್ ಭವನ ನಿರ್ಮಾಣಕ್ಕೆ ನೀಡುವುದಕ್ಕೆ ಅಸಮಾಧಾನ ವ್ಯಕ್ತಪಡಿಸಿದರು. ರೂ50 ಕೋಟಿಗೂ ಹೆಚ್ಚು ಬೆಲೆ ಬಾಳುವ ಜಾಗವನ್ನು ಪಾಲಿಕೆಯಲ್ಲೇ ಉಳಿಸಿಕೊಂಡು, ಸಾರ್ವಜನಿಕರ ಕೆಲಸಕ್ಕೆ ಬಳಸಬೇಕು ಎಂದು ಒತ್ತಾಯಿಸಿದರು.



### ಪಾಲಿಕೆಯಲ್ಲಿ ಮಧ್ಯವರ್ತಿ ಹಾವಳಿ

**ಮಹಾನಗರ ಪಾಲಿಕೆಯಲ್ಲಿ ಇ-ಖಾತೆ ಮಾಡಿಕೊಡಲು ಜನರನ್ನು ಅಲೆಸಲಾಗುತ್ತಿದೆ. ಮಧ್ಯವರ್ತಿಗಳಿಗೆ ಅಧಿಕಾರಿಗಳು ಮಣೆ ಹಾಕುತ್ತಿದ್ದಾರೆ. ಪಾಲಿಕೆಯಲ್ಲಿ ಮಧ್ಯವರ್ತಿಗಳ ಹಾವಳಿ ಮಿತಿಮೀರಿದೆ ಎಂದು ಜ್ಯೋತಿಗಣೇಶ್ ಆಕ್ರೋಶ ವ್ಯಕ್ತಪಡಿಸಿದರು. ಎಷ್ಟು ಹೇಳಿದರೂ ಪಾಲಿಕೆ ಅಧಿಕಾರಿಗಳು ಕೇಳುತ್ತಿಲ್ಲ. ಜನರನ್ನು ಗೋಳಾಡಿಸುವುದು ತಪ್ಪಿಲ್ಲ. ಮೊದಲು ಮಧ್ಯವರ್ತಿಗಳ ಕಾಟ ತಪ್ಪಿಸಿ ಜನರ ಕೆಲಸ ಮಾಡಿಕೊಡುವಂತಹ ವಾತಾವರಣ ನಿರ್ಮಾಣ ಮಾಡಬೇಕು ಎಂದು ಆಗ್ರಹಿಸಿದರು.**

ಅಂತರಾಳದಿಂದ..
EDITORIAL

# ಸಂವಿಧಾನ ತಿದ್ದುಪಡಿ ಮಸೂದೆ- ಒಕ್ಕೂಟ ವ್ಯವಸ್ಥೆಗೆ ಒಳಪೆಟ್ಟು

ಸಂಸತ್ತಿನ ಮುಂದೆ ಮಂಡನೆಗೊಂಡಿರುವ ಹೊಸ ಮಸೂದೆಗಳು ಪ್ರಜಾಪ್ರಭುತ್ವದ ಮೂಲ ಆಶಯಗಳು ಹಾಗೂ ಸಾಂವಿಧಾನಿಕ ತತ್ವಗಳಿಗೆ ವಿರುದ್ಧವಾಗಿವೆ. ಕೇಂದ್ರ ಸರ್ಕಾರವು ಸಂಸತ್ತಿನಲ್ಲಿ ಮಂಡಿಸಿರುವ ಸಂವಿಧಾನದ 130ನೇ ತಿದ್ದುಪಡಿ ಮಸೂದೆ ಹಾಗೂ ಅದಕ್ಕೆ ಸಂಬಂಧಿಸಿದ ಇತರ ಮಸೂದೆಗಳು ಸಂವಿಧಾನದ ಮೂಲ ಸ್ವರೂಪವನ್ನು ಉಲ್ಲಂಘಿಸುತ್ತಿವೆ. ಅಲ್ಲದೆ, ಪ್ರಜಾತಾಂತ್ರಿಕ ರಾಜಕೀಯ ವ್ಯವಸ್ಥೆಯನ್ನು ರೂಪಿಸಿರುವ ಮೂಲ ಪರಿಕಲ್ಪನೆಗಳಿಗೆ ಕೂಡ ಇವು ವಿರುದ್ಧವಾಗಿವೆ. ಈ ಮಸೂದೆಗಳನ್ನು ಬಹಳ ತಪ್ಪು ಗ್ರಹಿಕೆಯಿಂದ ರೂಪಿಸಲಾಗಿದೆ. ಮಸೂದೆಗಳ ಹಿಂದಿನ ಆಶಯವು ತಪ್ಪಾಗಿದೆ ಹಾಗೂ ಇವು ಕಾನೂನಿನ ರೂಪ ಪಡೆದು ಜಾರಿಗೆ ಬಂದಲ್ಲಿ ಅನುಷ್ಠಾನದಲ್ಲಿ ಅನ್ಯಾಯ ಆಗುವ ಸಾಧ್ಯತೆ ಇದೆ. ಭ್ರಷ್ಟ ರಾಜಕಾರಣಿಗಳು ಅಧಿಕಾರ ದಲ್ಲಿ ಮುಂದುವರಿಯುವುದನ್ನು ಯಾರೂ ಬಯಸುವುದಿಲ್ಲ. ಆದರೆ, ಕಾನೂನಿನ ಪ್ರಕ್ರಿಯೆಗಳನ್ನು ಸರಿಯಾಗಿ ಪಾಲಿಸದೆ ಯಾವುದೇ ವ್ಯಕ್ತಿಯ ವಿರುದ್ಧ ಕ್ರಮ ಜರುಗಿಸುವುದನ್ನು ಯಾರೂ ಬೆಂಬಲಿಸಬಾರದು. ಈ ಮಸೂದೆಗಳು ಕಾನೂನಿನ ರೂಪದಲ್ಲಿ ಜಾರಿಗೆ ಬಂದಲ್ಲಿ, ರಾಜಕೀಯವಾಗಿ ವಿರೋಧಿಸುವ ಪಕ್ಷಗಳನ್ನು ಹಾಗೂ ಆ ಪಕ್ಷಗಳ ಸಚಿವರನ್ನು ಕಿರುಕುಳಕ್ಕೆ ಗುರಿಪಡಿಸಲು ಕೇಂದ್ರ ಸರ್ಕಾರಕ್ಕೆ ಒಂದು ಅಸ್ತ್ರವಾಗಿ ಒದಗಿಬರಲಿವೆ. ಸಿಬಿಐ ಹಾಗೂ ಜಾರಿ ನಿರ್ದೇಶನಾಲಯ (ಇ.ಡಿ) ಸೇರಿದಂತೆ ಕೇಂದ್ರದ ವಿವಿಧ ತನಿಖಾ ಸಂಸ್ಥೆಗಳನ್ನು, ಬಿಜೆಪಿಯನ್ನು ರಾಜಕೀಯವಾಗಿ ವಿರೋಧಿಸುವ ಪಕ್ಷಗಳ ನಾಯಕರಿಗೆ ಕಿರುಕುಳ ನೀಡಲು ಈಗ ಬಳಕೆ ಮಾಡಲಾಗುತ್ತಿದೆ. ಈಗಿರುವ ಕಾನೂನುಗಳು ಹಾಗೂ ಅವುಗಳ ಅಡಿಯಲ್ಲಿ ವಿವರಿಸಿರುವ ಪ್ರಕ್ರಿಯೆಗಳು ಈ ರಾಜಕೀಯ ನಾಯಕರಿಗೆ ಒಂದಿಷ್ಟು ರಕ್ಷಣೆಗಳನ್ನು ಒದಗಿಸಿವೆ. ಆದರೆ, ಪ್ರಸ್ತಾವಿತ ಕಾನೂನುಗಳು ಎಲ್ಲಾ ಬಗೆಯ ರಕ್ಷಣೆಗಳನ್ನು ಇಲ್ಲವಾಗಿಸುತ್ತವೆ. ಕೇಂದ್ರ ಸರ್ಕಾರದ ಮನಸೋ ಇಚ್ಛೆ ನಡೆಗಳು ಹಾಗೂ ದ್ವೇಷದ ಕ್ರಮಗಳಿಂದ ರಕ್ಷಣೆ ಇಲ್ಲದಂತಾಗುತ್ತದೆ. ಈ ಕಾನೂನುಗಳು, ಸಂವಿಧಾನದ 356ನೇ ವಿಧಿಯ ಹೊಸ ರೂಪದಂತೆ ಆಗಲಿವೆ: ಕಾನೂನುಗಳನ್ನು ಬಳಸಿಕೊಂಡು ಕೇಂದ್ರ ಸರ್ಕಾರವು ರಾಜ್ಯ ಸರ್ಕಾರಗಳನ್ನು ಅಸ್ಥಿರಗೊಳಿಸಲು ಸಾಧ್ಯವಾಗುತ್ತದೆ. ಈ ಕಾನೂನುಗಳು ಸಂಸದೀಯ ಪ್ರಜಾತಂತ್ರದ ಅಗತ್ಯ ನಿಯಮಗಳಿಗೆ ಅನುಗುಣವಾಗಿ ಇಲ್ಲ. ಅಲ್ಲದೆ, ಇವು ಸಾಂವಿಧಾನಿಕ ಒಕ್ಕೂಟ ವ್ಯವಸ್ಥೆಗೆ ಪೆಟ್ಟುಕೊಡುವಂತೆ ಇವೆ. ಸಂವಿಧಾನದ ವಿವಿಧ ಅಂಗಗಳ ಅಧಿಕಾರ ವ್ಯಾಪ್ತಿಗೆ ಈ ಕಾನೂನುಗಳು ಸವಾಲೊಡ್ಡುವಂತೆ ಇವೆ, ಚುನಾಯಿತ ಸರ್ಕಾರಗಳನ್ನು ವಜಾಗೊಳಿಸಲು ಕಾರ್ಯಾಂಗದ ಸಂಸ್ಥೆಗಳಿಗೆ ಅವಕಾಶ ಮಾಡಿಕೊಡುತ್ತವೆ. ಹೊಸ ಮಸೂದೆಗಳನ್ನು ಕೇಂದ್ರ ಸರ್ಕಾರವು ಸಮರ್ಥಿಸಿಕೊಂಡಿದೆ.

**ಪ್ರಧಾನಿ, ಮುಖ್ಯಮಂತ್ರಿ, ಹಾಗೂ ಸಚಿವರು ಕನಿಷ್ಠ ಐದು ವರ್ಷಗಳ ಜೈಲುಶಿಕ್ಷೆಗೆ ಗುರಿಯಾಗುವ ಅಪರಾಧ ಎಸಗಿದ ಆರೋಪದ ಅಡಿಯಲ್ಲಿ ಬಂಧಿತರಾಗಿ, ಸತತ 30 ದಿನಗಳವರೆಗೆ ಜೈಲಿನಲ್ಲಿ ಇದ್ದರೆ ಅವರು ತಮ್ಮ ಹುದ್ದೆಯನ್ನು ಕಳೆದುಕೊಳ್ಳುತ್ತಾರೆ ಎಂದು ಹೇಳುವ ಈ ಮಸೂದೆಗಳು, ಅವರ ವಿರುದ್ಧದ ಆರೋಪಗಳು ಸಾಬೀತಾಗುವ ಮುನ್ನವೇ ಅವರನ್ನು ಶಿಕ್ಷೆಗೆ ಗುರಿಪಡಿಸಲು ಅವಕಾಶ ಮಾಡಿಕೊಡುತ್ತವೆ. ಮಸೂದೆಗಳನ್ನು ಈಗ ಸಂಸತ್ತಿನ ಜಂಟಿ ಸಮಿತಿಯ ಪರಾಮರ್ಶೆಗೆ ರವಾನಿಸಲಾಗಿದೆ. ಮಸೂದೆಗಳನ್ನು ಆದಷ್ಟು ಬೇಗ ಕಾನೂನಿನ ರೂಪದಲ್ಲಿ ಜಾರಿಗೆ ತರುವ ಉದ್ದೇಶದಿಂದ, ಸಂಸತ್ತಿನ ಮುಂದಿನ ಅಧಿವೇಶನಕ್ಕೆ ಮೊದಲು ಮಸೂದೆಯ ಬಗ್ಗೆ ಅಭಿಪ್ರಾಯ ನೀಡಬೇಕು ಎಂದು ಸಮಿತಿಗೆ ತಿಳಿಸಲಾಗಿದೆ.**

**ಈ ಮಸೂದೆಗಳಲ್ಲಿ ಸಾರ್ವಜನಿಕ ಹಿತ ಅಡಗಿದೆ;** ಚುನಾಯಿತ ಪ್ರತಿನಿಧಿಗಳು ಪ್ರಾಮಾಣಿಕರಾಗಿ ಹಾಗೂ ಅನುಮಾನಗಳಿಗೆ ಅತೀತರಾಗಿ ಇರಬೇಕಾದುದರ ಅಗತ್ಯ ಇದೆ ಎಂದು ಹೇಳಿದೆ. ಆದರೆ, ನರೇಂದ್ರ ಮೋದಿ ನೇತೃತ್ವದ ಸರ್ಕಾರದ ನಡೆಗಳನ್ನು ಗಮನಿಸಿ ಹೇಳುವುದಾದರೆ, ನೈತಿಕ ನೆಲೆಗಟ್ಟಿನ ಈ ವಾದಗಳು ರಾಜಕೀಯ ವಿರೋಧಿಗಳ ವಿರುದ್ಧ ಕ್ರಮ ಜರುಗಿಸುವುದಕ್ಕೆ ಒಂದು ನೆಪವಾಗಿ ಬರುತ್ತವೆ, ಅಷ್ಟೇ. ಕಾನೂನು ಪ್ರಕ್ರಿಯೆಗಳ ನಿಧಾನಗತಿ ಹಾಗೂ ಶಿಕ್ಷೆಯ ಪ್ರಮಾಣ ಕಡಿಮೆ ಇರುವುದನ್ನು ಗಮನಿಸಿ ಕೇಂದ್ರ ಸರ್ಕಾರವು ತನ್ನ ವಿರೋಧಿಗಳ ವಿರುದ್ಧ ತ್ವರಿತವಾಗಿ ಕ್ರಮ ಜರುಗಿಸುವುದಕ್ಕೆ ಈ ಹೆಜ್ಜೆ ಇರಿಸಿರಬಹುದು. ಈ ಮಸೂದೆಗಳು ಭ್ರಷ್ಟಾಚಾರವನ್ನು ಕೊನೆಗೊಳಿಸುವುದಿಲ್ಲ. ಇವು ವಿರೋಧ ಪಕ್ಷಗಳನ್ನು ದುರ್ಬಲಗೊಳಿಸುತ್ತವೆ. ಮಸೂದೆಗಳಿಗೆ ಸಂಸತ್ತಿನ ಅಂಗೀಕಾರ ದೊರೆತರೂ ನ್ಯಾಯಾಂಗದ ಪರಿಶೀಲನೆಯ ಸಂದರ್ಭದಲ್ಲಿ ಅವು ಬಿದ್ದುಹೋಗುವ ಸಾಧ್ಯತೆ ಹೆಚ್ಚಿದೆ. ಏಕೆಂದರೆ, ತಪ್ಪಿತಸ್ಥ ಎಂದು ಸಾಬೀತಾಗುವವರೆಗೆ ಯಾರೂ ದೋಷಿ ಅಲ್ಲ ಎಂಬ ಮೂಲ ತತ್ವಕ್ಕೆ ಮಸೂದೆಗಳು ವಿರುದ್ಧವಾಗಿವೆ. ಆರೋಪಗಳನ್ನು ಎದುರಿಸುತ್ತಿರುವ ವ್ಯಕ್ತಿಯು ತನ್ನ ಹುದ್ದೆಗೆ ರಾಜೀನಾಮೆ ಸಲ್ಲಿಸಬೇಕು ಎಂಬುದು ಆತ, ಆತನ ಪಕ್ಷ ಹಾಗೂ ಜನರಿಗೆ ಸಂಬಂಧಿಸಿದ ವಿಚಾರ. ಆರೋಪಿಯು ತಪ್ಪಿತಸ್ಥ ಎಂಬುದು ಸಾಬೀತಾಗುವವರೆಗೂ ಅಲ್ಲಿ ಕಾನೂನಿಗೆ ಯಾವುದೇ ಪಾತ್ರ ಇರಬಾರದು.



# ರಾಮಾಯಣ



**ವಿರಾಧನು ರಾಮಲಕ್ಷ್ಮಣರನ್ನು ಎತ್ತಿಕೊಂಡು ಹೋದದ್ದು:**

• ಹಿಂದಿನ ಸಂಚಿಕೆಯಿಂದ

## 116 ನೆಯ ಅಧ್ಯಾಯ

ಅವು ಆ ರಾಕ್ಷಸನ ಶರೀರವನ್ನು ತಾಕಿ ಉಚ್ಚಳಿಸಿ ರಕ್ತದಿಂದ ನೆನೆದು ಭೂಮಿಯ ಮೇಲೆ ಬಿದ್ದವು. ಆರಾಕ್ಷಸನು ಅತ್ಯಂತ ಕೋಪಯುಕ್ತನಾಗಿ ಸೀತಾದೇವಿಯನ್ನು ಕೆಳಗಿಳಿಸಿ ತ್ರಿಶೂಲವನ್ನು ಮೇಲಕ್ಕೆ ನೆಗಸಿಕೊಂಡು ರಾಮಲಕ್ಷ್ಮಣರ ಮೇಲೆ ಬೊಬ್ಬಿಡುತ್ತ ಪ್ರಳಯಕಾಲದ ಯಮನಂತೆ ಅಟ್ಟಿ ಬಂದನು. ರಾಮಲಕ್ಷ್ಮಣರು ಇನ್ನೂ ಶರವರ್ಷಗಳನ್ನು ಕರೆದು ಆ ರಾಕ್ಷಸನ ಶರೀರದಲ್ಲಿ ನೆಡಿಸಿದರು. ವಿರಾಧನು ಮುಗುಳುನಗೆಯಿಂದ ವಿಲಾನಾರ್ಥವಾಗಿ ಆಕಳಿಸಲು ಆತನ ಶರೀರದಲ್ಲಿ ನೆಟ್ಟಿದ್ದ ಬಾಣಗಳೆಲ್ಲವೂ ತಮಗೆ ತಾವೇ ಬಿದ್ದು ಹೋದವು ಆಮೇಲೆ ವಿರಾಧನು ಬ್ರಹ್ಮದೇವನ ವರಪ್ರದಾನಸಾಮರ್ಥ್ಯದಿಂದ ತನ್ನ ಪ್ರಾಣಗಳನ್ನುಳಿಸಿಕೊಂಡು ತ್ರಿಶೂಲವನ್ನು ಮೇಲಕ್ಕೆತ್ತಿ ರಾಮಲಕ್ಷ್ಮಣರ ಮೇಲೆ ಎಸೆದನು. ಅಂತರಿಕ್ಷಮಾರ್ಗದಲ್ಲಿ ಬರುತ್ತಿದ್ದ ಆ ತ್ರಿಶೂಲವನ್ನು ಕಂಡು ರಾಮಲಕ್ಷ್ಮಣರು ಎರಡು ಬಾಣಗಳಿಂದ ಕತ್ತರಿಸಲು ಆ ತ್ರಿಶೂಲವು ದೇವೇಂದ್ರನ ವಜ್ರಾಯುಧದಿಂದ ಕತ್ತರಿಸಲ್ಪಟ್ಟ ಮಹಾಮೇರುವಿನ ಶಿಖರದಂತೆ ಎರಡು ತುಂಡುಗಳಾಗಿ ಭೂಮಿಯ ಮೇಲೆ ಬಿತ್ತು. ರಾಮಲಕ್ಷ್ಮಣರು ಕೃಷ್ಣಸರ್ಪದ ರೀತಿಯಲ್ಲಿ ಅತಿಭಯಂಕರವಾದ ಖಡ್ಗಗಳಿಂದ ವಿರಾಧನನ್ನು ಹೊಯ್ಯಲು ಆತನು ಗಾಯವಡೆದು ಕೋಪದಿಂದ ರಾಮ ಲಕ್ಷ್ಮಣರಿಬ್ಬರನ್ನೂ ಎತ್ತಿಕೊಂಡು ಹೋಗಲು ಯತ್ನ ಮಾಡಿದನು. ಆ ಅಭಿಪ್ರಾಯವನ್ನು ತಿಳಿದು ಶ್ರೀರಾಮನು ಲಕ್ಷ್ಮಣನನ್ನು ಕುರಿತು ಎಲೈ ಲಕ್ಷ್ಮಣ, ವಿರಾಧನು ನಮ್ಮಿಬ್ಬರನ್ನೂ ಎತ್ತಿಕೊಂಡು ಹೋಗಲಿಚ್ಛಿಸುತ್ತಾನೆ. ಅವನು ತನ್ನ ಮನಸ್ಸು ಬಂದಂತೆ ಹೋಗಲಿ. ನೀನು ಸುಮ್ಮನಿರು, ಈ ರಾಕ್ಷಸನು ಯಾವ ದಾರಿಗೊಂಡು ಹೋಗುವನೋ ನಮಗೂ ಅದೇ ದಾರಿ ಎಂದು ನುಡಿದನು.

ಆ ಬಳಿಕ ವಿರಾಧನು ತನ್ನ ಭುಜಬಲದಿಂದ ರಾಮಲಕ್ಷ್ಮಣರಿಬ್ಬರನ್ನೂ ಹೆಗಲಮೇಲೆ ಕುಳ್ಳಿರಿಸಿಕೊಂಡು ಬೊಬ್ಬಿಡುತ್ತ ಕಾರ್ಮುಗಿಲಂತೆ ಅತ್ಯಂತ ಕಪ್ಪಾಗಿ ನಾನಾಪ್ರಕಾರವಾದ ಕ್ಷುದ್ರ ಮೃಗಸಮೂಹಗಳಿಂದಿಟ್ಟಣಿಸಿದ ಒಂದು ವನವನ್ನು ಹೊಕ್ಕನು.

**ವಿರಾಧನ ವಧೆ:** ಹೀಗೆ ವಿರಾಧನು ರಾಮಲಕ್ಷ್ಮಣರನ್ನು ಹೆಗಲ ಮೇಲೆ ಕುಳ್ಳಿರಿಸಿಕೊಂಡು ಹೋದದ್ದನ್ನು ಕಂಡು ಸೀತಾದೇವಿಯು ಭುಜಗಳನ್ನು ಮೇಲಕ್ಕೆ ನೆಗಹಿಕೊಂಡು ಅಕಟಕಟಾ! ಸತ್ಯಸಂಧರಾಗಿ ಸದ್ವರ್ತನರಾದ ರಾಮಲಕ್ಷ್ಮಣರನ್ನು ದುರಾತ್ಮನಾದ ವಿರಾಧನು ಎತ್ತಿಕೊಂಡು ಹೋಗುತ್ತಿದ್ದಾನೆ. ಈ ಮಹತ್ತಾದ ಅರಣ್ಯದಲ್ಲಿ ಇನ್ನು ನನಗಾರು ರಕ್ಷಕರು ? ಈ ವನದಲ್ಲಿರುವ ತೋಳ ಹುಲಿ ಸಿಂಹ ಮೊದಲಾದ ದುಷ್ಟ ಪ್ರಾಣಿಗಳು ನನ್ನನ್ನು ಭಕ್ಷಣ ಮಾಡುವುವು. ಎಲೈ ವಿರಾಧನೆ. ನಿನಗೆ ನಮಸ್ಕಾರ ! ರಾಮಲಕ್ಷ್ಮಣರನ್ನು ಬಿಡು ಎಂದು ಕೂಗುತ್ತಿದ್ದಳು.

ಆಗ ಸೀತಾದೇವಿಯ ರೋದನಧ್ವನಿಯನ್ನು ಕೇಳಿ ರಾಮಲಕ್ಷ್ಮಣರು ಶೀಘ್ರದಲ್ಲಿ ಆ ದುರಾತ್ಮನನ್ನು ಕೊಲ್ಲಬೇಕೆಂದು ಕಣ್ಣುಸನ್ನೆಗಳಿಂದ ನಿಶ್ಚಯಿಸಿದರು. ಲಕ್ಷ್ಮಣನು ವಿರಾಧನ ಎಡತೋಳನ್ನೂ ಶ್ರೀರಾಮನು ಆತನ ಬಲತೋಳನ್ನೂ ಖಡ್ಗಗಳಿಂದ ಛೇದಿಸಿದರು.

ಮುಂದುವರಿಯುವುದು...

# ರೋಟರಿ ಕ್ಲಬ್ ಆಫ್ ಹಾಸನ್ ಟೈಗರ್ಸ್: ಸೇವೆಯಲ್ಲಿ ಗರ್ಜನೆ

## ಆರೋಗ್ಯ, ಶಿಕ್ಷಣ, ಪರಿಸರ, ಸಾಮಾಜಿಕ ಜಾಗೃತಿಯ ಹಾದಿಯಲ್ಲಿ ಮುಂಚೂಣಿಯಲ್ಲಿ ಸಾಗುತ್ತಿರುವ ಹಾಸನದ ಟೈಗರ್ಸ್


☛ ವಿಶ್ವಾಸ್.ಡಿ.ಗೌಡ



■ ಉದಯವಾಹಿನಿ, ಹಾಸನ

ಹಾಸನ ನಗರದ ಹೆಮ್ಮೆಗುರಿಯ ಸಂಘಟನೆಗಳಲ್ಲಿ ಒಂದಾದ ರೋಟರಿ ಕ್ಲಬ್ ಆಫ್ ಹಾಸನ್ ಟೈಗರ್ಸ್, ಸಮಾಜಮುಖಿ ಚಟುವಟಿಕೆಗಳಲ್ಲಿ ತನ್ನದೇ ಆದ ವಿಶಿಷ್ಟ ಗುರುತನ್ನು ಮೂಡಿಸಿಕೊಂಡಿದೆ. ಕ್ಲಬ್ ಸ್ಥಾಪನೆಯ ದಿನದಿಂದಲೇ ಸೇವೆ ಸ್ವಾರ್ಥವಿಲ್ಲದೆ, ಸಮಾಜಕ್ಕಾಗಿ ಎಂಬ ತತ್ವದೊಂದಿಗೆ ಜನಜೀವನಕ್ಕೆ ಹತ್ತಿರವಾಗುವ ಕಾರ್ಯಗಳನ್ನು ಕೈಗೊಂಡಿದೆ. ಈ ಕ್ಲಬ್‌ನ ಪ್ರತಿಯೊಬ್ಬ ಸದಸ್ಯರೂ ತಮ್ಮ ಸಮಯ, ಶ್ರಮ ಮತ್ತು ಸಂಪನ್ಮೂಲಗಳನ್ನು ಸಮಾಜದ ಹಿತಕ್ಕಾಗಿ ನಿರಂತರವಾಗಿ ಮುಡಿಪಾಗಿಡುತ್ತಿದ್ದಾರೆ.

**ಆರೋಗ್ಯ ಸೇವೆಯಲ್ಲಿ ಮುಂಚೂಣಿ:** ಹಾಸನ ಹಾಗೂ ಸುತ್ತಮುತ್ತಲಿನ ಗ್ರಾಮೀಣ ಪ್ರದೇಶಗಳಲ್ಲಿ ಉಚಿತ ಆರೋಗ್ಯ ಶಿಬಿರಗಳನ್ನು ಆಯೋಜಿಸುವುದು ಕ್ಲಬ್‌ನ ಪ್ರಮುಖ ಕಾರ್ಯಗಳಲ್ಲಿ ಒಂದಾಗಿದೆ. ಇದರಲ್ಲಿ ಸಾಮಾನ್ಯ ರೋಗಪರಿಶೀಲನೆ, ರಕ್ತದಾನ ಶಿಬಿರ, ಕಣ್ಣು ತಪಾಸಣೆ, ಡಯಾಬಿಟಿಸ್ ತಪಾಸಣೆ, ಹಾಗೂ ತುರ್ತು ಚಿಕಿತ್ಸೆಗೆ ಅಗತ್ಯವಾದ ವೈದ್ಯಕೀಯ ನೆರವು ಒಳಗೊಂಡಿದೆ. ಅನೇಕ ಬಡ ಕುಟುಂಬಗಳಿಗೆ ಉಚಿತ ಔಷಧಿ ಮತ್ತು ಶಸ್ತ್ರಚಿಕಿತ್ಸಾ ನೆರವು ಒದಗಿಸಿರುವುದರಿಂದ ಹಲವ:ರ ಜೀವ ಉಳಿದಿವೆ.




**ಶಿಕ್ಷಣಕ್ಕೆ ಬಲ:** ಜ್ಞಾನವೇ ಶಕ್ತಿ ಎಂಬ ನಂಬಿಕೆಯನ್ನು ಪಾಲಿಸಿಕೊಂಡಿರುವ ಟೈಗರ್ಸ್ ಕ್ಲಬ್, ಶಿಕ್ಷಣ ಕ್ಷೇತ್ರದಲ್ಲಿ ಮಹತ್ವದ ಪಾತ್ರವಹಿಸಿದೆ.

ಸರ್ಕಾರಿ ಶಾಲೆಗಳ ವಿದ್ಯಾರ್ಥಿಗಳಿಗೆ ಪಠ್ಯಪುಸ್ತಕ, ನೋಟು, ವಸ್ತ್ರ, ಡಿಜಿಟಲ್ ಲರ್ನಿಂಗ್ ಸಾಧನಗಳನ್ನು ವಿತರಿಸುವ ಮೂಲಕ ಸಾವಿರಾರು ಮಕ್ಕಳ ಭವಿಷ್ಯ ಬೆಳಗಿಸಿದೆ. ಶಾಲೆಗಳ ಮೂಲಸೌಕರ್ಯ ಅಭಿವೃದ್ಧಿ ಉದಾಹರಣೆಗೆ ಕುಡಿಯುವ ನೀರಿನ ವ್ಯವಸ್ಥೆ, ಶೌಚಾಲಯ ನಿರ್ಮಾಣ, ಕ್ರೀಡಾ ಸಾಮಗ್ರಿ ಪೂರೈಕೆ ಇವರಿಂದ ಸಾಧ್ಯವಾಗಿದೆ.

**ಪರಿಸರ ಸಂರಕ್ಷಣೆ:** ಪರಿಸರ ಹಿತದೃಷ್ಟಿಯಿಂದ ಕ್ಲಬ್ ನಿರಂತರ ಕಾರ್ಯನಿರ್ವಹಿಸುತ್ತಿದೆ. ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಸಾವಿರಾರು ಸಸಿಗಳನ್ನು ನೆಟ್ಟು, ಅವುಗಳ ಸಂರಕ್ಷಣೆಗೆ ವಿಶೇಷ ಜಾಗೃತಿ ಮೂಡಿಸಲಾಗಿದೆ.

ಪ್ಲಾಸ್ಟಿಕ್ ಬಳಕೆಯನ್ನು ಕಡಿಮೆ ಮಾಡುವ ಕುರಿತು ಜನರಲ್ಲಿ ಅರಿವು ಮೂಡಿಸುವ ಅಭಿಯಾನಗಳು, ಮಳೆನೀರು ಸಂಗ್ರಹಣೆ ಯೋಜನೆಗಳು, ಸ್ವಚ್ಛತಾ ಅಭಿಯಾನಗಳು ಇವರ ಚಟುವಟಿಕೆಯಲ್ಲಿ ಪ್ರಮುಖ ಸ್ಥಾನ ಪಡೆದಿವೆ.

**ಸಾಮಾಜಿಕ ಜಾಗೃತಿ ಮತ್ತು ನಾಯಕತ್ವ ಬೆಳೆಸಿಕೆ**

ರಸ್ತೆ ಸುರಕ್ಷತೆ, ಆರೋಗ್ಯಕರ ಜೀವನಶೈಲಿ, ಮಹಿಳಾ ಸಬಲೀಕರಣ, ಹಾಗೂ ಯುವಜನರಲ್ಲಿ ನಾಯಕತ್ವ ಬೆಳೆಸುವ ತರಬೇತಿ ಕಾರ್ಯಕ್ರಮಗಳು ಕ್ಲಬ್ ಕಾರ್ಯದ ಇನ್ನೊಂದು ಅಂಶ. ಯುವಕರು ಸಮಾಜದ ಭವಿಷ್ಯ ಎಂಬ ನಂಬಿಕೆಯಡಿ, ಟೈಗರ್ಸ್ ಕ್ಲಬ್ ಹಲವಾರು ನಾಯಕತ್ವ ಮತ್ತು ವ್ಯಕ್ತಿತ್ವ ಅಭಿವೃದ್ಧಿ ಕಾರ್ಯಾಗಾರಗಳನ್ನು ಹಮ್ಮಿಕೊಂಡಿದೆ.

**ಒಗ್ಗಟ್ಟಿನ ಶಕ್ತಿ:** ಟೈಗರ್ಸ್ ಎಂಬ ಹೆಸರಿನಂತೆ, ಸದಸ್ಯರು ಧೈರ್ಯ, ದೃಢಸಂಕಲ್ಪ ಮತ್ತು ಸಮೂಹಬಲದ ಸಂಕೇತವಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಪ್ರತಿಯೊಬ್ಬ ಸದಸ್ಯರೂ ತಮ್ಮ ವೃತ್ತಿ ಹಾಗೂ ವೈಯಕ್ತಿಕ ಕೌಶಲ್ಯಗಳನ್ನು ಸೇವಾ ಚಟುವಟಿಕೆಗೆ ಬಳಸುತ್ತಿದ್ದಾರೆ. ಸೇವೆ ಮೂಲಕ ಸಮಾಜ ಬದಲಾವಣೆ ಇದೇ ನಮ್ಮ ನಂಬಿಕೆ'' ಎಂದು ಕ್ಲಬ್ ಪ್ರತಿನಿಧಿಗಳು ಹೆಮ್ಮೆ ವ್ಯಕ್ತಪಡಿಸಿದ್ದಾರೆ.

**ಭವಿಷ್ಯದ ದೃಷ್ಟಿಕೋನ:** ಮುಂದಿನ ವರ್ಷಗಳಲ್ಲಿ ಇನ್ನಷ್ಟು ಗ್ರಾಮೀಣ ಪ್ರದೇಶಗಳಿಗೆ ಸೇವಾ ವಿಸ್ತರಣೆ, ಯುವಜನರಲ್ಲಿ ಸೇವಾ ಮನೋಭಾವ ಬೆಳೆಸುವ ಉದ್ದೇಶದಿಂದ ನಾಯಕತ್ವ ತರಬೇತಿ ಕೇಂದ್ರ ಸ್ಥಾಪನೆ, ಮತ್ತು ಪರಿಸರ ಸಂರಕ್ಷಣೆಗೆ ಶಾಶ್ವತ ಯೋಜನೆಗಳನ್ನು ಅನುಷ್ಠಾನಗೊಳಿಸುವ ಗುರಿ ಹೊಂದಿದೆ.

# ಗುರು ಪುಷ್ಯ ಯೋಗದ ಪ್ರಯುಕ್ತ ಅನ್ನದಾನ ಸೇವೆ



• ಉದಯವಾಹಿನಿ, ಬೆಂಗಳೂರು

ಪರಮಪೂಜ್ಯ ಶ್ರೀ ಶ್ರೀ ಸುಬುಧೇಂದ್ರತೀರ್ಥ ಶ್ರೀಪಾದಂಗಳವರ ಆದೇಶದಂತೆ ಜಯನಗರ 5ನೇ ಬಡಾವಣೆಯ ನಂಜನಗೂಡು ಶ್ರೀ ರಾಘವೇಂದ್ರ ಸ್ವಾಮಿಗಳ ಮಠದಲ್ಲಿ ಶ್ರೀಮಠದ ಹಿರಿಯ ವ್ಯವಸ್ಥಾಪಕರಾದ ಶ್ರೀ ಆರ್ ಕೆ ವಾದೀಂದ್ರಾಚಾರ್ಯರ ನೇತೃತ್ವದಲ್ಲಿ ಗುರುವಾರ, ಗುರುಪುಷ್ಯಯೋಗ ದ ಪ್ರಯುಕ್ತ ಬೆಳಗ್ಗೆ ಗುರುಗಳ ಬೃಂದಾವನಕ್ಕೆ ಅಷ್ಟೋತ್ತರ ಸಹಿತ ಪಂಚಾಮೃತ ಅಭಿಷೇಕ, ವಿಶೇಷ ಅಲಂಕಾರ, ಮಹಾಮಂಗಳಾರತಿ ಹಾಗೂ ಸುಮಾರು 5,000 ಭಕ್ತಾದಿಗಳಿಗೆ ಅನ್ನದಾನ ಸೇವೆ, ಸಂಜೆಯ ಕಾರ್ಯಕ್ರಮದಲ್ಲಿ ರಥೋತ್ಸವ, ಗಜವಾಹನೋತ್ಸವ, ಪಲ್ಲಕ್ಕಿ ಉತ್ಸವ, ತೊಟ್ಟಿಲು ಸೇವೆ ಮತ್ತು ಯುವ ಗಾಯಕ ಶ್ರೀ ಶಿಶಿರ್ ಕೆ.ಪಿ. ನಡೆಸಿಕೊಟ್ಟ ವಿಶೇಷ ದಾಸವಾಣಿ ಕಾರ್ಯಕ್ರಮದಲ್ಲಿ ಕು|| ಸಂಸ್ಕೃತಿ ಎಸ್. ಬಾಣಾವರ್ (ಹಾರ್ಮೋನಿಯಂ) ಶ್ರೀ ಧ್ರುವ ಆಚಾರ್ಯ (ತಬಲಾ), ಕು|| ಇಂಚರ ಎಸ್. ಆರ್. (ತಾಳ). ಸಾಥ್ ನೀಡಿದರು. ರಾಯರ ಅನುಗ್ರಹ ಪಡೆಯಲು ಪುಷ್ಯಯೋಗದ ನಿಮಿತ್ತ ಸಹಸ್ರಾರು ಭಕ್ತಾದಿಗಳು ಆಗಮಿಸಿ ಫಲ-ಮಂತ್ರಾಕ್ಷತೆ ಸ್ವೀಕರಿಸಿದರು ಎಂದು ಶ್ರೀ ನಂದಕಿಶೋರ್ ಆಚಾರ್ಯರು ತಿಳಿಸಿದರು.

# ದಿನಪೂರ್ಣ ಸಂಗೀತ ನೃತ್ಯ ಸಂಭ್ರಮ ನಾಳೆ



• ಉದಯವಾಹಿನಿ, ಬೆಂಗಳೂರು

ಉಡುಪ ಪ್ರತಿಷ್ಠಾನದ ದಶಮಾನೋತ್ಸವ ಅಂಗವಾಗಿ ರಾಜಧಾನಿ ಬೆಂಗಳೂರಿನ ಸಂಗೀತ ಕಲಾ ರಸಿಕರಿಗೆ ' ಉಡುಪ ಸಂಗೀತೋತ್ಸವ ಸಂಭ್ರಮ ಮುದ ನೀಡಲು ಅಣಿಯಾಗಿದೆ. ಉದ್ಯಾನ ನಗರಿಯ ಜಯನಗರದ ಜೆಎಸ್‌ಎಸ್ ಸಭಾಂಗಣದಲ್ಲಿ ಆಗಸ್ಟ್ 24 ರಂದು ದಿನಪೂರ್ಣ ಸಂಗೀತ - ನೃತ್ಯ ಸಮಾರಾಧನೆ ನೆರವೇರಲಿದೆ.

ರಾಷ್ಟ್ರ ಮತ್ತು ಅಂತಾರಾಷ್ಟ್ರೀಯ ಮಟ್ಟದ ಕಲಾವಿದರು ವಾದನ- ಗಾಯನ, ನರ್ತನದ ಮೂಲಕ ಸಂಗೀತ ರಸಿಕರ ಮನ ತಣಿಸಲಿದ್ದಾರೆ. ಪ್ರವೇಶ ಉಚಿತವಾಗಿದೆ. ಅಂದು ಬೆಳಗ್ಗೆ 10ಕ್ಕೆ ತಾಳವಾದ್ಯ - ಕಛೇರಿ ಆಯೋಜನೆಗೊಂಡಿದೆ. ಹೆಸರಾಂತ ವಿದ್ವಾಂಸರಾದ ಅದಮ್ಯ ರಮಾನಂದ, ಅನಿರುದ್ಧ ಎಸ್. ಭಟ್, ಸೋಮಶೇಖರ ಜೋಯಿಸ್ ಅವರ ಪರಿಕಲ್ಪನೆ ಮತ್ತು ನಿರ್ದೇಶನದಲ್ಲಿ 22 ಕಲಾವಿದರು ತಾಳವಾದ್ಯದ ಹೊಸ ರಂಗು ಗಳನ್ನು ಕಲಾ ರಸಿಕರಿಗೆ ಸಮರ್ಪಿಸಲಿದ್ದಾರೆ. ಮೃದಂಗ, ಖಂಜಿರ, ಘಟ, ಕೊನ್ನಕೋಲ್ ಮತ್ತು ಮೋರ್ಸಿಂಗ್ ವಾದ್ಯಗಳು ಅನುರಣಿಸಲಿವೆ.

ಕಣ್ಣನಗಳನ್ನು ತಣಿಸುವ ಈ ಕಾರ್ಯಕ್ರಮವನ್ನು ನೋಡುವುದೇ ಒಂದು ಸೊಗಸಾಗಲಿದೆ. ಬೆಳಗ್ಗೆ 11ಕ್ಕೆ ವಿಶೇಷ ಗಾಯನ ಕಛೇರಿ ಸಂಪನ್ನಗೊಳ್ಳಲಿದೆ.

ಪ್ರಖ್ಯಾತ ವಿದ್ವಾನ್ ಆರ್.ಕೆ. ಪದ್ಮನಾಭ ಅವರಿಂದ ಶಾಸ್ತ್ರೀಯ ಸಂಗೀತ ಗಾಯನವಿದೆ. ಪಕ್ಕವಾದ್ಯದಲ್ಲಿ ಪ್ರಖ್ಯಾತ ವಿದ್ವಾನ್ ಎಚ್.ಎಸ್. ಸುಧೀಂದ್ರ ಅವರ ಮೃದಂಗ, ಚಾರುಲತಾ ರಾಮಾನುಜಂ ( ಪಿಟೀಲು), ಓಂಕಾರ್ ( ಘಟಂ) ಮತ್ತು ವಿದ್ವಾನ್ ಎಸ್. ವಿ. ಗಿರಿಧರ ಮೋರ್ಸಿಂಗ್ ಸಹಕಾರ ನೀಡಲಿದ್ದಾರೆ.

**ಭರತನಾಟ್ಯ ಪ್ರಸ್ತುತಿ:** ಭಾನುವಾರ ಸಂಜೆ 5 ಗಂಟೆಗೆ ಹಿರಿಯ ಭರತನಾಟ್ಯ ವಿದ್ವಾಂಸ ವಿದ್ವಾನ್ ಸತ್ಯನಾರಾಯಣ ರಾಜು, ವಿದುಷಿ ಮೀರಾ ಶ್ರೀ ನಾರಾಯಣನ್ ಹಾಗೂ ಉದಯೋನ್ಮುಖ ಕಲಾವಿದೆ ಯುಕ್ತಿ ಉಡುಪ ಅವರಿಂದ ವಿಶೇಷ ಭರತನಾಟ್ಯ ಪ್ರಸ್ತುತಗೊಳ್ಳಲಿದೆ. ತಂಜಾವೂರು ಸಹೋದರರ ರಚನೆಯ ಅಷ್ಟರಾಗ ಮಾಲಿಕಾ ವರ್ಣವನ್ನು ಈ ಕಲಾವಿದರು ಪಡಮೂಡಿಸಲಿದ್ದಾರೆ.

# ಶಾಸ್ತ್ರಕ್ಕನುಸಾರ ತಯಾರಿಸಿದ ಮೂರ್ತಿಯು ಏಕೆ ಸಾತ್ತ್ವಿಕವಾಗಿರುತ್ತದೆ?

1. ಮೂರ್ತಿಯು ದೇವತೆಯ ಮೂಲ ರೂಪದೊಂದಿಗೆ ಎಷ್ಟು ಹೋಲುತ್ತದೆಯೋ, ಅಷ್ಟೇ ಹೆಚ್ಚು ಪ್ರಮಾಣದಲ್ಲಿ ಆ ದೇವತೆಯ ತತ್ತ್ವವು ಮೂರ್ತಿಯ ಕಡೆಗೆ ಆಕರ್ಷಿಸುತ್ತದೆ. ಋಷಿಮುನಿಗಳು, ಸಂತರು ಶಾಸ್ತ್ರಗಳನ್ನು ಬರೆದಿದ್ದಾರೆ. ಅವರಿಗೆ ದೇವತೆಗಳ ಸಾಕ್ಷಾತ್ಕಾರವು ಹೇಗೆ ಆಗಿದೆಯೋ, ಹಾಗೇ ಅವರು ದೇವತೆಗಳನ್ನು ಶಾಸ್ತ್ರದಲ್ಲಿ ವರ್ಣಿಸಿದ್ದಾರೆ; ಆದುದರಿಂದ ಶಾಸ್ತ್ರದಲ್ಲಿ ಹೇಳಿದಂತೆ ಮೂರ್ತಿಯನ್ನು ತಯಾರಿಸಿದರೆ ಅದು ಸಾತ್ತ್ವಿಕವಾಗುತ್ತದೆ.

2. ಅಧ್ಯಾತ್ಮಶಾಸ್ತ್ರದ ದೃಷ್ಟಿಯಿಂದ ಪ್ರತಿಯೊಂದು ದೇವತೆ ಎಂದರೆ ಒಂದು ವಿಶಿಷ್ಟ ತತ್ತ್ವವಾಗಿದೆ. ಶಬ್ದ, ಸ್ಪರ್ಶ, ರೂಪ, ರಸ, ಗಂಧ ಮತ್ತು ಅವುಗಳಿಗೆ ಸಂಬಂಧಿಸಿದ ಶಕ್ತಿ ಒಟ್ಟಿಗೆ ಇರುತ್ತವೆ, ಈ ಸಿದ್ಧಾಂತಕ್ಕನುಸಾರ ಮೂರ್ತಿವಿಜ್ಞಾನದಂತೆ ಮೂರ್ತಿಯನ್ನು ತಯಾರಿಸಿದರೆ ಆ ಮೂರ್ತಿಯಲ್ಲಿ ಆ ದೇವತೆಯ ತತ್ತ್ವವು ಆಕರ್ಷಿಸುತ್ತದೆ. ಶ್ರೀ ಗಣಪತಿ ಅಥರ್ವಶೀರ್ಷದಲ್ಲಿ ವರ್ಣಿಸಿದ ಶ್ರೀ ಗಣೇಶನ ಮೂರ್ತಿವಿಜ್ಞಾನ ಶ್ರೀ ಗಣಪತಿ ಅಥರ್ವಶೀರ್ಷದಲ್ಲಿ **ಗಣೇಶನ ರೂಪವನ್ನು ಮುಂದಿನಂತೆ ಕೊಡಲಾಗಿದೆ:** ಏಕದಂತಂ ಚತುರ್ಹಸ್ತಂ| ಅಂದರೆ ಏಕದಂತ, ಚತುರ್ಭುಜ, ಪಾಶ ಮತ್ತು ಅಂಕುಶವನ್ನು ಧರಿಸಿರುವವನು, ಒಂದು ಕೈಯಲ್ಲಿ (ಮುರಿದ) ದಂತವನ್ನು ಧರಿಸುವವನು ಮತ್ತು ಇನ್ನೊಂದು ಕೈಯು ವರದಮುದ್ರೆಯಲ್ಲಿರುವವನು, ಮೂಷಕ ಚಿಹ್ನೆ ಇರುವ ಧ್ವಜವಿರುವವನು, ರಕ್ತ ವರ್ಣ, ಲಂಬೋದರ, ಮೊರದಂತೆ ಕಿವಿಗಳಿರುವವನು, ಕೆಂಪು ವಸ್ತ್ರಗಳನ್ನು ಉಟ್ಟುಕೊಂಡಿರುವವನು, ಮೈಗೆ ರಕ್ತಚಂದನದ ಲೇಪನವನ್ನು ಹಚ್ಚಿಕೊಂಡವನು, ಕೆಂಪು ಪುಷ್ಪಗಳಿಂದ ಪೂಜಿಸಲ್ಪಡುವವನು.



**ಟಿಪ್ಪಣಿ:** ಅಥರ್ವಶೀರ್ಷದಲ್ಲಿ ಗಣೇಶನು ಒಂದು ಕೈಯಲ್ಲಿ ಮುರಿದ ದಂತವನ್ನು ಧರಿಸಿರುವವನಾಗಿದ್ದಾನೆ ಎಂದು ಅವನ ರೂಪವನ್ನು ಹೇಳಲಾಗಿದೆ.

ಶ್ರೀ ಗಣೇಶನು ಮುಖ್ಯವಾಗಿ ಜ್ಞಾನದ ದೇವತೆಯಾಗಿದ್ದಾನೆ. ಮೋದಕವು ಜ್ಞಾನದ ಪ್ರತೀಕವಾಗಿದೆ. ಈ ಕಾರಣದಿಂದಾಗಿ ಶ್ರೀ ಗಣೇಶನ ಕೈ ಯಲ್ಲಿ ಮುರಿದ ಹಲ್ಲಿನ ಬದಲಿಗೆ ಮೋದಕವನ್ನು ತೋರಿಸುವ ಪದ್ಧತಿಯು ಪ್ರಚಲಿತವಾಗಿರಬೇಕು.

# ಸಾಫ್ಟ್ ಟೇಸ್ಟಿ ಬನಾನಾ ಕೇಕ್! ಮನೆಯಲ್ಲೇ ಟ್ರೈ ಮಾಡಿ ನೋಡಿ..

ಬಾಳೆಹಣ್ಣಿನಿಂದ ಕೇಕ್ ಮಾಡೋದು ತುಂಬಾನೇ ಸುಲಭ. ಈ 6 ಸ್ಟೆಪ್‌ಗಳಲ್ಲಿ ರೆಡಿ. ಹೌದು, ಮನೆಯಲ್ಲೇ ತಯಾರಿಸಿದ ಸಿಹಿ, ಸ್ಪಂಜಿನ ಬಾಳೆಹಣ್ಣಿನ ಕೇಕ್ ತಿನ್ನಲು ಬಲು ರುಚಿಯಾಗಿರುತ್ತದೆ. ಅದರಲ್ಲೂ, ಹೊಸದಾಗಿ ಅಡುಗೆ ಮಾಡುವವರಿಗೆ ಇದು ಸುಲಭವಾಗಿ ತಯಾರಿಸಬಹುದಾದ ಕೇಕ್ ಆಗಿದೆ. ಹಣ್ಣಾದ ಬಾಳೆಹಣ್ಣುಗಳನ್ನು ಬಳಸಿಕೊಂಡು ಮಾಡುವ ಈ ಕೇಕ್, ಸಿಹಿ ಮತ್ತು ನೈಸರ್ಗಿಕ ಸುವಾಸನೆಯಿಂದ ಕೂಡಿದೆ. ಇದು ಕಾಫಿ ಅಥವಾ ಚಹಾದ ಜೊತೆ ಸವಿಯಲು ಅತ್ಯುತ್ತಮವಾದ ಆಯ್ಕೆ. ಮನೆಯಲ್ಲಿ ತಯಾರಿಸುವ ಕೇಕ್‌ಗಳು ಯಾವಾಗಲೂ ವಿಶೇಷ. ಅವುಗಳಲ್ಲಿ ಬಾಳೆಹಣ್ಣಿನ ಕೇಕ್‌ಗೆ ಒಂದು ವಿಭಿನ್ನ ಮೃದುವಾದ ತುದಿ ಹಾಗೂ ಸಿಹಿಯಾದ ರುಚಿಯಿದೆ. ಮಾರುಕಟ್ಟೆಯಲ್ಲಿ ಸಿಗುವ ಕೇಕ್‌ಗಳಿಗಿಂತ ಮನೆಯಲ್ಲೇ ಮಾಡಿದ ಕೇಕ್ ಹೆಚ್ಚು ಆರೋಗ್ಯಕರ ಕಡಿಮೆ ವೆಚ್ಚದಾಗಿರುತ್ತದೆ. ಕೇವಲ 6 ಹಂತಗಳಲ್ಲಿ ಈ ಬಾಳೆಹಣ್ಣಿನ ಕೇಕ್ ಸಿದ್ಧವಾಗುತ್ತದೆ. ಬನ್ನಿ, ಬನಾನಾ ಕೇಕ್ ಮಾಡುವ ವಿಧಾನ ತಿಳಿಯೋಣ.

**ಬಾಳೆಹಣ್ಣಿನ ಕೇಕ್ ಮಾಡುವ ವಿಧಾನ:** ಹಂತ 1: ಮೊದಲಿಗೆ, ಕೇಕ್ ತಯಾರಿಸಲು ಬೇಕಾಗುವ ಎಲ್ಲಾ ಸಾಮಗ್ರಿಗಳನ್ನು ಕೋಣೆಯ ತಾಪಮಾನಕ್ಕೆ (ರೂಮ್ ಟೆಂಪರೇಚರ್) ತಂದುಕೊಳ್ಳಿ. ಮೊಟ್ಟೆ, ಬೆಣ್ಣೆ ಮತ್ತು ಹಾಲು ತಾಪಮಾನದಲ್ಲಿದ್ದರೆ, ಅವುಗಳನ್ನು ಮಿಕ್ಸ್ ಮಾಡುವುದು ಸುಲಭ. ಕೇಕ್ ಉತ್ತಮವಾಗಿ ಸ್ಪಂಜಿಯಾಗಿ ಬರುತ್ತದೆ.

ನಂತರ, ಬೇಕಿಂಗ್ ಪ್ಯಾನ್ ಅನ್ನು ಬೆಣ್ಣೆ ಅಥವಾ ಎಣ್ಣೆಯಿಂದ ಗ್ರೀಸ್ ಮಾಡಿ, ಅದರ ಮೇಲೆ ಸ್ವಲ್ಪ ಮೈದಾ ಹಿಟ್ಟನ್ನು ಹರಡಿ. ನಂತರ ಓವನ್ ಅನ್ನು 170ಲಿಅ ನಲ್ಲಿ 15 ನಿಮಿಷಗಳ ಕಾಲ ಪೂರ್ವಭಾವಿಯಾಗಿ ಕಾಯಿಸಿಕೊಳ್ಳಿ.

**ಹಂತ 2:** ಒಣ ಮತ್ತು ಹಸಿ ಪದಾರ್ಥಗಳನ್ನು ಪ್ರತ್ಯೇಕಿಸಿ. ಒಂದು ದೊಡ್ಡ ಬೌಲ್‌ನಲ್ಲಿ ಮೈದಾ ಹಿಟ್ಟು, ಬೇಕಿಂಗ್ ಪೌಡರ್ ಮತ್ತು ಉಪ್ಪನ್ನು ಜರಡಿ ಹಿಡಿದು ಚೆನ್ನಾಗಿ ಮಿಕ್ಸ್ ಮಾಡಿ. ಮತ್ತೊಂದು ಬೌಲ್‌ನಲ್ಲಿ, ಬೆಣ್ಣೆ ಮತ್ತು ಸಕ್ಕರೆಯನ್ನು ನುಣುಪಾಗುವವರೆಗೆ ಬೀಟ್ ಮಾಡಿ. ನಂತರ ಮೊಟ್ಟೆಗಳನ್ನು ಒಂದೊಂದಾಗಿ ಒಡೆದು ಹಾಕಿ ಮತ್ತು ವೆನಿಲ್ಲಾ ಸಾರವನ್ನು ಸೇರಿಸಿ ಮಿಶ್ರಣ ಮಾಡಿ. ನಂತರ ಚೆನ್ನಾಗಿ ಮೆತ್ತಗಾದ ಬಾಳೆಹಣ್ಣನ್ನು ಇದಕ್ಕೆ ಸೇರಿಸಿ.

**ಹಂತ 3:** ಎರಡನ್ನೂ ಮಿಕ್ಸ್ ಮಾಡುವುದು. ಈಗ, ಒಣ ಪದಾರ್ಥಗಳನ್ನು ಸ್ವಲ್ಪ ಸ್ವಲ್ಪವಾಗಿ ಹಸಿ ಪದಾರ್ಥಗಳ ಮಿಶ್ರಣಕ್ಕೆ ಸೇರಿಸಿ. ಹಾಲನ್ನು ಕೂಡ ಸ್ವಲ್ಪ ಸ್ವಲ್ಪವಾಗಿ ಸೇರಿಸುತ್ತಾ ನಿಧಾನವಾಗಿ ಮಿಕ್ಸ್ ಮಾಡಿ. ಕೇಕ್ ಮಿಶ್ರಣವು ನಯವಾದ ಮತ್ತು ಸಮನಾದ ವಿನ್ಯಾಸಕ್ಕೆ ಬರುವವರೆಗೆ ಕಲಸಿ. ಹೆಚ್ಚು ಕಲಸಬೇಡಿ. ಅದು ಕೇಕ್ ಗಟ್ಟಿಯಾಗಲು ಕಾರಣವಾಗುತ್ತದೆ.

**ಹಂತ 4:** ಸಿದ್ಧಪಡಿಸಿದ ಕೇಕ್ ಮಿಶ್ರಣವನ್ನು ಗ್ರೀಸ್ ಮಾಡಿದ ಬೇಕಿಂಗ್ ಪ್ಯಾನ್‌ಗೆ ಸುರಿಯಿರಿ. ಸಮನಾಗಿ ಹರಡಲು ಪ್ಯಾನ್ ಅನ್ನು ನಿಧಾನವಾಗಿ ಅಲುಗಾಡಿಸಿ. ನಂತರ ಈ ಪ್ಯಾನ್ ಅನ್ನು ಪೂರ್ವಭಾವಿಯಾಗಿ ಕಾಯಿಸಿದ ಓವನ್‌ನ ಮಧ್ಯದ ರಾಕ್‌ನಲ್ಲಿ ಇಡಿ.

**ಹಂತ 5:** ಕೇಕ್ ಅನ್ನು 25 ರಿಂದ 30 ನಿಮಿಷಗಳ ಕಾಲ ಬೇಕ್ ಮಾಡಿ. ಕೇಕ್ ಚೆನ್ನಾಗಿ ಬೆಂದಿದೆಯೇ ಎಂದು ಪರಿಶೀಲಿಸಲು, ಒಂದು ಟೂತ್‌ಪಿಕ್ ಅನ್ನು ಕೇಕ್‌ನ ಮಧ್ಯಭಾಗಕ್ಕೆ ಹಾಕಿ ಹೊರತೆಗೆಯಿರಿ. ಟೂತ್‌ಪಿಕ್ ಸ್ವಚ್ಛವಾಗಿ ಹೊರಬಂದರೆ, ಕೇಕ್ ಬೆಂದಿದೆ ಎಂದು ಅರ್ಥ. ಇಲ್ಲದಿದ್ದರೆ, ಇನ್ನೊಂದು 5 ರಿಂದ 10 ನಿಮಿಷಗಳ ಕಾಲ ಬೇಕ್ ಮಾಡಿ.

**ಹಂತ 6:** ಕೇಕ್ ಬೆಂದ ನಂತರ, ಓವನ್‌ನಿಂದ ಹೊರತೆಗೆದು ತಂಪಾಗಲು ಬಿಡಿ. ಬಿಸಿ ಇರುವಾಗ ಕತ್ತರಿಸಬೇಡಿ. ಸಂಪೂರ್ಣವಾಗಿ ತಣ್ಣಗಾದ ನಂತರ, ನಿಮ್ಮ ಇಷ್ಟದ ಆಕಾರದಲ್ಲಿ ಕತ್ತರಿಸಿ. ಇಷ್ಟು ಮಾಡಿದರೆ, ಸಿಹಿಯಾದ ಬಾಳೆಹಣ್ಣಿನ ಕೇಕ್ ಸವಿಯಲು ಸಿದ್ಧ.



## ಬಾಳೆಹಣ್ಣಿನ ಕೇಕ್ ಮಾಡಲು ಬೇಕಾಗುವ ಸಾಮಗ್ರಿಗಳು

- ಹಣ್ಣಾದ ಬಾಳೆಹಣ್ಣು - 1 ಕಪ್
- ಮೈದಾ ಹಿಟ್ಟು - 2 ಕಪ್
- ಬೇಕಿಂಗ್ ಪೌಡರ್ - 2 ಚಮಚ
- ಸಕ್ಕರೆ - 1 ಕಪ್
- ಹಾಲು - 160 ಮಿ.ಲೀ
- ಬೆಣ್ಣೆ - 100 ಗ್ರಾಂ
- ವೆನಿಲ್ಲಾ ಸಾರ - 2 ಚಮಚ
- ಉಪ್ಪು - ರುಚಿಗೆ ತಕ್ಕಷ್ಟು
- ಮೊಟ್ಟೆ - 2



ಮಾರುಕಟ್ಟೆಯಲ್ಲಿ ಮಾರಾಟವಾಗುವ ಅರಿಶಿನವು ಸಿಕ್ಕಾಪಟ್ಟೆ ಹಳದಿ ಬಣ್ಣವನ್ನು ಹೊಂದಿದ್ದು, ಇದು ಅರಿಶಿನದ ಬಣ್ಣಕ್ಕೆ ಕಲಬೆರಕೆ ಮಾಡಲಾಗಿರುತ್ತದೆ. ನೀವು ಅದನ್ನು ಮನೆಯಲ್ಲಿಯೇ ಕುಳಿತು ಸುಲಭವಾಗಿ ಕಂಡುಹಿಡಿಯಬಹುದು. ಅರಿಶಿನ ಒಂದು ಆಯುರ್ವೇದಿಕ್ ಗಿಡಮೂಲಿಕೆ ಆಗಿದ್ದು, ಅದನ್ನು ಮನೆಮದ್ದುಗಳಲ್ಲಿ ಮಾತ್ರವಲ್ಲದೆ, ನಮ್ಮ ದಿನನಿತ್ಯದ ಖಾದ್ಯದಲ್ಲೂ ಬಳಸುತ್ತೇವೆ. ಇದು ಆಹಾರಕ್ಕೆ ಬಣ್ಣ ನೀಡೋದಲ್ಲದೆ, ರುಚಿಯನ್ನೂ ಹೆಚ್ಚಿಸುತ್ತದೆ. ಇದರಲ್ಲಿನ ಆಂಟಿ ಬಯೋಟಿಕ್ ಗುಣಗಳು ಕಾಯಿಲೆಯನ್ನು ದೂರವಿಡಲು ಸಹಕಾರಿಯಾಗಿದೆ. ಇತ್ತೀಚಿನ ದಿನಗಳಲ್ಲಿ ಮಾರುಕಟ್ಟೆಯಲ್ಲಿ ನಕಲಿ ಅರಿಶಿನ ಮಾರಾಟವಾಗುತ್ತಿದೆ. ಅನೇಕರು ಮಾರುಕಟ್ಟೆಯಲ್ಲಿ ದೊರೆಯುವ ಅರಿಶಿನವನ್ನೇ ಬಳಸೋದ್ರಿಂದ ಬಹುತೇಕರಿಗೆ ಅದು ಅಸಲಿಯೋ, ನಕಲಿಯೋ ತಿಳಿದಿಲ್ಲ.

# ನೀವು ಬಳಸುತ್ತಿರುವುದು ನಕಲಿ ಅರಿಶಿನದ ಪುಡಿಯೇ ಪತ್ತೆ ಹಚ್ಚೋದು ಹೇಗೆ?

**ಅಡುಗೆಯಲ್ಲಿ ಅರಿಶಿನದ ಪಾತ್ರ:** ಅರಿಶಿನವು ನಮ್ಮ ಅಡುಗೆಯಲ್ಲಿ, ಆಹಾರದಲ್ಲಿ ಬಹುಮುಖ್ಯ ಪಾತ್ರವಹಿಸುತ್ತದೆ. ದಾಲ್, ಸಾಂಬಾರು, ತರಕಾರಿ ಪಲ್ಯ, ಮಾಂಸಾಹಾರವೇ ಆಗಿರಲಿ ಅರಿಶಿನವನ್ನು ಬಳಸಲಾಗುತ್ತದೆ. ಹಾಲು ಕುಡಿಯುವಾಗಲೂ ಹಾಲಿಗೆ ಅರಿಶಿನವನ್ನು ಬಳಸಲಾಗುತ್ತದೆ. ಇದು ಆರೋಗ್ಯಕ್ಕೂ ತುಂಬಾ ಪ್ರಯೋಜನಕಾರಿಯಾಗಿದೆ. ನಾವಿಂದು ನಾವು ಬಳಸುತ್ತಿರುವ ಅರಿಶಿನ ಅಸಲಿಯೇ ಅಥವಾ ನಕಲಿಯೇ ಎನ್ನುವುದನ್ನು ತಿಳಿಯೋದು ಹೇಗೆ ಅನ್ನೋದನ್ನು ತಿಳಿಯೋಣ.

**ನೀರಿನ ಪರೀಕ್ಷೆ:** ಒಂದು ಲೋಟ ನೀರಿನಲ್ಲಿ ಅರಿಶಿನ ಪುಡಿಯನ್ನು ಹಾಕಿ ಸ್ವಲ್ಪ ಸಮಯದವರೆಗೆ ಬಿಡಿ. ಈ ಅರಿಶಿನವು ಕೆಳಭಾಗದಲ್ಲಿ ನೆಲೆಗೊಂಡು ನೀರು ಮೇಲ್ಭಾಗದಲ್ಲಿ ಸ್ಪಷ್ಟವಾಗಿದ್ದರೆ, ಅದು ಅಸಲಿ ಎಂದರ್ಥ.ಒಂದು ವೇಳೆ ನೀರಿನ ಬಣ್ಣವು ಗಾಢವಾಗಿದ್ದರೆ, ಅದು ಕಲಬೆರಕೆಯಾಗಿದೆ ಎಂದು ಅರ್ಥಮಾಡಿಕೊಳ್ಳಿ.

**ಕೈಯಲ್ಲಿ ಉಜ್ಜುವ ಮೂಲಕ ಪರೀಕ್ಷಿಸಿ:** ನಿಮ್ಮ ಅಂಗೈ ಅಥವಾ ಬಿಳಿ ಬಟ್ಟೆಯ ಮೇಲೆ ಅರಿಶಿನವನ್ನು ಉಜ್ಜಿ ನೋಡಿ. ನಿಜವಾದ ಅರಿಶಿನದ ಬಣ್ಣವು ಸುಲಭವಾಗಿ ಸ್ವಚ್ಛಗೊಳಿಸಲ್ಪಡುತ್ತದೆ, ಆದರೆ ನಕಲಿ ಅರಿಶಿನದ ಕಲೆ ದೀರ್ಘಕಾಲದವರೆಗೆ ಬಟ್ಟೆಯಲ್ಲಿ ಅಂಟಿಕೊಳ್ಳುತ್ತದೆ.

**ಅಯೋಡಿನ್ ಪರೀಕ್ಷೆ:** ಒಂದು ಟೀಚಮಚ ಅರಿಶಿನ ಪುಡಿಗೆ ಕೆಲವು ಹನಿ ಅಯೋಡಿನ್ ಸೇರಿಸಿ. ಅದರ ಬಣ್ಣ ನೀಲಿ ಅಥವಾ ಕಪ್ಪು ಬಣ್ಣಕ್ಕೆ ತಿರುಗಿದರೆ, ಅದರಲ್ಲಿ ಪಿಷ್ಟ ಮಿಶ್ರಣವಾಗಿದೆ ಎಂದು ಅರ್ಥಮಾಡಿಕೊಳ್ಳಿ.

**ವಾಸನೆ, ರುಚಿ:** ನಿಜವಾದ ಅರಿಶಿನವು ಹಗುರವಾದ ಮಣ್ಣಿನಂತೆ ನೈಸರ್ಗಿಕ ವಾಸನೆಯನ್ನು ಹೊಂದಿರುತ್ತದೆ ಮತ್ತು ಅದರ ರುಚಿ ಸ್ವಲ್ಪ ಕಹಿಯಾಗಿರುತ್ತದೆ. ಆದರೆ ನಕಲಿ ಅರಿಶಿನವು ಬಲವಾದ ವಾಸನೆಯನ್ನು ಹೊಂದಿರುತ್ತದೆ.

**ನಿಂಬೆ ಪರೀಕ್ಷೆ:** ಅರಿಶಿನ ಪುಡಿಗೆ ಕೆಲವು ಹನಿ ನಿಂಬೆ ರಸ ಸೇರಿಸಿ. ಒಂದು ವೇಳೆ ನೊರೆ ಅಥವಾ ಗುಳ್ಳೆಗಳು ರೂಪುಗೊಳ್ಳಲು ಪ್ರಾರಂಭಿಸಿದರೆ ಅದು ಕಲಬೆರಕೆಯಾಗಿದೆ. ನಿಂಬೆ ರಸವು ನಿಜವಾದ ಅರಿಶಿನದ ಮೇಲೆ ಯಾವುದೇ ಪರಿಣಾಮ ಬೀರುವುದಿಲ್ಲ.

**ಸೋಪ್ ಪರೀಕ್ಷೆ:** ನೀರಿನಲ್ಲಿ ಸ್ವಲ್ಪ ಅರಿಶಿನವನ್ನು ಕರಗಿಸಿ ಅದಕ್ಕೆ ಸೋಪ್ ನೊರೆಯನ್ನು ಸೇರಿಸಿ. ಅರಿಶಿನದ ಬಣ್ಣ ಇನ್ನೂ ಗಾಢವಾಗಿದ್ದರೆ ಅದು ಕಲಬೆರಕೆಯಾಗಬಹುದು. ಆದರೆ ಫೋಮ್‌ನೊಂದಿಗೆ ನಿಜವಾದ ಅರಿಶಿನದ ಬಣ್ಣವು ಹೆಚ್ಚು ಬದಲಾಗುವುದಿಲ್ಲ. ಈ ಮೂಲಕ ನೀವು ಬಳಸುತ್ತಿರುವ ಅರಿಶಿನ ಅಸಲಿಯೋ, ನಕಲಿಯೋ ತಿಳಿಯಬಹುದು.

## ಸಮಾಜದಲ್ಲಿ ಸ್ವಾಸ್ಥ್ಯ, ಶಾಂತಿ, ಸುವ್ಯವಸ್ಥೆ ಕಾಪಾಡುವುದು ನಮ್ಮೆಲ್ಲರ ಹೊಣೆ: ಇನಾಮ್ದಾರ

# ಡಿಜೆ, ಡಾಲ್ಬಿ, ಪ್ಲಾಜಮಾ ಧ್ವನಿವರ್ಧಕಗಳು ಸಂಪೂರ್ಣ ನಿಷೇಧ

• ಉದಯವಾಹಿನಿ, ಕೆಂಭಾವಿ


ಉದಯವಾಹಿನಿ ಚಿತ್ರ

ಅಖಂಡ ಭಾರತ ದೇಶದಲ್ಲಿ ವಿಶೇಷವಾಗಿ ಆಚಾರಿಸಲ್ಪಡುವ ಗಣೇಶ್ ಚತುರ್ಥಿ, ವಿಶ್ವದ ಹಲವು ದೇಶಗಳಲ್ಲಿ ಆಚಾರಿಸಲ್ಪಡುವ ಈದ್ ಮಿಲಾದ್, ಹಬ್ಬವು ಪ್ರವಾದಿ ಮೊಹಮ್ಮದ್ ಅವರ ಜನ್ಮ ದಿನದ ವಿಶೇಷವಾಗಿದೆ. ಇಂತಹ ಭಾವೈಕ್ಯತೆಯ ಹಬ್ಬವನ್ನು ಆಚರಿಸುವ ಸಂದರ್ಭದಲ್ಲಿ ಸಮಾಜದಲ್ಲಿ ಸ್ವಾಸ್ಥ್ಯ, ಶಾಂತಿ, ಸುವ್ಯವಸ್ಥೆ ಕಾಪಾಡುವ ಹೊಣೆ ನಮ್ಮೆಲ್ಲರದು ಇದ್ದೂ ಗಣೇಶ ಚತುರ್ಥಿ, ಈದ್ ಮಿಲಾದ್ ಹಬ್ಬವನ್ನು ಹಿಂದೂ, ಮುಸ್ಲಿಂ ಬಾಂಧವರು ಸೌಹಾರ್ದಯುತವಾಗಿ ಆಚರಿಸಬೇಕು ಎಂದು ಡಿವೈ. ಎಸ್‌ಪಿ ಸುರಪುರ ಜಾವೇದ ಇನಾಮ್ದಾರ ಹೇಳಿದರು. ಕೆಂಭಾವಿ ಪೊಲೀಸ್ ಠಾಣೆಯ ಶಾಂತಿ ಸೌಹಾರ್ದ ಸಭೆಯಲ್ಲಿ ಮಾತನಾಡಿದ ಅವರು, ಡಿಜೆ, ಡಾಲ್ಬಿ, ಪ್ಲಾಜಮಾ ಧ್ವನಿವರ್ಧಕಗಳನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ.

ಹಾಗೆ ಕಾರ್ಯಕ್ರಮಕ್ಕೆ ಬರುವ ಅತಿಥಿಗಳು ಯಾವುದೇ ಧರ್ಮದ ವಿರುದ್ಧ ಅವಹೇಳನಕಾರಿ ಪ್ರಚೋದನಾತ್ಮಕ ಭಾಷಣಗಳನ್ನು ಮಾಡುವುದು ಸಂಪೂರ್ಣವಾಗಿ ನಿಷೇಧಿಸಲಾಗಿದೆ. ಯಾವುದೇ ಮಾಹಿತಿ ಇಲ್ಲದೆ ಅಂಥವರನ್ನು ಕರೆತಂದರೆ ಅವರ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಳ್ಳಲಾಗುವುದೆಂದರು. ದೇವಸ್ಥಾನಗಳ, ಮಸೀದಿಗಳು, ಮಂದಿರಗಳ, ಹತ್ತಿರ ಹೆಚ್ಚು ಧ್ವನಿವರ್ಧಕ ಬಳಸುವುದು ನಿಷೇಧಿಸಲಾಗಿದೆ. ಕೋಮುವಾದಕ್ಕೆ ದಾರಿ ಮಾಡಿ ಕೊಡುವಂತ ಘಟನೆಗಳು ಜರುಗಿದರೆ ನಿರ್ದಾಕ್ಷಣವಾಗಿ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದರು.

ಸಿಪಿಐ ಹುಣಸಗಿ ವೃತ್ತ ಅಧಿಕಾರಿಗಳಾದ ರವಿಕುಮಾರ್ ಮಾತನಾಡಿ ಇಲಾಖೆಯು ತಮಗೆ ಎಲ್ಲಾ ರೀತಿಯ ಸಹಕಾರವನ್ನು ನೀಡುತ್ತದೆ. ಗಣೇಶ ವಿಗ್ರಹಗಳ ಪ್ರತಿಷ್ಠಾಪನೆ ಮಾಡಿದ ಸ್ಥಳಗಳಲ್ಲಿ ಬೆಳಕು ಹಾಗೂ ಸಿಸಿಟಿವಿ ವ್ಯವಸ್ಥೆ ಮಾಡಿಕೊಳ್ಳಬೇಕು. ಆಯೋಜಕರೇ ಸಂಪೂರ್ಣ ಹೊಣೆ ಹೊರಬೇಕು. ಅಹಿತಕರ ಘಟನೆಗಳು ನಡೆದಲ್ಲಿ ಸ್ಥಳೀಯ ಪೊಲೀಸ್ ಠಾಣೆಗೆ ಕರೆ ಮಾಡಿ ತಿಳಿಸಬೇಕು ಹಬ್ಬದ ಆಚರಣೆಗಳಲ್ಲಿ ಪ್ರಚೋದನಾಕಾರಿ ಹೇಳಿಕೆ, ಅಸಭ್ಯ ವರ್ತನೆ ಕಂಡುಬಂದರೆ ಕಾನೂನು ಕ್ರಮ ಕೈಗೊಳ್ಳಲಾಗುತ್ತದೆ.

**ನಾಡಿನ ಪರಂಪರೆ ರಕ್ಷಿಸಿ**

**ಪಿಎಸ್‌ಐ ಅಮೋಜ ಕಾಂಬಳೆ ಮಾತನಾಡಿ:** ಪೊಲೀಸ್ ಇಲಾಖೆ ತಮಗೆ ಎಲ್ಲಾ ರೀತಿಯ ರಕ್ಷಣೆ ಸಹಕಾರ ನೀಡುತ್ತಿದೆ ಕೋಮು ಗಲಭೆಗಳಿಗೆ ಅವಕಾಶಗಳು ಮಾಡಿಕೊಡದೆ ಕಾನೂನಿನ ಚೌಕಟ್ಟಿನಲ್ಲಿ ತಾವೆಲ್ಲರೂ ಇದ್ದೂ ಗಣೇಶ ಚತುರ್ಥಿ, ಈದ್ ಮಿಲಾದ್ ಹಬ್ಬದ ಇಲಾಖೆ ನಿಗದಿಪಡಿಸಿದ ಮಾರ್ಗಸೂಚಿಗಳನ್ನು ಪಾಲಿಸಿ ಸೌಹಾರ್ದಯುತವಾಗಿ ಆಚರಿಸಿ ಭಾರತೀಯ ಸಂಸ್ಕೃತಿಯನ್ನು ಈ ನಾಡಿನ ಪರಂಪರೆಯನ್ನು ರಕ್ಷಿಸಬೇಕೆಂದರು.

**ಆದಮ ಖಾಜಿ ಮಾತನಾಡಿ:** ಕೆಂಭಾವಿ ಭಾವೈಕ್ಯತೆಯ ನಾಡು ಸೂಫಿ ಸಂತರು ಶರಣರ ಬೀಡು, ಕೆಂಭಾವಿ ಏಕತೆಯಲ್ಲಿ ಐಕ್ಯತೆಯನ್ನು ಹೊಂದಿರುವಂತಹ ಪಟ್ಟಣ ಎಲ್ಲರೂ ಸಹ ಬಾಳ್ವೆಯಿಂದ ಹಬ್ಬಗಳಲ್ಲಿ ಸರ್ವಧರ್ಮದ ಜನರು ಭಾಗವಹಿಸಿ ಹಬ್ಬವನ್ನು ಸಂಭ್ರಮಾಚರಣೆ ಮಾಡಬೇಕು ಎಂದು ಹೇಳಿದರು.

ದೇವೇಂದ್ರಪ್ಪ ವಠಾರ್, ಪರಶುರಾಮ ಬಳಬಟ್ಟಿ, ಕಾರ್ಯಕ್ರಮ ಕುರಿತು ಮಾತನಾಡಿದರು. ಕಾರ್ಯಕ್ರಮವನ್ನು ಹನುಮಂತ್ರಾಯ ಪಿಸಿ ನಿರೂಪಿಸಿದರು. ಕ್ರೈಂ ಪಿಎಸ್‌ಐ ಹನುಮಂತ್ರಾಯ ಸಿದ್ದಾಪುರ ವಂದಿಸಿದರು. ಈ ಸಂದರ್ಭದಲ್ಲಿ ಮಾಜಿ ತಾಲ್ಲೂಕು ಪಂಚಾಯತ್ ಸದಸ್ಯ, ಖಾಜಾ ಪಟೇಲ್ ಕಾಚೂರ, ಪುರಸಭೆ ಅಧ್ಯಕ್ಷ ರಹಿಮಾನ್ ಪಟೇಲ್, ಪುರಸಭೆ ಸದಸ್ಯ ರಾಘವೇಂದ್ರ ಕವಲ್ದಾರ್, ಕೃಷ್ಣಾರೆಡ್ಡಿ ಮುದ್ನೂರ್, ಮಡಿವಾಳಪ್ಪ ಕಿರದಳ್ಳಿ, ಎನ್ ಆರ್ ದಾವಲ್ ಸಾಬ್, ವಿಶಾಲ್ ಗೌಡ, ಮಲ್ಲಿಕಾರ್ಜುನ್ ಹಂದಿಗನೂರ್, ಶಿವಶರಣೆ ಯಾಳಗಿ, ಮಂಜು ಕೊಂಬಿನ, ಶಿವಪ್ಪ ಕಂಬಾರ್, ಶಫೀಕ್ ದಫ್ತೇದಾರ್, ಬಾಬಾ ತಾಳಿಕೋಟಿ, ಸುಗಪ್ಪ ನಗನೂರ, ಕೆಂಭಾವಿ ಠಾಣಾ ವ್ಯಾಪ್ತಿಯ ವಿವಿಧ ಗ್ರಾಮದ ಯುವಕರು ಮುಖಂಡರು ಸಾರ್ವಜನಿಕರು ಇದ್ದರು.

**ಪೊಲೀಸ್ ಇಲಾಖೆಯ ಮಾರ್ಗದರ್ಶನ ಹಾಗೂ ಸೂಚನೆಗಳು**


- ಪುರಸಭೆ, ಗ್ರಾಮ ಪಂಚಾಯತಿ ಅನುಮತಿ ಪತ್ರ
- ಅಗ್ನಿ ಶಾಮಕ ಠಾಣೆಯ ಅನುಮತಿ ಪತ್ರ
- ಕೆಇಬಿ(ಜೆಸ್ಕಾಂ) ಇಲಾಖೆಯ ಅನುಮತಿ ಪತ್ರ
- ಖಾಸಗಿ ಜಾಗ, ಸ್ಥಳ, ಕಟ್ಟಡ, ಜಮಿನು ಆಗಿದ್ದಲ್ಲಿ ಮಾಲೀಕರ ಅನುಮತಿ ಪತ್ರ
- ಸರ್ಕಾರಿ ಜಾಗವಿದಲ್ಲಿ ಸಂಬಂದ ಪಟ್ಟ ಇಲಾಖೆಯಿಂದ ಅನುಮತಿ ಪತ್ರ
- ಸಂಘಟನೆ, ಮಂಡಳಿಯವರ, 10 ಜನರ ಆಧಾರ ಕಾರ್ಡ, ಫೋಟೋಗಳನ್ನು ಕಡ್ಡಾವಾಗಿ ನೀಡತಕದ್ದು
- ಧ್ವನಿ ವರ್ಧಕ ಬಳಕೆಯ ಅನುಮತಿಗಾಗಿ ನಿಗದಿತ ಶುಲ್ಕವನ್ನು ಕಟ್ಟಿರುವ ಚಲನ್ ಪ್ರತಿ (ಯಾವುದೇ ಡಿಜೆ, ಡಾಲ್ಬಿ, ಡಾಲ್ಸ್ ಪ್ಲಾಸ್ಮಾಗಳನ್ನ ಬಳಸುವಂತೆ ಇಲ್ಲಾ)
- ಮೆರವಣಿಗೆ ಉಪಯೋಗಿಸುವ ವಾಹನಗಳ ದಾಖಲಾತಿಗಳು (ಡಿಲ್.ಆರ್.ಸಿ, ಇನ್ಸೂರೆನ್ಸ್‌ಗಳನ್ನ ಕಡ್ಡಾಯವಾಗಿ ನೀಡಬೇಕು

**ಪಾಲಿಸಬೇಕಾದ ನಿಯಮಗಳು**

- 9ನೇ ದಿನದ(5.09.2025) ಗಣೇಶ ವಿಸರ್ಜನಗೆ ಅನುಮತಿಮ ಇರುವುದಿಲ್ಲ
- ಕಡ್ಡಾಯವಾಗಿ ಗಣೇಶ ಮೆರವಣಿಗೆ ರೂಟ್ ಮ್ಯಾಪ್ (ಮೆರವಣಿಗೆ ಹೋಗುವ ದಾರಿ) ಅರ್ಜಿಯಲ್ಲಿ ನಮೂದು ಮಾಡತಕ್ಕದ್ದು
- ಕೆಂಭಾವಿ ಪಟ್ಟಣದ ಟಿಪ್ಪುಸುಲ್ತಾನ ಸರ್ಕಲ್, ಮಕ್ಕಾ ಸರ್ಕಲ್ ಮೆರವಣಿಗೆ ದಾರಿಯನ್ನು ನಿಷೇಧಿಸಿದೆ
- ಗಣೇಶ ಪ್ರತಿಷ್ಠಾಪನೆ ಮಾಡಿದ ಸ್ಥಳದಲ್ಲಿ ಸಿಸಿ ಕ್ಯಾಮೇರಾವನ್ನು ಅಳವಡಿಸತಕ್ಕದ್ದು
- ಗಣೇಶ ಪ್ರತಿಷ್ಠಾಪನೆ ಮಾಡಿದ ಸ್ಥಳದಲ್ಲಿ ಗಣೇಶ ಮಂಡಳಿಯವರು ತಲಾ ಇಬ್ಬರು ಸರದಿ ಪಾಳಿ ಪ್ರಕಾರ ಗಣೇಶ ಮೂರ್ತಿ ನೋಡಕೊಳ್ಳತಕ್ಕದ್ದು(24★7)

## ಗ್ರಾ.ಪಂ.ಹಳ್ಳಿಗಳು ಚಿಂಚೋಳಿ ತಾಲ್ಲೂಕಿನಲ್ಲಿಯೇ ಮುಂದುವರೆಸಲು ಒತ್ತಾಯ

• ಉದಯವಾಹಿನಿ, ಚಿಂಚೋಳಿ


ಉದಯವಾಹಿನಿ ಚಿತ್ರ

ತಾಲ್ಲೂಕಿನ ಚಂದನಕೇರಾ ಗ್ರಾಮ ಸೇರಿದಂತೆ ಗ್ರಾಪಂಗೆ ಒಳಪಡುವ ಎಲ್ಲಾ ಹಳ್ಳಿಗಳು ಚಿಂಚೋಳಿ ತಾಲ್ಲೂಕಿನಲ್ಲಿಯೇ ಮುಂದುವರೆಸುವಂತೆ ಚಂದನಕೇರಾ ಗ್ರಾಮಸ್ಥರು ಪಟ್ಟಣದ ಆಡಳಿತ ಸೌಧ ಎದುರು ಪ್ರತಿಭಟನೆ ನಡೆಸಿ ತಹಸೀಲ್ದಾರ್ ಮೂಲಕ ಜಿಲ್ಲಾಧಿಕಾರಿಗಳಿಗೆ ಮನವಿಪತ್ರ ಸಲ್ಲಿಸಿದರು. ಚಂದನಕೇರಾ ಗ್ರಾಮ ಪಂಚಾಯತ ಎಲ್ಲಾ ಹಳ್ಳಿಗಳು ಕಮಲಾಪೂರ ತಾಲ್ಲೂಕಿಗೆ ಸೇರಿಸುವ ಹುನ್ನಾರ ನಡೆಯುತ್ತಿದ್ದು ಇದನ್ನು ಕೈಬಿಟ್ಟು ಯತಾಸ್ಥಿತಿಯಾಗಿ ಚಿಂಚೋಳಿ ತಾಲ್ಲೂಕಿನಲ್ಲಿಯೇ ಮುಂದುವರೆಸುವಂತೆ ಗ್ರಾಮಸ್ಥರು ಒತ್ತಾಯಿಸಿದರು.

ಚಂದನಕೇರಾ ಗ್ರಾಮ ಪಂಚಾಯಿತಿಯ ವ್ಯಾಪ್ತಿಯ ಗ್ರಾಮಸ್ಥರು ಸುಮಾರು ವರ್ಷಗಳಿಂದ ಚಿಂಚೋಳಿ ತಾಲ್ಲೂಕಿನಲ್ಲಿದ್ದು ಕಲಬುರಗಿ ಜಿಲ್ಲೆಗೆ ಒಳಪಟ್ಟಿರುತ್ತೆವೆ ಚಂದನಕೇರಾ ವ್ಯಾಪ್ತಿಯ ಅಥವಾ ಚಂದನಕೇರಾ ಗ್ರಾಮ ಪಂಚಾಯತ ವ್ಯಾಪ್ತಿಯಲ್ಲಿ ಬರುವ ಹಳ್ಳಿಗಳಾದ ಕೊಟಗಾ, ರಾಣಾಪೂರ, ರಾಣಾಪೂರ ತಾಂಡಾ, ಮಂಡಗೋಳ ತಾಂಡಾ, ಸಿರಸನ್ ಬುಡಗಿ ತಾಂಡಾ, ಖುನಿ ತಾಂಡಾ, ಕಲದೊಡ್ಡಿ ತಾಂಡಾ ಇವೆಲ್ಲ ತಾಂಡಾಗಳು ಚಂದನಕೇರಾ ಗ್ರಾಮ ಪಂಚಾಯತ ವ್ಯಾಪ್ತಿಗೆ ಸೇರಿರುತ್ತವೆ. ಕಾರಣ ತಾವು ಚಂದನಕೇರಾ ಗ್ರಾಮ ಪಂಚಾಯತ್ ಚಿಂಚೋಳಿಯಲ್ಲಿಯೇ ಮುಂದುವರೆಸುವಂತೆ ಗ್ರಾಮಸ್ಥ ಹಣಮಂತ ಪೂಜಾರಿ ಮನವಿ ಮಾಡಿದರು. ಗ್ರಾಮಸ್ಥರಾದ ವಿಠ್ಠಲ, ಹಣಮಂತ ಕಾಶಪ್ಪ, ವಿಠ್ಠಲ ಮಂಗಲಗಿ, ರಾಜಕುಮಾರ, ಆಕಾಶ, ಅಂಬರೀಶ್, ಜಗದೇವಿ, ಆಕಾಶ ಲಾಲಪ್ಪ, ಮಲ್ಲಿಕಾರ್ಜುನ, ಮಲ್ಲಿಕಾರ್ಜುನ ಅಂಬಣ್ಣ, ಬಸವರಾಜ, ಗುರುಪಾದ, ಕಾಶಿನಾಥ, ಪ್ರವೀಣ, ಶಂಭುಲಿಂಗ, ನಿಖೀಲ್, ಗೋಪಾಲ್, ಅಭಿ, ಪರಮೇಶ್ವರ, ಶ್ರೀಮಂತ, ಜಗಪ್ಪ, ಸಿದ್ದಲಿಂಗ, ಮಲ್ಲು, ಸಂಜು ಸೇರಿದಂತೆ ಅನೇಕರಿದ್ದರು.

> ಹೊಸ ಸುದ್ದಿಗಳ ಮೂಲಕ ಚಂದನಕೇರಾ ಗ್ರಾಮವನ್ನು ಕಮಲಾಪೂರ ತಾಲ್ಲೂಕಿಗೆ ಸೇರಿಸಲು ಕೆಲವರು ಹುನ್ನಾರ ನಡೆಸುತ್ತಿರುವುದು ಮಾಹಿತಿ ಬಂದಿರುತ್ತದೆ ಕಾರಣ ನಮಗೆ ಚಿಂಚೋಳಿ ತಾಲ್ಲೂಕಾ ಸಮೀಪವಾಗುತ್ತದೆ ಮತ್ತು ನಮ್ಮ ಎಲ್ಲಾ ದಾಖಲೆಗಳಲ್ಲಿ ನಮ್ಮ ತಾಲ್ಲೂಕು ಚಿಂಚೋಳಿ ಎಂದು ನಮೂದು ಇದೆ, ಚಂದನಕೇರಾ ಗ್ರಾಮ ಪಂಚಾಯತ ವ್ಯಾಪ್ತಿಯ ಶೇಕಡಾ 75ರಷ್ಟು ಪ್ರತಿಶತಃ ಜನರು ಚಿಂಚೋಳಿ ತಾಲ್ಲೂಕಿನಲ್ಲಿ ಇರಲು ಹಾಗೂ ಚಿಂಚೋಳಿ ತಾಲ್ಲೂಕು ಮುಂದುವರೆಸಲು ಇಚ್ಛೆ ವ್ಯಕ್ತಪಡೆಸಿರುತ್ತಾರೆ, ಕಮಲಾಪೂರ ತಾಲ್ಲೂಕು ಮಾಡಲು ಕೇವಲ ಶೇಕಡಾ 25ಪ್ರತಿಶತಃ ಮಾತ್ರ ಜನರು ಹೇಳಿರುತ್ತಾರೆ.

## ಯುವ ಜನಾಂಗ ದಾರಿ ತಪ್ಪುತ್ತಿದೆ: ಮೈಬೂಬ ನಾಯ್ಕೊಡಿ

• ಉದಯವಾಹಿನಿ, ಬಸವನಬಾಗೇವಾಡಿ


ಉದಯವಾಹಿನಿ ಚಿತ್ರ

ಬರುವ ಸೆ. 1ರಂದು ಪಟ್ಟಣದಿಂದ ರಾಜ್ಯಾದ್ಯಂತ ಬಸವ ಸಂಸ್ಕೃತಿ ಅಭಿಯಾನಕ್ಕೆ ಚಾಲನೆ ಸಿಗುವ ಹಿನ್ನೆಲೆಯಲ್ಲಿ ಪಟ್ಟಣದ ಇಕ್ಬಾಲ್ ನಗರದಲ್ಲಿ ಸಿದ್ದಲಿಂಗ ಸ್ವಾಮೀಜಿ, ಶರಣ ವ್ರತ ಬಳಗದ ಸದಸ್ಯರು ಪಾದಯಾತ್ರೆ ನಡೆಸಿದರು. ಸಿದ್ದಲಿಂಗಸ್ವಾಮೀಜಿ ಮಾತನಾಡಿ ಸೆಪ್ಟೆಂಬರ್ ಒಂದರಂದು ಜರುಗುವ ಕಾರ್ಯಕ್ರಮವನ್ನು ಇಡೀ ರಾಜ್ಯದ ಬಸವ ಭಕ್ತರು ಕಾತುರದಿಂದ ನೋಡಲಿದ್ದು. ಭಕ್ತರು ಕಾರ್ಯಕ್ರಮ ಯಶಸ್ವಿಗೆ ಸಹಕರಿಸಬೇಕೆಂದು ವಿನಂತಿಸಿಕೊಂಡರು. ನಗರದ ಶ್ರೀ ಬಸವೇಶ್ವರ ಪ್ರಾಥಮಿಕ ಶಾಲೆ ಸೇರದಂತೆ ಅನೇಕ ಮನೆಗಳಲ್ಲಿ ಬಸವೇಶ್ವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಲಾಯಿತು. ಬಳಗದ ಸದಸ್ಯರು, ಸಾರ್ವಜನಿಕರು ಪಾದಯಾತ್ರೆ ಮೂಲಕ ಅಭಿಯಾನದ ಕುರಿತಾಗಿ ಜಾಗೃತಿ ಮೂಡಿಸಿದರು.

ಈ ಸಂದರ್ಭದಲ್ಲಿ ಸಂಗನಗೌಡ ಚಿಕ್ಕೊಂಡ, ರವಿಗೌಡ ಚಿಕ್ಕೊಂಡ, ಪಿಬಿ ಕಡೆಮನಿ, ಪ್ರಭಾಕರ್ ಖೇಡದ, ವಾಯ್. ಎನ್ ಮಿಣಜಗಿ, , ವಿವೇಕಾನಂದ ಕಲ್ಯಾಣಶೆಟ್ಟಿ, ಕೊಟ್ರೇಶ್ ಹೆಗಡ್ಯಾಳ, ಅಶೋಕ ಚಲವಾದಿ, ನೀಲಪ್ಪ ಎಂ ಅಂಗಡಿ, ಮುದುಕಣ್ಣ ಹೊರ್ತಿ, ಸಾವಿತ್ರಿ ಕಲ್ಯಾಣಶೆಟ್ಟಿ ಸೇರಿದಂತೆ ಅನೇಕರಿದ್ದರು.

> ಇದೀಗ ಯುವ ಜನಾಂಗ ದುಶ್ಚಟಗಳಿಗೆ ದಾಸರಾಗಿ ದಾರಿ ತಪ್ಪುತ್ತಿದ್ದಾರೆ. ಹೀಗಾಗಿ ಸ್ವಾಮೀಜಿಯವರು ಬರೀ ಶ್ರಾವಣ ಮಾಸದ ಜೊತೆಗೆ ವರುಷ ಪೂರ್ತಿ ಪಟ್ಟಣ ತುಂಬಾ ಸಂಚರಿಸಿ ಬಸವಾದಿ ಶರಣರ ತತ್ವಾದರ್ಶಗಳನ್ನು ಬಿಂಬಿಸುವುದರ ಮೂಲಕ ಯುವ ಜನಾಂಗದ ಬದಲಾವಣೆಗೆ ಶ್ರಮಿಸಬೇಕೆಂದರು.
>
> – ಮೈಬೂಬ್ ನಾಯ್ಕೋಡಿ
> ಪಂಚ ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ತಾಲ್ಲೂಕು ಅಧ್ಯಕ್ಷ

## ಯೂರಿಯಾ ಅಕ್ರಮ: ಐದು ಅಂಗಡಿಗಳ ಲೈಸನ್ಸ್‌ರದ್ದು

• ಉದಯವಾಹಿನಿ, ಬಳ್ಳಾರಿ



ಯೂರಿಯಾ ದಾಸ್ತಾನು ಇದ್ದರೂ ಇಲ್ಲ ಎಂದು ಹೇಳುತ್ತಿದ್ದ, ಹೆಚ್ಚಿನ ದರಕ್ಕೆ ಮಾರಾಟ ಮಾಡುತ್ತಿದ್ದ ಕಂಪ್ಲಿ ತಾಲ್ಲೂಕಿನ ಐದು ರಸಗೊಬ್ಬರ ಮತ್ತು ಪರಿಕರ ಮಾರಾಟ ಅಂಗಡಿಗಳ ಪರವಾನಗಿ ರದ್ದು ಮಾಡಲಾಗಿದೆ ಎಂದು ಕೃಷಿ ಇಲಾಖೆ ಜಂಟಿ ನಿರ್ದೇಶಕ ಸೋಮಸುಂದರ್ ತಿಳಿಸಿದ್ದಾರೆ. ಮಾಧ್ಯಮಗಳೊಂದಿಗೆ ಮಾತನಾಡಿರುವ ಅವರು, ಕುರುಗೋಡು ತಾಲ್ಲೂಕಿನಲ್ಲಿ 54 ಚೀಲ ಯೂರಿಯಾವನ್ನು ಅಕ್ರಮವಾಗಿ ಸಾಗಾಟ ಮಾಡುತ್ತಿದ್ದ ರೈತ ಮಹಿಳೆ ವಿರುದ್ಧ ಪ್ರಕರಣ ದಾಖಲಿಸಲಾಗಿದೆ.

ವಾಹವನ್ನು ವಶಕ್ಕೆ ಪಡೆಯಲಾಗಿದೆ ಎಂದು ಅವರು ಮಾಹಿತಿ ನೀಡಿದರು. ಕಲಬುರಗಿಯ ಭೀಮಾ ಕೃಷ್ಣಾ ರಾಸಾಯನಿಕ ಮತ್ತು ರಸಗೊಬ್ಬರ ಕಂಪನಿಯಲ್ಲಿ ತಯಾರಾದ ಯೂರಿಯಾವನ್ನು ಕುರುಗೋಡಿಗೆ ಅಕ್ರಮವಾಗಿ ತಂದು, ವಾಹನದಲ್ಲಿಟ್ಟುಕೊಂಡು ಮಹಿಳೆ ಮಾರಾಟ ಮಾಡುತ್ತಿದ್ದರು ಎಂದು ಹೇಳಿದರು.

ಯೂರಿಯಾ ಬಿಕ್ಕಟ್ಟು ನಿವಾರಿಸಲು ಕೃಷಿ ಇಲಾಖೆಯ ಅಧಿಕಾರಿಗಳು ಜಿಲ್ಲೆಯಾದ್ಯಂತ ನಿರಂತ ಪರಿಶೀಲನೆ ನಡೆಸುತ್ತಿದ್ದಾರೆ ಎಂದು ಸೋಮಸುಂದರ್ ಹೇಳಿದರು.

**ರಸಗೊಬ್ಬರ ಕೊರತೆ ಇಲ್ಲ:** ಮುಂಗಾರು ಹಂಗಾಮಿಗೆ ಜಿಲ್ಲೆಯಲ್ಲಿ 44,350 ಮೆಟ್ರಿನ್ ಟನ್ ಯೂರಿಯಾ ಅಗತ್ಯವಿದೆ. ಇಲ್ಲಿವರೆಗೆ 37,668 ಮೆಟ್ರಿಕ್ ಟನ್‌ನಷ್ಟು ಪೂರೈಕೆಯಾಗಿದೆ. 5,114 ಟನ್ ದಾಸ್ತಾನು ಇದೆ. ಇನ್ನು ಎರಡು ದಿನಗಳಲ್ಲಿ 1,933 ಟನ್ ಬರುತ್ತಿದೆ ಎಂದು ಸೋಮಸುಂದರ್ ಮಾಹಿತಿ ನೀಡಿದ್ದಾರೆ. ರಸಗೊಬ್ಬರ ನಿರಂತರವಾಗಿ ಪೂರೈಕೆಯಾಗುತ್ತಿದೆ. ಅದಕ್ಕೆ ಪ್ರತಿಯಾಗಿ ಭತ್ತದ ಕ್ಷೇತ್ರ ಹೆಚ್ಚಾಗಿರುವುದರಿಂದ ಯೂರಿಯಾ ಬೇಡಿಕೆ ಹೆಚ್ಚಾಗಿದೆ. ರೈತರು ಶಿಫಾರಸಿನ ಪ್ರಮಾಣಕ್ಕಿಂತಲೂ ಹೆಚ್ಚು ಖರೀದಿ ಮಾಡುತ್ತಿದ್ದಾರೆ' ಎಂದು ಅವರು ತಿಳಿಸಿದರು.

## ಮಾದಕ ವಸ್ತುಗಳ ಸೇವನೆ ಶಿಕ್ಷಾರ್ಹ ಅಪರಾಧ

• ಉದಯವಾಹಿನಿ, ಚಿತ್ರದುರ್ಗ


ಉದಯವಾಹಿನಿ ಚಿತ್ರ

ಎನ್‌ಡಿಪಿಎಸ್ (ನಾರ್ಕೋಟಿಕ್ ಡ್ರಗ್ಸ್ ಅಂಡ್ ಸೈಕೋಟ್ರೋಫಿಕ್ ಸಬ್‌ಟೆನ್ಸ್ ಆಕ್ಟ್) ಕಾಯ್ದೆ ಪ್ರಕಾರ ಮಾದಕ ವಸ್ತುಗಳ ಸೇವನೆ ಶಿಕ್ಷಾರ್ಹ ಅಪರಾಧವಾಗಿದೆ. ಯುವಕರು ಮಾದಕ ವಸ್ತುಗಳ ಸೇವನೆಯಿಂದ ದೂರವಿರಬೇಕು ಎಂದು ಅಬಕಾರಿ ಉಪ ಆಯುಕ್ತೆ ಡಾ.ಕೆ.ಆಶಾಲತಾ ಎಚ್ಚರಿಸಿದರು.

ಅಬಕಾರಿ ಇಲಾಖೆ, ಬಸವೇಶ್ವರ ವೈದ್ಯಕೀಯ ಕಾಲೇಜು, ಸಂಶೋಧನೆ ಕೇಂದ್ರದ ಸಂಯುಕ್ತಾಶ್ರಯದಲ್ಲಿ ಬಸವೇಶ್ವರ ವೈದ್ಯಕೀಯ ಸಂಶೋಧನಾ ಕೇಂದ್ರದ ಸಭಾಂಗಣದಲ್ಲಿ ವೈದ್ಯಕೀಯ ವಿದ್ಯಾರ್ಥಿಗಳಿಗೆ ಮಾದಕ ವಸ್ತುಗಳ ಸೇವನೆಯ ದುಷ್ಪರಿಣಾಮ ಹಾಗೂ ಎನ್.ಡಿ.ಪಿ.ಎಸ್ ಕಾಯ್ದೆ ಕುರಿತು ಜಾಗೃತಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ವೈದ್ಯಕೀಯ ಅಧೀಕ್ಷಕ ಡಾ.ರಾಜೇಶ್ ಮಾತನಾಡಿ, ವಿದ್ಯಾರ್ಥಿಗಳಿಗೆ ಓದು ಅಥವಾ ಇನ್ನಿತರೆ ಒತ್ತಡಕ್ಕಾಗಿ ದುಶ್ಚಟಗಳಿಗೆ ಮಾರುಹೋಗಬಾರದು ಎಂದು ಕಿವಿ ಮಾತು ಹೇಳಿದರು.

ಕಾರ್ಯಕ್ರಮದಲ್ಲಿ ಅಬಕಾರಿ ಅಧೀಕ್ಷಕ ಡಿ.ಎನ್.ಕಿರಣ್, ಅಬಕಾರಿ ನಿರೀಕ್ಷಕಿ ಎ.ವನಿತಾ ಸೇರಿದಂತೆ ಅಬಕಾರಿ ಪೇದೆಗಳಾದ ಕೆ.ರಮೇಶ್ ನಾಯ್ಕ್, ಬಸವರಾಜ, ಸುರೇಶ ಹೆಗಡಿ, ನಾಗರಾಜ ತೊಳಮಟ್ಟಿ, ಕಾಲೇಜು ವ್ಯವಸ್ಥಾಪಕ ಸತ್ಯನಾರಾಯಣ, ವೈದ್ಯಕೀಯ ಕಾಲೇಜಿನ ಸಾರ್ವಜನಿಕ ಸಂಪರ್ಕ ಅಧಿಕಾರಿ ಪಿ.ರೂಪ ಇದ್ದರು.

> ಮಾದಕ ವಸ್ತುಗಳ ಸೇವನೆಯಿಂದ ದೇಹದ ಮೇಲೆ ದುಷ್ಪರಿಣಾಮ ಉಂಟಾಗುತ್ತದೆ. ಮಾದಕ ವ್ಯಸನಿ ಸಮಾಜಕ್ಕೂ ಕಂಟಕನಾಗುತ್ತನೆ. ಮಾದಕ ವಸ್ತುಗಳ ಉತ್ಪಾದನೆ, ಶೇಖರಣೆ ಸಾಗಣಿಕೆ ಮಾರಾಟ ಮತ್ತು ಸೇವನೆಯ ಹಾಗೂ ಎನ್.ಡಿ.ಪಿ.ಎಸ್ ಕಾಯ್ದೆಯಡಿ ಶಿಕ್ಷಾರ್ಹ ಅಪರಾಧವಾಗಿದೆ. ಒಮ್ಮೆ ಕಾಯ್ದೆಯಡಿ ಬಂಧನವಾದರೆ ವಿದ್ಯಾರ್ಥಿ ಜೀವನ ಸಂಪೂರ್ಣವಾಗಿ ನಾಶವಾಗುತ್ತದೆ.
>
> – ಡಾ.ಆಶಾಲತಾ.ಕೆ
> ಅಬಕಾರಿ ಉಪ ಆಯುಕ್ತೆ

## ಬೆಳೆ ಹಾನಿ ಪರಿಹಾರಕ್ಕೆ ಒತ್ತಾಯ

• ಉದಯವಾಹಿನಿ, ತಡಸ


ಉದಯವಾಹಿನಿ ಚಿತ್ರ

ಸಮೀಪದ ದುಂಡಶಿ ಹೋಬಳಿಯಲ್ಲಿ ಅತಿವೃಷ್ಟಿಯಿಂದ ಹಾನಿಗೀಡಾದ ಬೆಳೆಗಳಿಗೆ ಪರಿಹಾರ ನೀಡಬೇಕು ಹಾಗೂ ಪ್ರಸಕ್ತ ಮುಂಗಾರು ಹಂಗಾಮಿನಲ್ಲಿ ಮಳೆಯಾಶ್ರಿತ ಗೋವಿನಜೋಳ ಬೆಳೆಗೆ ವಿಮೆ ತುಂಬಿದ ರೈತರಿಗೆ ಮಧ್ಯಂತರ ಪರಿಹಾರವಾಗಿ ಶೇ 25ರಷ್ಟು ಹಣ ನೀಡಬೇಕು ಎಂದು ಆಗ್ರಹಿಸಿ ರೈತರು ಪ್ರತಿಭಟನೆ ನಡೆಸಿದರು.

ಹಾನಗಲ್ ತಡಸ ರಾಜ್ಯ ಹೆದ್ದಾರಿಯಲ್ಲಿ ಕೆಲ ಕಾಲ ವಾಹನಗಳ ಸಂಚಾರ ತಡೆದ ನಂತರ ದುಂಡಶಿ ರೈತ ಸಂಪರ್ಕ ಕೇಂದ್ರದ ಎದುರು ಜಮಾಯಿಸಿ, ಸರ್ಕಾರದ ವಿರುದ್ಧ ಘೋಷಣೆ ಕೂಗಿದರು. ಈ ಸಂದರ್ಭದಲ್ಲಿ ಮಾತನಾಡಿದ ರೈತ ಮುಖಂಡ ಈಶ್ವರಗೌಡ ಪಾಟೀಲ, ಜೂನ್, ಜುಲೈ ಮತ್ತು ಆಗಸ್ಟ್ ತಿಂಗಳಲ್ಲಿ ವಾಡಿಕೆಗಿಂತ ಹೆಚ್ಚು ಮಳೆಯಾಗಿದ್ದು, ಜಮೀನುಗಳು ಜಲಾವೃತ್ತಗೊಂಡ ಪರಿಣಾಮ ಎಲ್ಲ ಬೆಳೆಗಳು ಹಾಳಾಗಿವೆ. ಕಂದಾಯ, ಕೃಷಿ ಮತ್ತು ತೋಟಗಾರಿಕೆ ಇಲಾಖೆಗಳ ಸಹಯೋಗದಲ್ಲಿ ಬೆಳೆ ಸಮೀಕ್ಷೆ ಮಾಡಿಸಿ, ಎಲ್ಲಾ ರೈತರಿಗೆ ಬೆಳೆ ಹಾನಿ ಪರಿಹಾರ ಒದಗಿಸಬೇಕು ಎಂದು ಆಗ್ರಹಿಸಿದರು.

ಸ್ಥಳಕ್ಕೆ ಆಗಮಿಸಿದ ಸಹಾಯಕ ಕೃಷಿ ನಿರ್ದೇಶಕ ಕೊಟ್ರೇಶ್ ಗೆಜ್ಜಿ ಮಾತನಾಡಿ, ದುಂಡಶಿ ಹೋಬಳಿಯಲ್ಲಿ ಬೆಳೆ ಹಾನಿಯಾದ ಬಗ್ಗೆ ಮೇಲಧಿಕಾರಿಗಳ ಗಮನಕ್ಕೆ ತರಲಾಗಿದೆ. ಪರಿಹಾರ ನೀಡುವ ಕುರಿತು ಚರ್ಚಿಸಿ, ಕ್ರಮ ಕೈಗೊಳ್ಳಲಾಗುವುದು ಎಂದು ಭರವಸೆ ನೀಡಿದರು.

**ಕ್ರಮ ವಹಿಸಲು 10 ದಿನ ಗಡುವು**

ಬೆಳೆ ಹಾನಿ ಪರಿಹಾರ ಹಾಗೂ ಮಧ್ಯಂತರ ವಿಮೆ ಹಣವನ್ನು 10 ದಿನದೊಳಗೆ ರೈತರಿಗೆ ನೀಡದಿದ್ದರೆ ಸೆಪ್ಟೆಂಬರ್ 1ರಂದು ದುಂಡಶಿ ಹೋಬಳಿಯ ನಾಡಕಚೇರಿ ರೈತ ಸಂಪರ್ಕ ಕೇಂದ್ರ, ಕೆವಿಜಿ ಬ್ಯಾಂಕ್ ಎದುರು ಹಾಗೂ ತಡಸ-ಹಾನಗಲ್ ರಾಜ್ಯ ಹೆದ್ದಾರಿ ತಡೆದು ಬೃಹತ್ ಪ್ರತಿಭಟನೆ ನಡೆಸಲಾಗುವುದು' ಎಂದು ರೈತರ ಮುಖಂಡ ವಿರೂಪಾಕ್ಷಗೌಡ ಪಾಟೀಲ ಎಚ್ಚರಿಸಿದರು.

## ಈರುಳ್ಳಿಗೆ ಮಜ್ಜಿಗೆ ರೋಗ: ಸಂಕಷ್ಟದಲ್ಲಿ ಬೆಳೆಗಾರರು

• ಉದಯವಾಹಿನಿ, ಕುಳಗೇರಿ ಕ್ರಾಸ್

ರಾಜ್ಯ ಹೆದ್ದಾರಿ 14 ಕ್ಕೆ ಹೊಂದಿಕೊಂಡಿರುವ ತಿಮ್ಮಾಪುರ ಎಸ್‌ಎನ್ ಗ್ರಾಮದ ಹಲವು ರೈತರು ಜಮೀನಿನಲ್ಲಿ ಬೆಳೆದಿರುವ ಈರುಳ್ಳಿ ಬೆಳೆಗೆ ಮಜ್ಜಿಗೆ ರೋಗ ಬಾಧೆ ಕಂಡು ಬಂದಿದ್ದು, ರೈತರು ಸಂಕಷ್ಟಕ್ಕೆ ಸಿಲುಕಿದ್ದಾರೆ. ನೀಲಗುಂದ ಗ್ರಾಮದ ಸೀಮೆಯಲ್ಲಿ ರೈತ ಚಿದಾನಂದ ವೀರಭದ್ರಪ್ಪ ಅಂಗಡಿ ಅವರ 5 ಎಕರೆ ಜಮೀನಿನಲ್ಲಿ ಈರುಳ್ಳಿ ಬಿತ್ತನೆ ಮಾಡಿ ಎರಡು ತಿಂಗಳ ನಂತರ ಮಜ್ಜಿಗೆ ರೋಗ ಕಂಡು ಬಂದಿದೆ. ಇವರ ಜಮೀನಿನ ಸುತ್ತ ಮುತ್ತ ಈರುಳ್ಳಿ ಬೆಳದಿರುವ ಶಿವಪ್ಪ ಬನಪ್ಪನವರ, ಬಸಪ್ಪ ಓಜುಗ, ಬಸಪ್ಪ ಬನಪ್ಪನವರ ಸೇರಿದಂತೆ ಬಹುತೇಕ ಎಲ್ಲರ ಬೆಳೆಗೂ ರೋಗ ಕಂಡು ಬಂದಿದೆ. ತಗ್ಗು ಪ್ರದೇಶದಲ್ಲಿ ಹೆಚ್ಚು ನೀರು ಒಂದೆಡೆ ನಿಂತಿದ್ದರಿಂದ ತಂಪು ಹೆಚ್ಚಾಗಿ ಈ ರೋಗ ಕಂಡು ಬಂದಿದೆ.

ಪ್ರತಿ ಬಾರಿ 2,600 ರಂತೆ ಮೂರು ಬಾರಿ ಖರ್ಚು ಮಾಡಿ ಔಷಧ ಸಿಂಪಡಣೆ ಮಾಡಿದ್ದೇನೆ. ಆದರೂ, ರೋಗ ಹತೋಟಿಗೆ ಬಂದಿಲ್ಲ. ಬೀಜ, ರಸಗೊಬ್ಬರ ಹಾಗೂ ಔಷಧ ಸಿಂಪಡಣೆ ಸೇರಿ 1.50 ಲಕ್ಷ ಖರ್ಚು ಮಾಡಿರುವೆ. ಆದರೆ, ಬೆಳೆ ಕೈಗೆ ಬರುವುದೋ ಎಲ್ಲವೋ ಎಂಬ ಚಿಂತೆ ಮೂಡಿದೆ ಎಂದು ರೈತ ಚಿದಾನಂದ ಅಳಲು ತೋಡಿಕೊಂಡರು. ತೋಟಗಾರಿಕೆ ಇಲಾಖೆ ಅಧಿಕಾರಿಗಳಿಂದ ಮಾಹಿತಿ ಪಡೆದು ರೋಗ ಹತೋಟಿಗೆ ಕ್ರಮ ಕೈಗೊಳ್ಳುವಂತೆ ರೈತರಿಗೆ ತಿಳಿಸಿದ್ದೇನೆ ಎಂದು ಕುಳಗೇರಿ ರೈತ ಸಂಪರ್ಕ ಕೇಂದ್ರದ ಕೃಷಿ ಅಧಿಕಾರಿ ಪರಶುರಾಮ ಗಣಿ ತಿಳಿಸಿದರು.

**ಬೆಳೆ ಪರಿಶೀಲಿಸಿ ಕ್ರಮ:** ಮಜ್ಜಿಗೆ ಕಂಡುಬಂದಿರುವ ರೈತರ ಜಮೀನಿಗೆ ಭೇಟಿ ನೀಡಿ ಮಾಹಿತಿ ಪಡೆಯಲಾಗುವುದು. ಔಷಧ ಸಿಂಪಡಣೆ ಬಗ್ಗೆ ಸೂಚಿಸಲಾಗುವುದು. ನಂತರವೂ ಈ ರೋಗ ನಿಯಂತ್ರಣಕ್ಕೆ ಬಾರದೇ ಹೋದರೆ ಧಾರವಾಡದ ಕೃಷಿ ವಿಶ್ವ ವಿದ್ಯಾಲಯದಿಂದ ಈರುಳ್ಳಿ ಬೆಳೆ ತಜ್ಞರನ್ನು ಕರೆಯಿಸಿ ಮಾಹಿತಿ ಕೊಡಿಸಲಾಗುತ್ತದೆ ಎಂದು ತೋಟಗಾರಿಕಾ ಇಲಾಖೆಯ ಅಧಿಕಾರಿ ಹನುಮಂತ ತುಳಸೀಗೇರಿ ತಿಳಿಸಿದರು.

# ರಟ್ಟಿಹಳ್ಳಿ ಪ.ಪಂ. ಅಧಿಕಾರದ ಚುಕ್ಕಾಣಿ: ಸಿಎಂ ಪ್ರವೇಶ

### ಅಧಿಕಾರದ ಗದ್ದುಗೆ ಹಿಡಿಯಲು ಕಾಂಗ್ರೆಸ್ ನಡೆಸಿದ್ದ ಪ್ರಯತ್ನ ಯಶಸ್ವಿ, ಪಕ್ಷೇತರ ಅಭ್ಯರ್ಥಿಯೊಬ್ಬರನ್ನು ಪಕ್ಷಕ್ಕೆ ಸೆಳೆಯಲು ಪಕ್ಷ ಸಫಲ

• ಉದಯವಾಹಿನಿ, ರಟ್ಟಿಹಳ್ಳಿ


ಉದಯವಾಹಿನಿ ಚಿತ್ರ

ಇಲ್ಲಿನ ಪಟ್ಟಣ ಪಂಚಾಯಿತಿ ಚುನಾವಣೆಯ ನಂತರ ಅಧಿಕಾರದ ಗದ್ದುಗೆ ಹಿಡಿಯಲು ಕಾಂಗ್ರೆಸ್ ನಡೆಸಿದ್ದ ಪ್ರಯತ್ನ ಯಶಸ್ವಿಯಾಗಿದೆ. ಅಧಿಕಾರದ ಚುಕ್ಕಾಣಿ ಹಿಡಿಯಲು ನಿರ್ಣಾಯಕ ಪಾತ್ರ ವಹಿಸಿದ್ದ ಪಕ್ಷೇತರ ಅಭ್ಯರ್ಥಿಯೊಬ್ಬರನ್ನು ಪಕ್ಷಕ್ಕೆ ಸೆಳೆಯಲು ಪಕ್ಷ ಸಫಲರಾಗಿದೆ. ಹಾವೇರಿ ಜಿಲ್ಲೆಯ ಆರೂ ವಿಧಾನಸಭಾ ಕ್ಷೇತ್ರಗಳಲ್ಲಿ ಕಾಂಗ್ರೆಸ್ ಪಕ್ಷದ ಶಾಸಕರಿದ್ದಾರೆ. ಹೀಗಾಗಿ, ರಟ್ಟಿಹಳ್ಳಿ ಪಟ್ಟಣ ಪಂಚಾಯಿತಿಯೂ ಕಾಂಗ್ರೆಸ್‌ಗೆ ಪ್ರತಿಷ್ಠೆಯ ಪ್ರಶ್ನೆಯಾಗಿತ್ತು.

ಚುನಾವಣೆಯ ಫಲಿತಾಂಶ ಹೊರಬೀಳುತ್ತಿದ್ದಂತೆ ಕಾಂಗ್ರೆಸ್ ಪಕ್ಷಕ್ಕೆ ಬೆಂಬಲ ನೀಡುಸ್ ಪಕ್ಷದ ಜಿಲ್ಲಾ ಮುಖಂಡರಿಂದ ಮಾಹಿತಿ ಪಡೆದಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರೇ ಮಧ್ಯಪ್ರವೇಶಿಸಿ, ಪಕ್ಷೇತರ ಅಭ್ಯರ್ಥಿಯನ್ನು ತಮ್ಮತ್ತ ಸೆಳೆದಿದ್ದಾರೆ. ಪಟ್ಟಣ ಪಂಚಾಯಿತಿಯ 15 ವಾರ್ಡ್‌ಗಳ ಪೈಕಿ 7 ವಾರ್ಡ್‌ಗಳಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಬೆಂಬಲ ನೀಡುಸ್ ಹಾಗೂ 6 ವಾರ್ಡ್‌ಗಳಲ್ಲಿ ಬಿಜೆಪಿ ಅಭ್ಯರ್ಥಿಗಳು ಜಯ ಗಳಿಸಿದ್ದರು. ಇಬ್ಬರು ಪಕ್ಷೇತರ ಅಭ್ಯರ್ಥಿಗಳು ಸಹ ಗೆಲುವು ಸಾಧಿಸಿ, ನಿರ್ಣಾಯಕ ಸ್ಥಾನದಲ್ಲಿದ್ದರು. ಅಧಿಕಾರದ ಚುಕ್ಕಾಣಿ ಹಿಡಿಯಲು ಕಾಂಗ್ರೆಸ್‌ಗೆ ಒಂದು ಸ್ಥಾನದ ಅಗತ್ಯವಿತ್ತು. ಹಿರೇಕೆರೂರು ಶಾಸಕ ಯು.ಬಿ. ಬಣಕಾರ ಅವರು ತಮ್ಮ ಕ್ಷೇತ್ರದಲ್ಲಿರುವ ರಟ್ಟಿಹಳ್ಳಿ ಪಟ್ಟಣ ಪಂಚಾಯಿತಿಯ ಅಧಿಕಾರ ಪಡೆಯಲು ಪ್ರಯತ್ನ ಆರಂಭಿಸಿದ್ದರು. ಅದರಂತೆ, 15ನೇ ವಾರ್ಡ್ ಪಕ್ಷೇತರ ಅಭ್ಯರ್ಥಿ ಲಲಿತಾ ಚನ್ನಗೌಡ್ರ ಅವರ ಬೆಂಬಲ ಪಡೆಯಲು ಮುಂದಾಗಿದ್ದರು. ಅಭ್ಯರ್ಥಿ ಲಲಿತಾ ಅವರ ಮಗ ಶಂಕರಗೌಡ ಜೊತೆ ಮಾತುಕತೆ ನಡೆಸಿದ್ದ ಶಾಸಕ, ಕಾಂಗ್ರೆಸ್ ಸರ್ಕಾರ ಅಧಿಕಾರದಲ್ಲಿದೆ. ಪಕ್ಷಕ್ಕೆ ಬೆಂಬಲ ನೀಡಿದರೆ, ರಟ್ಟಿಹಳ್ಳಿ ಅಭಿವೃದ್ಧಿಗೆ ಹೆಚ್ಚಿನ ಅನುದಾನ ಲಭ್ಯವಾಗಲಿದೆ ಎಂದಿದ್ದರು. ಇದಾದ ನಂತರ, ಸ್ವತಃ ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ ಸಹ ಶಂಕರಗೌಡ ಅವರನ್ನು ಭೇಟಿಯಾಗಲು ತೀರ್ಮಾನಿಸಿದ್ದರು.

**ಪಕ್ಷಕ್ಕೆ ಬೆಂಬಲ ನೀಡಿ**

ಶಂಕರಗೌಡ ಅವರನ್ನು ಕರೆದುಕೊಂಡು ಬೆಂಗಳೂರಿಗೆ ಹೋಗಿದ್ದ ಶಾಸಕ ಬಣಕಾರ ಹಾಗೂ ಕಾಂಗ್ರೆಸ್ ಮುಖಂಡರು, ಮುಖ್ಯಮಂತ್ರಿ ಅವರನ್ನು ಭೇಟಿ ಮಾಡಿಸಿದರು. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಶಂಕರಗೌಡ ಅವರನ್ನು ಅಭಿನಂದಿಸಿ, ಪಕ್ಷಕ್ಕೆ ಬೆಂಬಲ ನೀಡುವಂತೆ ಕೋರಿದರು. ಡಿಸಿಎಂ ಡಿ.ಕೆ. ಶಿವಕುಮಾರ್ ಅವರೂ ಶಂಕರಗೌಡ ಅವರನ್ನು ಮಾತನಾಡಿಸಿ, ಬೆಂಬಲ ಯಾಚಿಸಿದ್ದರು. ಇದಾದ ಬಳಿಕ, ಕಾಂಗ್ರೆಸ್‌ಗೆ ಬೆಂಬಲ ನೀಡುವುದಾಗಿ ಶಂಕರಗೌಡ ಅವರು ಭರವಸೆ ನೀಡಿದ್ದಾಗಿ ಗೊತ್ತಾಗಿದೆ. ಮುಖ್ಯಮಂತ್ರಿ ಹಾಗೂ ಉಪ ಮುಖ್ಯಮಂತ್ರಿಯವರು ಖುದ್ದಾಗಿ ಪಕ್ಷೇತರ ಅಭ್ಯರ್ಥಿಯನ್ನು ಭೇಟಿಯಾಗಿ ಮಾತುಕತೆ ನಡೆಸಿದ್ದರಿಂದ ಪಕ್ಷೇತರ ಅಭ್ಯರ್ಥಿ ಬೆಂಬಲ ಸೂಚಿಸಿದ್ದಾರೆ. ಇಬ್ಬರೂ ಕಾಂಗ್ರೆಸ್ ಬಾವುಟ ಕೊಟ್ಟು ಪಕ್ಷೇತರ ಅಭ್ಯರ್ಥಿಯನ್ನು ಸ್ವಾಗತಿಸಿದ್ದಾರೆ.

> ಕಾಂಗ್ರೆಸ್ ಪಕ್ಷವು ಅಧಿಕಾರದಲ್ಲಿದ್ದು ಪ.ಪಂ ಅಧಿಕಾರ ಪಕ್ಕಕ್ಕೆ ಸಿಕ್ಕರೆ ಮತ್ತಷ್ಟು ಅನುಕೂಲವಾಗುತ್ತದೆ. ರಟ್ಟಿಹಳ್ಳಿಯೂ ಮಾದರಿಯಾಗಿ ರೂಪುಗೊಳ್ಳಲಿದೆ.
>
> -ಸಂಜೀವಕುಮಾರ ನೀರಲಗಿ,
> ಕಾಂಗ್ರೆಸ್ ಜಿಲ್ಲಾ ಘಟಕದ ಅಧ್ಯಕ್ಷ

**ಅಧಿಕಾರ-ಹಣದ ಬಲ**

ರಟ್ಟಿಹಳ್ಳಿ ಪಟ್ಟಣ ಪಂಚಾಯಿತಿಯಲ್ಲಿ ಬಹುಪಾಲು ಜನರು ಬಿಜೆಪಿಗೆ ಆಶೀರ್ವಾದ ಮಾಡಿದ್ದಾರೆ. ಆದರೆ ಇಂದಿನ ಕಾಂಗ್ರೆಸ್ ಸರ್ಕಾರ ತನ್ನ ಅಧಿಕಾರ-ಹಣ ಬಲದಿಂದ ಪಕ್ಷೇತರ ಅಭ್ಯರ್ಥಿಯನ್ನು ತನ್ನತ್ತ ಸೆಳೆದಿದೆ ಎಂದು ಬಿಜೆಪಿ ಮುಖಂಡ ಬಿ.ಸಿ. ಪಾಟೀಲ ಆರೋಪಿಸಿದರು. ಇಬ್ಬರೂ ಪಕ್ಷೇತರ ಅಭ್ಯರ್ಥಿಗಳು ನಮ್ಮ ಸಂಪರ್ಕದಲ್ಲಿದ್ದರು. ಆದರೆ ಹೊಸ ಬೆಳವಣಿಗೆ ನಡೆದಿದೆ. ಚುನಾವಣೆಯಲ್ಲಿಯೂ ಕಾಂಗ್ರೆಸ್ ಪಕ್ಷದ ಸಚಿವರು ಶಾಸಕರು ಹಾಗೂ ರಾಜ್ಯಮಟ್ಟದ ಮುಖಂಡರು ಪ್ರಚಾರ ಮಾಡಿದ್ದರು. ಈಗ ಅಧಿಕಾರ ಹಿಡಿಯುವ ಉದ್ದೇಶದಿಂದ ಪಕ್ಷೇತರ ಅಭ್ಯರ್ಥಿಗೆ ಹಣ-ಅಧಿಕಾರದ ಆಮಿಷವೊಡ್ಡಿರ ಬಹುದು ಎಂದು ಹೇಳಿದರು.

ಭವಿಷ್ಯದಲ್ಲಿ ಒಳ್ಳೆಯದಾಗುವುದಾಗಿಯೂ ಭರವಸೆ ಕೊಟ್ಟಿದ್ದಾರೆ ಎಂದು ಕಾಂಗ್ರೆಸ್ ಜಿಲ್ಲಾ ಘಟಕದ ಅಧ್ಯಕ್ಷ ಸಂಜೀವಕುಮಾರ ನೀರಲಗಿ ತಿಳಿಸಿದರು.

## ಮಿನಿ ನ್ಯೂಸ್

### ಬಿದಿ ನಾಯಿಗಳು ಹವಾಳಿ ತಡೆಗಟ್ಟಲು ಸಾರ್ವಜನಿಕರು ಒತ್ತಾಯ

• ಉದಯವಾಹಿನಿ, ಚಿಂಚೋಳಿ

ಪಟ್ಟಣದ ಪುರಸಭೆ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಬಡಾವಣೆಗಳಲ್ಲಿ ಬಿದಿ ನಾಯಿಗಳ ಹಾವಳಿ ಹೆಚ್ಚಾಗಿದ್ದು ಜನರು ಭಯಭೀತರಾಗಿದ್ದಾರೆ ಪುರಸಭೆ ಅಧಿಕಾರಿಗಳು ಎಚ್ಚೇತ್ತುಕೊಂಡು ಬಿದಿನಾಯಿಗಳಿಗೆ ಕಡಿವಾಣ ಹಾಕಬೇಕು ಎಂದು ಅಹೇಮದ್ ಬಾಗಬಾನ್ ಒತ್ತಾಯ ಮಾಡಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪಟ್ಟಣದ್ಯಂತ ಬಿದಿ ನಾಯಿಗಳ ದಂಡು ದಂಡೆ ತಿರುಗಾಡುತ್ತಿದ್ದು ಇದರಿಂದ ಹಿರಿಯರು ಯುವಕರು ಚಿಕ್ಕ ಚಿಕ್ಕ ಮಕ್ಕಳು ಓಡಾಡಲು ಭಯಪಡುತ್ತಿದ್ದಾರೆ.

ಪಟ್ಟಣದಲ್ಲಿ ಅನೇಕ ಮಕ್ಕಳಿಗೆ ಹಿರಿಯರಿಗೆ ಬಿದಿ ನಾಯಿಗಳು ಕಚ್ಚಿವೆ ಉದಾಹರಣೆಗಳು ಸಹಯಿವೆ ಆದರಿಂದ ಪುರಸಭೆ ಅಧಿಕಾರಿಗಳಿಗೆ ಅನೇಕ ಬಾರಿ ಮೌಖಿಕವಾಗಿ ಹೇಳಿದರೂ ಪ್ರಯೋಜನವಾಗಿಲ್ಲ ಈಗಾಲಾದರೂ ಪುರಸಭೆ ಅಧಿಕಾರಿಗಳು ಜನಪ್ರತಿನಿಧಿಗಳು ಎಚ್ಚೇತ್ತುಕೊಂಡು ಬಿದಿ ನಾಯಿಗಳನ್ನು ಕಡಿವಾಣ ಹಾಕಿ ಅಥವಾ ಬಿದಿನಾಯಿಗಳನ್ನು ಹಿಡಿದು ಬೇರೆಡೆ ಸ್ಥಳಾಂತರ ಮಾಡಬೇಕು. ಇಲ್ಲಾದಿದ್ದರೆ ಬರುವ ದಿನಗಳಲ್ಲಿ ಬಿದಿನಾಯಿಗಳು ಯಾರಿಗಾದರೂ ಕಚ್ಚಿ ಹಾನಿಯಾದರೆ ನೇರವಾಗಿ ಪುರಸಭೆಯವರೆ ನೇರಹೊಣೆ ಆಗುತ್ತಾರೆ ಎಂದರು.

### ಮನೆಗಳ್ಳನ ಬಂಧನ: ಚಿನ್ನಾಭರಣ ವಶ

• ಉದಯವಾಹಿನಿ, ಚನ್ನಮ್ಮನ ಕಿತ್ತೂರು

ಮನೆಬಾಗಿಲು ಮುರಿದು ಚಿನ್ನಾಭರಣ ದೋಚುತ್ತಿದ್ದ ಆರೋಪದ ಮೇಲೆ ಕುಖ್ಯಾತ ಕಳ್ಳನನ್ನು ಬಂಧಿಸಿರುವ ಚನ್ನಮ್ಮನ ಕಿತ್ತೂರು ಪೊಲೀಸರು ಆತನಿಂದ ಐದು ಕಡೆಗಳಲ್ಲಿ ಕಳ್ಳತನ ಮಾಡಿದ್ದ 20.30 ಲಕ್ಷ ಕಿಮ್ಮತ್ತಿನ 203 ಗ್ರಾಂ ಚಿನ್ನದ ಆಭರಣಗಳನ್ನು ವಶಪಡಿಸಿಕೊಂಡಿದ್ದಾರೆ. ಬೆಳಗಾವಿ ರುಕ್ಮಿಣಿ ನಗರದ ನಿತೇಶ ಉರ್ಫ್ ದೀಪು ಜಗನ್ನಾಥರಾವ್ ಥಾಪಳೆ (42) ಬಂಧಿತ ಆರೋಪಿ. ಈತನನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ. ಕಳೆದ ವರ್ಷ ಜುಲೈ ತಿಂಗಳಲ್ಲಿ ಇಲ್ಲಿನ ವಿದ್ಯಾಗಿರಿಯಲ್ಲಿರುವ ಕೀಲಿ ಹಾಕಿದ್ದ ಪ್ರವೀಣ ಇಟಗಿ ಅವರ ಹಿತ್ತಲಿನ ಬಾಗಿಲು ಮುರಿದು ನಗದು ಸೇರಿ 11.60 ಲಕ್ಷ ಮೌಲ್ಯದ ಚಿನ್ನ ಮತ್ತು ಬೆಳ್ಳಿ ಆಭರಣ ದೋಚಿಕೊಂಡು ಪರಾರಿಯಾಗಿದ್ದನು.

ಈ ಪ್ರಕರಣದ ಬೆನ್ನು ಹತ್ತಿದ ಕಿತ್ತೂರು ಪೊಲೀಸರು, ಇದನ್ನು ಸೇರಿ ಕಿತ್ತೂರು ಠಾಣಾ ವ್ಯಾಪ್ತಿಯಲ್ಲಿಯ ಮೂರು ಪ್ರತ್ಯೇಕ ಪ್ರಕರಣ, ಬೈಲಹೊಂಗಲ ಮತ್ತು ಹುಕ್ಕೇರಿ ಪೊಲೀಸ್ ಠಾಣಾ ವ್ಯಾಪ್ತಿಯ ತಲಾ ಒಂದು ಪ್ರಕರಣ ಬೇಧಿಸುವಲ್ಲಿ ಯಶಸ್ವಿಯಾಗಿದ್ದಾರೆ ಎಂದು ಡಿವೈಎಸ್ ಪಿ ವೀರಯ್ಯ ಹಿರೇಮಠ ಪತ್ರಕರ್ತರಿಗೆ ತಿಳಿಸಿದರು. ಬಂಧಿತನ ಮೇಲೆ ಬೆಳಗಾವಿ ನಗರ, ಗದಗ, ಮಹಾರಾಷ್ಟ್ರ ಮತ್ತು ತೆಲಂಗಾಣ ರಾಜ್ಯದಲ್ಲಿಯೂ ಕಳ್ಳತನ ಆರೋಪದ ಪ್ರಕರಣಗಳಿವೆ' ಎಂದು ಅವರು ಮಾಹಿತಿ ನೀಡಿದರು.

### ಒಳ ಮೀಸಲಾತಿಗೆ ವಿರೋಧ; ಪ್ರತಿಭಟನೆ

• ಉದಯವಾಹಿನಿ, ಗಜೇಂದ್ರಗಡ

ಸರ್ಕಾರ ಪರಿಶಿಷ್ಟ ಜಾತಿಗಳಲ್ಲಿ ಒಳ ಮೀಸಲಾತಿ ಜಾರಿಗೊಳಿಸಿರುವುದನ್ನು ವಿರೋಧಿಸಿ ಪಟ್ಟಣದ ಕಾಲಕಾಲೇಶ್ವರ ವೃತ್ತದಲ್ಲಿ ತಾಲ್ಲೂಕಿನ ಲಂಬಾಣಿ, ಭೋವಿ, ಭಜಂತ್ರಿ, ಕೊರಮ ಸೇರಿದಂತೆ 63 ಸಮಾಜಗಳ ಜನರು ಪ್ರತಿಭಟನೆ ನಡೆಸಿದರು. ಪರಿಶಿಷ್ಟ ಜಾತಿಗಳಿಗೆ ಒಳ ಮೀಸಲಾತಿ ಕಲ್ಪಿಸುವ ಕುರಿತಾದ ವರದಿ ಅವೈಜ್ಞಾನಿಕವಾಗಿದ್ದು, ದಲಿತ ಸಮುದಾಯದಲ್ಲಿ ಒಡಕು ಮೂಡಿಸಲಿದೆ. ಇದನ್ನು ಒಪ್ಪಲು ಸಾಧ್ಯವಿಲ್ಲ.

ನಿರಂತರ ಅನ್ಯಾಯಕ್ಕೆ ಒಳಗಾಗಿ, ಅಸ್ಪೃಶ್ಯರಾಗಿರುವ ನಮ್ಮ ಸಮುದಾಯಗಳಿಗೆ ಒಳ ಮೀಸಲಾತಿ ಜಾರಿಗೊಳಿಸುವ ಮೂಲಕ ಮತ್ತೊಮ್ಮೆ ಅನ್ಯಾಯ ಮಾಡಲಾಗುತ್ತಿದೆ. ರಾಜ್ಯ ಸರ್ಕಾರ ಸುಪ್ರೀಂ ಕೋರ್ಟ್ ಆದೇಶವನ್ನು ಉಲ್ಲಂಘನೆ ಮಾಡಿ ಒಳ ಮೀಸಲಾತಿ ಜಾರಿ ಮಾಡುತ್ತಿದೆ. ಇದರ ಹಿಂದೆ ಅಡಗಿರುವ ಹುನ್ನಾರ ಅರಿತು ಮುಂದಿನ ದಿನಗಳಲ್ಲಿ ಕಾಂಗ್ರೆಸ್ ಹಠಾವೋ ಮೀಸಲಾತಿ ಬಚಾವೋ ಅಭಿಯಾನ ಆರಂಭಿಸುತ್ತೇವೆ ಎಂದು ಸರ್ಕಾರದ ವಿರುದ್ಧ ಹಲವು ನಾಯಕರು ಹರಿಹಾಯ್ದರು. ತಹಶೀಲ್ದಾರ್ ಕಿರಣಕುಮಾರ ಕುಲಕರ್ಣಿ ಅವರಿಗೆ ಮನವಿ ಸಲ್ಲಿಸಿದರು.

### ಬೇಡಿಕೆಗೆ ಸ್ಪಂದಿಸದಿದ್ದರೆ ಹೋರಾಟ ತೀವ್ರ: ರವಿಕಾಂತ ಅಂಗಡಿ ಎಚ್ಚರಿಕೆ


ಉದಯವಾಹಿನಿ ಚಿತ್ರ

• ಉದಯವಾಹಿನಿ, ಗದಗ

ಇದು ಮಾಡು ಇಲ್ಲವೇ ಮಡಿ ಹೋರಾಟ ಗದಗ ಜಿಲ್ಲಾಡಳಿತ, ಜಿಲ್ಲಾ ಉಸ್ತುವಾರಿ ಸಚಿವರು ಈ ಹಿಂದೆ ಮಾತು ಕೊಟ್ಟಂತೆ ನಮ್ಮ ಬೇಡಿಕೆಗಳನ್ನು ಈಡೇರಿಸಲು ತಕ್ಷಣವೇ ಕ್ರಮವಹಿಸಬೇಕು. ಪ್ರತಿಭಟನಾ ಸ್ಥಳಕ್ಕೆ ಜಿಲ್ಲಾ ಉಸ್ತುವಾರಿ ಸಚಿವ ಎಚ್.ಕೆ.ಪಾಟೀಲ ಅವರು ಬರುವವರೆಗೂ ಅಹೋರಾತ್ರಿ ಧರಣಿ ಮುಂದುವರಿಯಲಿದೆ' ಎಂದು ಉತ್ತರ ಕರ್ನಾಟಕ ಮಹಾಸಭಾದ ರಾಜ್ಯ ಘಟಕದ ಅಧ್ಯಕ್ಷ ರವಿಕಾಂತ ಅಂಗಡಿ ಎಚ್ಚರಿಸಿದರು. ಉತ್ತರ ಕರ್ನಾಟಕ ಮಹಾಸಭಾ ವತಿಯಿಂದ ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ಆಗ್ರಹಿಸಿ ಶಿರಹಟ್ಟಿ ಪಟ್ಟಣದ ಫಕೀರೇಶ್ವರ ಮಠದಿಂದ ಪ್ರತಿಭಟನಾ ರ್‍ಯಾಲಿಯೊಂದಿಗೆ 30 ಕಿ.ಮೀ. ಪಾದಯಾತ್ರೆ ನಡೆಸಿ, ಜಿಲ್ಲಾಡಳಿತ ಕಚೇರಿ ಎದುರು ನಡೆಸುತ್ತಿರುವ ಅಹೋರಾತ್ರಿ ಧರಣಿ ಮೂರು ದಿನಗಳನ್ನು ಪೂರ್ಣಗೊಳಿಸಿದ್ದು, ಈ ವೇಳೆ ಅವರು ಮಾತನಾಡಿದರು.

ನಮ್ಮ ಹೋರಾಟ ತೀವ್ರಗೊಳ್ಳಲಿದೆ. ಒಂದು ವೇಳೆ ಈ ಹೋರಾಟದಲ್ಲಿ ಯಾವುದೇ ಅಹಿತಕರ ಘಟನೆ ನಡೆದಲ್ಲಿ ಜಿಲ್ಲಾಡಳಿತ ಮತ್ತು ಉಸ್ತುವಾರಿ ಸಚಿವರೇ ನೇರ ಹೊಣೆಯಾಗುತ್ತಾರೆ ಎಂದು ಎಚ್ಚರಿಸಿದರು. ರೈತರು ತಲತಲಾಂತರದಿಂದ ತಮ್ಮ ಉಪಜೀವನಕ್ಕಾಗಿ ಅರಣ್ಯ ಜಮೀನುಗಳನ್ನು ಸಾಗುವಳಿ ಮಾಡುತ್ತಾ ಬಂದಿದ್ದು, ಕಪ್ಪತ್ತಗುಡ್ಡ ರಕ್ಷಣೆ ಮಾಡಿದ ಬಗರ್‌ಹುಕುಂ ಸಾಗುವಳಿದಾರರಿಗೆ, ಅರಣ್ಯ ಅವಲಂಬಿತರಿಗೆ ಸರ್ಕಾರ ಹಕ್ಕುಪತ್ರ ನೀಡದೇ ವಿನಾಕಾರಣ ಕಿರುಕುಳ, ದೌರ್ಜನ್ಯ ನೀಡುತ್ತಿದೆ ಎಂದು ಕಿಡಿಕಾರಿದರು.

ನಾಗಾವಿ ಗ್ರಾಮದಲ್ಲಿರುವ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ವಿಶ್ವವಿದ್ಯಾಲಯದ ನಿರ್ಮಾಣಕ್ಕೆ ರೈತರಿಂದ ಭೂಮಿ ಪಡೆದುಕೊಂಡು ಅವರಿಗೆ ಪರಿಹಾರ ನೀಡದೆ; ಒಕ್ಕಲೆಬ್ಬಿಸಿರುವುದು ಖಂಡನೀಯ ಎಂದು ಆರೋಪ ಮಾಡಿದರು. ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ಈ ಎಲ್ಲಾ ವಿಷಯಗಳು ಗೊತ್ತಿದ್ದರೂ ಗೊತ್ತಿಲ್ಲದಂತೆ ಜಾಣಕುರುಡು ಪ್ರದರ್ಶಿಸುತ್ತಿದ್ದಾರೆ. ಸಚಿವರು ಕೊಟ್ಟ ಮಾತಿನಂತೆ ನಡೆದುಕೊಂಡು ರೈತರ ಹಿತ ಕಾಪಾಡಬೇಕಾಗಿದೆ. ಇಲ್ಲವಾದಲ್ಲಿ ಈಗ ಶಾಂತಿಯುತವಾಗಿ ನಡೆಸುತ್ತಿರುವ ಹೋರಾಟದ ರೂಪುರೇಷೆಯಲ್ಲಿ ಬದಲಾವಣೆಗಳಾಗುತ್ತವೆ ಎಂದು ಎಚ್ಚರಿಸಿದರು.

ಇದೊಂದು ಬಾಕಿ ಇತ್ತು, ಶ್ವೇತಭವನದ ವೆಸ್ಟ್ ವಿಂಗ್‌ನಲ್ಲಿ ದಿ ಟ್ಯಾರಿಫ್ ಮೆನ್ ಭಾವಚಿತ್ರ; ಯಾರು ಈ ಪಂಚ ಪಾಂಡವರು?

# ಸುಂಕ ನೀತಿ ಜಾರಿಗೆ ತಂದ ಮಾಜಿ ಅಧ್ಯಕ್ಷರುಗಳ ಜತೆ ಟ್ರಂಪ್




**ಶೇಕಡಾ 15 ಕ್ಕೆ ಸೀಮಿತ**

**ವಾಷಿಂಗ್ಟನ್:** ಅಮೆರಿಕ ಫಸ್ಟ್, ಮೇಕ್ ಅಮೆರಿಕ ಗ್ರೇಟ್ ಅಗೈನ್ ಮುಂತಾದ ಬಣ್ಣಬಣ್ಣದ ಮಾತುಗಳನ್ನಾಡಿ ಅಮೆರಿಕದ ಅಧ್ಯಕ್ಷ ಗಾದಿಗೆ ಏರಿರುವ ಡೊನಾಲ್ಡ್ ಟ್ರಂಪ್, ಶ್ವೇತಭವನದ ಗೋಡೆಗಳ ಮೇಲೆ ತಮ್ಮ ಬಣ್ಣಬಣ್ಣದ ಭಾವಚಿತ್ರಗಳನ್ನು ಹಾಕಿಸುವದರಲ್ಲಿ ನಿರತರಾಗಿದ್ದಾರೆ. ಇತ್ತೀಚಿಗಷ್ಟೇ ಓವಲ್ ಕಚೇರಿಯಲ್ಲಿ ಡೊನಾಲ್ಡ್ ಟ್ರಂಪ್ ಹತ್ಯಾ ಯತ್ನದ ಕ್ಷಣಗಳ ಪ್ರತಿಮೆ ಪ್ರತಿಷ್ಠಾಪಿಸಲಾಗಿತ್ತು. ಇದೀಗ ಶ್ವೇತಭವನದ ವೆಸ್ಟ್ ವಿಂಗ್‌ನಲ್ಲಿ ತಾರೀಫ್ ಮೆನ್ ಭಾವಚಿತ್ರವನ್ನು ಅಳವಡಿಸಲಾಗಿದೆ.

ಈ ಮೂಲಕ ಟ್ರಂಪ್ ಇಡೀ ಶ್ವೇತಭವನ್ನು ನಿಧಾನವಾಗಿ ಆವರಿಸಿಕೊಳ್ಳುತ್ತಿದ್ದಾರೆ. ಹೌದು, ಶ್ವೇತಭವನವು ತನ್ನ ಸಂಗ್ರಹಕ್ಕೆ ಹೊಸ ಕಲಾಕೃತಿಯನ್ನು ಸೇರಿಸಿದೆ. ಇದು ಡೊನಾಲ್ಡ್ ಟ್ರಂಪ್ ಅವರ ಜೊತೆಗೆ ನಾಲ್ವರು ಮಾಜಿ ಅಧ್ಯಕ್ಷರ ಭಾವಚಿತ್ರವನ್ನು ಒಳಗೊಂಡಿದೆ. ಈ ಎಲ್ಲಾ ಮಾಜಿ ಅಧ್ಯಕ್ಷರು ತಮ್ಮ ಕಾಲಘಟ್ಟದಲ್ಲಿ ಅಮೆರಿಕದಲ್ಲಿ ನೂತನ ಸುಂಕ ನೀತಿಯನ್ನು ಜಾರಿಗೆ ತಂದವರಾಗಿದ್ದಾರೆ. ದಿ ತಾರೀಫ್ ಮೆನ್ ಎಂಬ ಶೀರ್ಷಿಕೆಯ ಈ ಭಾವಚಿತ್ರವನ್ನು, ಗುರುವಾರ ಶ್ವೇತಭವನದ ಉನ್ನತ ಸಿಬ್ಬಂದಿ ಹ್ಯಾರಿಸನ್ ಫೀಲ್ಡ್ಸ್ ಅನಾವರಣಗೊಳಿಸಿದ್ದಾರೆ.

ಈ ಕುರಿತು ತಮ್ಮ ಅಧಿಕೃತ ಎಕ್ಸ್ ಅಕೌಂಟ್‌ನಲ್ಲಿ ಪೋಸ್ಟ್ ಮಾಡಿರುವ ಅವರು, ವೆಸ್ಟ್ ವಿಂಗ್‌ಗೆ ಹೊಸ ಸೇರ್ಪಡೆ ಎಂದು ಈ ವರ್ಣಚಿತ್ರವನ್ನು ಬಣ್ಣಿಸಿದ್ದಾರೆ. ಚಿನ್ನದ ಚೌಕಟ್ಟಿನ ಈ ಕಲಾಕೃತಿಯಲ್ಲಿ ಅಮೆರಿಕದ ಪ್ರಸ್ತುತ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮತ್ತು ಮಾಜಿ ಅಧ್ಯಕ್ಷರುಗಳಾದ ವಿಲಿಯಂ ಮೆಕಿನ್ಲೆ, ಅಬ್ರಹಾಂ ಲಿಂಕನ್, ಥಾಮಸ್ ಜೆಫರ್ಸನ್ ಮತ್ತು ಹೆನ್ರಿ ಕ್ಲೇ ಅವರ ಭಾವಚಿತ್ರವಿದೆ. ಈ ಗುಂಪು ಟ್ರಂಪ್ ಅವರನ್ನು ರಕ್ಷಣಾತ್ಮಕ ಆರ್ಥಿಕ ನೀತಿಗಳಿಗೆ, ವಿಶೇಷವಾಗಿ ಬೇರೆ ಬೇರೆ ಕಾಲಘಟ್ಟದಲ್ಲಿ ಅಮೆರಿಕದಲ್ಲಿ ಸುಂಕ ನೀತಿ ಜಾರಿಗೊಳಿಸಿದ ನಾಯಕರ ಸಾಲಿನಲ್ಲಿ ಇರಿಸುವ ಉದ್ದೇಶವನ್ನು ಹೊಂದಿದೆ. 19ನೇ ಶತಮಾನದ ರಾಜಕಾರಣಿ ಹೆನ್ರಿ ಕ್ಲೇ ಅವರು ತಮ್ಮ ಅಮೆರಿಕನ್ ವ್ಯವಸ್ಥೆಯ ಭಾಗವಾಗಿ, ರಕ್ಷಣಾತ್ಮಕ ಸುಂಕಗಳನ್ನು ಬೆಂಬಲಿಸಿ 1824ರಲ್ಲಿ ವ್ಯಾಪಕವಾಗಿ ಪ್ರಶಂಸಿಸಲ್ಪಟ್ಟ ಭಾಷಣ ಮಾಡಿದ್ದರು. ಹೆಚ್ಚಿನ ಆಮದು ಸುಂಕಗಳು ದೇಶೀಯ ಉದ್ಯಮವನ್ನು ಉತ್ತೇಜಿಸುತ್ತವೆ ಎಂದು ಹೆನ್ರಿ ಕ್ಲೇ ಪ್ರತಿಪಾದಿಸಿದ್ದರು.

ಇದಕ್ಕೆ ವ್ಯತಿರಿಕ್ತವಾಗಿ ಮತ್ತೋರ್ವ ಮಾಜಿ ಅಧ್ಯಕ್ಷರಾದ ಥಾಮಸ್ ಜೆಫರ್ಸನ್, ಯುವ ರಾಷ್ಟ್ರವು ಆರ್ಥಿಕವಾಗಿ ಬೆಳೆಯಲು ಕಡಿಮೆ ಸುಂಕ ನೀತಿಯನ್ನು ಪ್ರತಿಪಾದಿಸಿದ್ದರು. ಜೆಫರ್ಸನ್ ಹೆಚ್ಚುವರಿ ಸುಂಕ ನೀತಿಯ ಕಟು ಟೀಕಾಕಾರರಾಗಿದ್ದರು. ಡೊನಾಲ್ಡ್ ಟ್ರಂಪ್ ತಮ್ಮ ವ್ಯಾಪಾರ ನೀತಿಯ ಮೂಲದಲ್ಲಿ ಸುಂಕಗಳನ್ನು ಇಟ್ಟುಕೊಂಡಿದ್ದು, ಪ್ರಪಂಚದಾದ್ಯಂತದ ದೇಶಗಳ ಮೇಲೆ ಪರಿಣಾಮ ಬೀರುತ್ತದೆ. ಯುರೋಪಿಯನ್ ಒಕ್ಕೂಟದೊಂದಿಗಿನ ಹೊಸ ಒಪ್ಪಂದವು ಯುರೋಪ್ ತನ್ನದೇ ಆದ ವ್ಯಾಪಾರ ಅಡೆತಡೆಗಳನ್ನು ಕಡಿಮೆ ಮಾಡುವವರೆಗೆ ಕಾರುಗಳ ಮೇಲೆ ಶೇಕಡಾ 25 ರಷ್ಟು, ಅರೆವಾಹಕಗಳು, ಔಷಧಿಗಳಂತಹ ಸರಕುಗಳ ಮೇಲೆ ಶೇಕಡಾ 15 ರಷ್ಟು ಸುಂಕಗಳನ್ನು ಉಳಿಸಿಕೊಳ್ಳಲು ಅಮೆರಿಕಕ್ಕೆ ಅವಕಾಶ ನೀಡುತ್ತದೆ. ಚೀನಾ ತನ್ನದೇ ಆದ ಸುಂಕಗಳು, ಅಪರೂಪದ ಭೂಮಿಯ ರಫ್ತಿನ ಮೇಲಿನ ನಿರ್ಬಂಧಗಳೊಂದಿಗೆ ಪ್ರತೀಕಾರ ತೀರಿಸಿಕೊಂಡಿದೆ. ಭಾರತವು ಕೆಲವು ಕಠಿಣ ಕ್ರಮಗಳನ್ನು ಎದುರಿಸುತ್ತಿದೆ, ಯುಎಸ್ ಸುಂಕಗಳನ್ನು ಶೇಕಡಾ 50 ರಷ್ಟು ಹೆಚ್ಚಿಸಲಾಗಿದೆ, ಇದನ್ನು ವಾಷಿಂಗ್ಟನ್ ಭಾರತದ ರಷ್ಯಾದ ತೈಲ ಖರೀದಿಗೆ ಸಂಬಂಧಿಸಿದೆ.

ಐರ್ಲೆಂಡ್ ಯುಎಸ್-ಯುರೋಪಿಯನ್ ವ್ಯಾಪಾರ ಒಪ್ಪಂದದಲ್ಲಿ ಪರಿಹಾರವನ್ನು ಗಳಿಸಿತು, ಅದರ ಔಷಧ ರಫ್ತಿನ ಮೇಲಿನ ಸುಂಕಗಳನ್ನು ಶೇಕಡಾ 15 ಕ್ಕೆ ಸೀಮಿತಗೊಳಿಸಲಾಗಿದೆ, ಇದನ್ನು ಅಲ್ಲಿನ ನಾಯಕರು ರಫ್ತುದಾರರಿಗೆ ದೊಡ್ಡ ಗೆಲುವು ಎಂದು ಕರೆದಿದ್ದಾರೆ. ಕೆನಡಾ ಪ್ರತಿಕ್ರಮಗಳನ್ನು ಯೋಜಿಸುತ್ತಿದೆ, ಆದರೆ ಜಪಾನ್ ಮತ್ತು ಆಸ್ಟ್ರೇಲಿಯಾ ವಿರೋಧ ವ್ಯಕ್ತಪಡಿಸಿವೆ ಆದರೆ ಪ್ರತೀಕಾರ ತೀರಿಸುವ ಬದಲು ಮಾತುಕತೆಗಳ ಮೇಲೆ ಕೇಂದ್ರೀಕರಿಸುತ್ತಿವೆ.

### ದೇಶದ ವಾಣಿಜ್ಯ ಹಿತಾಸಕ್ತಿಗೆ ಪೂರಕ

**ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಸುಂಕ ನೀತಿಗೆ, ತೀವ್ರವಾದ ಬಾಹ್ಯ ಮತ್ತು ಆಂತರಿಕ ವಿರೋಧ ಕೇಳಿಬರುತ್ತಿದೆ. ಆದರೆ ತಮ್ಮ ನಿಲುವನ್ನು ಸಮರ್ಥಿಸಿಕೊಳ್ಳುತ್ತಿರುವ ಟ್ರಂಪ್, ಸುಂಕ ನೀತಿ ದೇಶದ ವಾಣಿಜ್ಯ ಹಿತಾಸಕ್ತಿಗೆ ಪೂರಕವಾಗಿದೆ ಎಂದು ಹೇಳುತ್ತಿದ್ದಾರೆ. ಈ ಮಧ್ಯೆ ಅಮೆರಿಕದ ಅಧ್ಯಕ್ಷರ ಸುಂಕ ನೀತಿಗಳ ಸಮರ್ಥನೆಯ ಭಾಗವಾಗಿ, ಶ್ವೇತಭವನದ ವೆಸ್ಟ್ ವಿಂಗ್‌ನಲ್ಲಿ ದಿ ಟ್ಯಾರಿಫ್ ಮೆನ್ ಭಾವಚಿತ್ರವನ್ನು ಅಳವಡಿಸಲಾಗಿದೆ. ಈ ಚಿನ್ನದ ಲೇಪನದ ಕಲಾಕೃತಿಯಲ್ಲಿ ಅಮೆರಿಕದ ಯಾವೆಲ್ಲಾ ಮಾಜಿ ಅಧ್ಯಕ್ಷರಿದ್ದಾರೆ?.**

**ಇನ್ನು ಅಬ್ರಹಾಂ ಲಿಂಕನ್ ತಮ್ಮ ಅಧ್ಯಕ್ಷತೆಯಲ್ಲಿ (1861-1865) ಅಮೆರಿಕನ್ ಉತ್ಪಾದನೆಯನ್ನು ಉತ್ತೇಜಿಸಲು ಹೆಚ್ಚುವರಿ ಸುಂಕಗಳನ್ನು ಅನುಮೋದಿಸಿದ್ದರು. ಅದೇ ರೀತಿ ಅಮೆರಿಕದ 25ನೇ ಅಧ್ಯಕ್ಷ ಮತ್ತು ಡೊನಾಲ್ಡ್ ಟ್ರಂಪ್ ರಾಜಕೀಯ ಪ್ರೇರಣೆಯಾಗಿರುವ ವಿಲಿಯಂ ಮೆಕಿನ್ಲೆ, 1897ರಲ್ಲಿ ಐತಿಹಾಸಿಕ ಡಿಂಗ್ಲೆ ಸುಂಕ ಕಾಯ್ದೆಗೆ ಸಹಿ ಹಾಕಿದ್ದರು. ಈ ಕಾಯ್ದೆ ಆಮದುಗಳ ಮೇಲಿನ ಸುಂಕಗಳನ್ನು ತೀವ್ರವಾಗಿ ಹೆಚ್ಚಿಸಿತ್ತು.**

---

## ಛತ್ತೀಸ್‌ಗಢ : ತ್ರಿವರ್ಣ ಧ್ವಜ ಹಾರಿಸಿದ್ದ ವ್ಯಕ್ತಿಯನ್ನು ಕೊಂದ ನಕ್ಸಲರು





**ಕಂಕೇರ್:** ಛತ್ತೀಸ್‌ಗಢದ ಕಂಕೇರ್ ಜಿಲ್ಲೆಯ ಹಳ್ಳಿಯೊಂದರಲ್ಲಿ ಸ್ವಾತಂತ್ರ್ಯ ದಿನದಂದು ತ್ರಿವರ್ಣ ಧ್ವಜ ಹಾರಿಸಿದ್ದ ವ್ಯಕ್ತಿಯನ್ನು ನಕ್ಸಲರು ಕೊಂದಿದ್ದಾರೆ. ಛೋಟೆಬೇಟಿಯಾ ಪೊಲೀಸ್ ಠಾಣೆ ವ್ಯಾಪ್ತಿಯ ಬಿನಗುಂಡಾ ಗ್ರಾಮದ ನಿವಾಸಿ ಮನೀಶ್ ನುರೇಟಿ ಹತ್ಯೆಯಾದ ವ್ಯಕ್ತಿ. ಶಸ್ತ್ರಸಜ್ಜಿತ ನಕ್ಸಲರ ಗುಂಪು ಗ್ರಾಮಕ್ಕೆ ಆಗಮಿಸಿ ನುರೇಟಿ ಮತ್ತು ಇತರ ಇಬ್ಬರನ್ನು ಕರೆದೊಯ್ದರು ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ನಂತರ ಜನ ಅದಾಲತ್ ನಡೆಸಿ ನಂತರ ಗುಂಡು ಹಾರಿಸಿ ಕೊಂದಿದ್ದಾರೆ. ಆದರೆ ಉಳಿದ ಇಬ್ಬರನ್ನು ಥಳಿಸಿದ ನಂತರ ಬಿಡುಗಡೆ ಮಾಡಲಾಗಿದೆ.ಮಾವೋವಾದಿ ಉಗ್ರರು ನುರೇಟಿನನ್ನು ಪೊಲೀಸ್ ಮಾಹಿತಿದಾರ ಎಂದು ಹೇಳುವ ಪೋಸ್ಟರ್ ಹಾಕಿದ್ದಾರೆ, ಇದು ಸುಳ್ಳು ಎಂದು ಅಧಿಕಾರಿ ತಿಳಿಸಿದ್ದಾರೆ. ಕಂಕೇರ್ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಐಕೆ ಎಲೆಸೆಲಾ ಅವರು ನುರೇಟಿ ಅವರ ಶವವನ್ನು ಇನ್ನೂ ವಶಪಡಿಸಿಕೊಳ್ಳಲಾಗಿಲ್ಲ, ಅವರ ಸಂಬಂಧಿಕರನ್ನು ಸಂಪರ್ಕಿಸ ಲಾಗುತ್ತಿದೆ ಎಂದು ಹೇಳಿದರು.

ನಕ್ಸಲರು ಬಿನಗುಂದ ಗ್ರಾಮಕ್ಕೆ ಆಗಾಗ್ಗೆ ಭೇಟಿ ನೀಡುತ್ತಾರೆ. ಕಳೆದ ಒಂದೂವರೆ ವರ್ಷಗಳಲ್ಲಿ, ನಕ್ಸಲರು ಪೊಲೀಸ್ ಮಾಹಿತಿದಾರರು ಎಂದು ಆರೋಪಿಸಿ ನಾಲ್ಕರಿಂದ ಐದು ಜನರನ್ನು ಕೊಂದಿದ್ದಾರೆ. ಆದಾಗ್ಯೂ, ಮೃತರಲ್ಲಿ ಯಾರಿಗೂ ಪೊಲೀಸರೊಂದಿಗೆ ಯಾವುದೇ ಸಂಪರ್ಕವಿರಲಿಲ್ಲ ಎಂದು ಎಲೆಸೆಲಾ ಹೇಳಿದರು. ಬೆಳವಣಿಗೆಗಳನ್ನು ದೃಢಪಡಿಸುತ್ತಾ, ಬಸ್ತಾರ್ ರೇಂಜ್ ಇನ್ಸ್‌ಪೆಕ್ಟರ್ ಜನರಲ್ ಆಫ್ ಪೊಲೀಸ್ ಸುಂದರರಾಜ್ ಪಿ, ಮನೀಶ್ ನುರೇಟಿ ಸ್ವಾತಂತ್ರ್ಯ ದಿನಾಚರಣೆಯಲ್ಲಿ ಭಾಗವಹಿಸುತ್ತಿರುವುದನ್ನು ತೋರಿಸುವ ಒಂದು ಸಣ್ಣ ವಿಡಿಯೋ ಕೂಡ ಕಾಣಿಸಿಕೊಂಡಿದೆ ಎಂದು ಹೇಳಿದರು.

ಹತ್ಯೆಯ ಬಗ್ಗೆ ತನಿಖೆ ನಡೆಯುತ್ತಿದೆ ಮತ್ತು ಭಾಗಿಯಾದವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ಐಜಿ ಪ್ರತಿಪಾದಿಸಿದರು. ಸಾಮಾಜಿಕ ಮಾಧ್ಯಮಗಳಲ್ಲಿ ವೈರಲ್ ಆಗಿರುವ ವಿಡಿಯೋದಲ್ಲಿ ಮಕ್ಕಳು ಸೇರಿದಂತೆ ಕೆಲವು ಗ್ರಾಮಸ್ಥರು ವಂದೇ ಮಾತರಂ ಮತ್ತು ಭಾರತ್ ಮಾತಾ ಕಿ ಜೈ ಘೋಷಣೆಗಳ ನಡುವೆ ತ್ರಿವರ್ಣ ಧ್ವಜವನ್ನು ಹಾರಿಸುತ್ತಿರುವುದನ್ನು ತೋರಿಸಲಾಗಿದೆ.ಆಗಸ್ಟ್ 15 ರಂದು ಗ್ರಾಮದಲ್ಲಿ ರಾಷ್ಟ್ರಧ್ವಜವನ್ನು ಹಾರಿಸಿದ್ದಕ್ಕಾಗಿ ನಕ್ಸಲರು ನುರೇಟಿ ಮತ್ತು ಇತರರ ಬಗ್ಗೆ ಅತೃಪ್ತರಾಗಿದ್ದರು ಎಂದು ಪೊಲೀಸ್ ಮೂಲಗಳು ತಿಳಿಸಿವೆ.

---

# ದುಡಿಯುವವರ ಕೈ ಬೀಸಿ ಕರೆಯುತ್ತಿರುವ ದುಬೈ

## ಐಶಾರಾಮಿ ಜೀವನ ಸುಲಭವಾಗಿ ಸಿಕ್ಕುತ್ತದೆ, ಅಲ್ಲಿ ಶೂನ್ಯ ಆದಾಯ ತೆರಿಗೆ ಇದೆ



**ದುಬೈ:** ಇತ್ತೀಚೆಗೆ ಕೇಂದ್ರ ಸರ್ಕಾರ, ಲೋಕಸಭೆಯಲ್ಲಿ ಒಂದು ಕುತೂಹಲಕಾರಿ ವಿವರಣೆಯನ್ನು ನೀಡಿತು ಅದೇನೆಂದರೆ, 2024ರಲ್ಲಿ 2.06 ಲಕ್ಷ ಭಾರತೀಯರು ಭಾರತೀಯ ಪೌರತ್ವವನ್ನು ತ್ಯಜಿಸಿದ್ದಾರೆ ಎಂಬ ಮಾಹಿತಿ. ನಿಜ ಹೇಳಬೇಕೆಂದರೆ, ಭಾರತದ ಪೌರತ್ವವನ್ನು ತ್ಯಜಿಸಿ ವಿದೇಶಗಳಿಗೆ ಹೋಗುತ್ತಿರುವವರ ಸಂಖ್ಯೆ ವರ್ಷದಿಂದ ವರ್ಷಕ್ಕೆ ಬೆಳೆಯುತ್ತಲೇ ಇದೆ. 2021-22ಲ್ಲಿ ಅಂದಾಜು 2.25 ಲಕ್ಷ ಮಂದಿ ಭಾರತೀಯ ಪೌರತ್ವ ತೊರೆದಿದ್ದರು. 2022-2 3ರಲ್ಲಿ ಇದು ಸ್ವಲ್ಪ ಕಡಿಮೆಯಾಗಿತ್ತು, ಅಂದರೆ, ಆ ವರ್ಷ 2.16 ಲಕ್ಷ ಮಂದಿ ಪೌರತ್ವವನ್ನು ತೊರೆದಿದ್ದರು. ಆನಂತರ, 2024ರ 2.06 ಲಕ್ಷ ಮಂದಿ ದೇಶ ತೊರೆದಿದ್ದಾರೆ.

**ಭಾರತೀಯರ ನೆಚ್ಚಿನ ತಾಣ**

ಅವರೆಲ್ಲರೂ ಸಿರಿವಂತರು. ಹೋಗಿದ್ದಾದರೂ ಎಲ್ಲಿಗೆ ಅವರೆಲ್ಲರೂ ಅಮೆರಿಕ, ಕೆನಡಾ, ಯುನೈಟೆಡ್ ಕಿಂಗ್ ಡಮ್ ಗೆ ಪ್ರಯಾಣಿಸಿದ್ದಾರೆ. ಆದರೆ, ಇದೆಲ್ಲ ದೇಶಗಳ ಜೊತೆಗೆ, ವಲಸೆ ಹೋಗುತ್ತಿರುವ ಭಾರತೀಯ ನೆಚ್ಚಿನ ತಾಣವಾಗಿರುವ ಮತ್ತೊಂದು ದೇಶ - ಯುನೈಟೆಡ್ ಅರಬ್ ಎಮಿರೇಟ್ಸ್ (ಯುಎಇ). ಅದರಲ್ಲೂ ದುಬೈ ನಮ್ಮ ಭಾರತೀಯರಿಗೆ ಅಚ್ಚುಮೆಚ್ಚು. ಭಾರತದಿಂದ ಸಾವಿರಾರು ಜನರು ಅಲ್ಲಿಗೆ ಹೋಗುತ್ತಾರೆ. ದುಬೈಗೆ ಪ್ರವಾಸಕ್ಕಾಗಿ ಹೋಗುವದು ಬೇರೆ. ಆದರೆ, ಅಲ್ಲಿಯೇ ಹೋಗಿ ನೆಲೆಸುವ ಉದ್ದೇಶಕ್ಕಾಗಿ ಹಲವಾರು ಮಂದಿ ಹೋಗುತ್ತಾರೆ. ಹಾಗೆ ಅಲ್ಲಿ ಹೋಗಿ ನೆಲೆಸಲು ಬಯಸುವವರೆಲ್ಲಾ ಶ್ರೀಮಂತರು.

ನಮ್ಮ ಭಾರತೀಯ ಸಿರಿವಂತರೇನೂ ಕಮ್ಮಿಯಿಲ್ಲ. ಭಾರತದಿಂದಲೂ ಅನೇಕ ಮಂದಿ ದುಬೈಗೆ ವಲಸೆ ಹೋಗುತ್ತಾರೆ. ಅಲ್ಲಿ ಬ್ಯುಸಿನೆಸ್ ಮತ್ತಿತರ ಚಟುವಟಿಕೆಗಳನ್ನು ಕೈಗೊಳ್ಳುತ್ತಾರೆ. ಅಪಾರವಾದ ಹಣವನ್ನೂ ಸಂಪಾದನೆ ಮಾಡುತ್ತಾರೆ. ಕಡೆಗೆ ಅಲ್ಲಿಯೇ ನೆಲೆಸಲು ನಿರ್ಧರಿಸುತ್ತಾರೆ. ಅದಕ್ಕೆ ಕಾರಣ, ಅಲ್ಲಿ ಝೀರೋ ಟ್ಯಾಕ್ಸ್, ಸುಲಭವಾಗಿ ಕೈಗೆಟಕುವ ಐಶಾರಾಮಿ ಜೀವನ. ಅಮೆರಿಕ ಮೂಲದ ಎಎಫ್ ಪಿ ಸುದ್ದಿಸಂಸ್ಥೆಯು ನಡೆಸಿರುವ ಸಮೀಕ್ಷೆಯ ಪ್ರಕಾರ, ಲಕ್ಷೋಪಲಕ್ಷ ಜನರು ಈಗಾಗಲೇ ದುಬೈನಲ್ಲಿ ಹೋಗಿ ನೆಲೆಸಲು ತಯಾರಿ ನಡೆಸಿದ್ದಾರೆ. 2025ರ ಮುಗಿಯುವ ಹೊತ್ತಿಗೆ ಸುಮಾರು 90 ಲಕ್ಷ ಜನರು ದುಬೈನಲ್ಲಿ ಹೋಗಿ ಸೆಟ್ಲ್ ಆಗಲಿದ್ದಾರೆ. ಹಾಗಾಗಿ, ಇಡೀ ಪ್ರಪಂಚದಲ್ಲಿ ಅತಿ ಹೆಚ್ಚು ಜನರನ್ನು ಆಕರ್ಷಿಸುತ್ತಿರುವ ದೇಶವಾಗಿ ದುಬೈ ಹೊರಹೊಮ್ಮಿದೆ. ಶೂನ್ಯ ಆದಾಯ ತೆರಿಗೆ, ಐಷಾರಾಮಿ ಜೀವನದ ಜೊತೆಗೆ ಇನ್ನೂ ಕೆಲವು ಕಾರಣಗಳಿವೆ. ಅವುಗಳೆಂದರೆ,

**ದುಬೈನಲ್ಲಿದೆ ದುಡಿಯಲು ಹೆಚ್ಚು ಅವಕಾಶ:** ಯುನೈಟೆಡ್ ಅರಬ್ ಎಮಿರೇಟ್ಸ್‌ನ ಇತರ ಪ್ರಾಂತ್ಯಗಳಿಗೆ ಹೋಲಿಸಿದರೆ ದುಬೈನಲ್ಲಿ ಅತಿ ಹೆಚ್ಚು ಹೂಡಿಕೆಗಳಾಗಿವೆ. ಅತಿ ಹೆಚ್ಚು ಉದ್ಯಮಗಳಿವೆ. ಹಾಗಾಗಿ, ಅಲ್ಲಿ ಉದ್ಯೋಗಕ್ಕೆ, ಹೂಡಿಕೆಗೆ ಹೆಚ್ಚು ಅವಕಾಶಗಳಿವೆ. ಅಲ್ಲಿ ಹೋಗಿ ಉದ್ಯೋಗ ಮಾಡಿದರೂ ಸರಿ, ಬ್ಯುಸಿನೆಸ್ ಮಾಡಿದರೂ ಸರಿ - ಅವುಗಳಿಂದ ಅಲ್ಲಿ ಬರುವ ಆದಾಯಕ್ಕೆ ಯಾವುದೇ ಟ್ಯಾಕ್ಸ್ ಇಲ್ಲ. ಅಲ್ಲಿ ಇತರ ಐಷಾರಾಮಿತನಕ್ಕೆ ಸ್ವಲ್ಪ ತೆರಿಗೆಯಿದೆ ಅಷ್ಟೆ. ಅದಕ್ಕಾಗಿಯೇ ದುಡು ದುಡಿಯುವವರಿಗೆ ಇಂದು ದುಬೈ ಸ್ವರ್ಗವೆನಿಸಿದೆ. ಈ ಕಾರಣಗಳಿಂದಾಗಿ, ಯುವ ಉದ್ಯಮಿಗಳು, 30-40ರ ಆಜುಬಾಜುವಿನಲ್ಲಿರುವ 2ನೇ ಪೀಳಿಗೆಯ ಬ್ಯುಸಿನೆಸ್ ಮ್ಯಾನ್ ಗಳು, ಫಂಡ್ ಮ್ಯಾನೇಜರ್ ಗಳು ಭಾರತದಿಂದ ದುಬೈಗೆ ಹೋಗಿ ನೆಲೆಸುತ್ತಾರೆ.

ಯುಎಇಯಲ್ಲಿ 40ಕ್ಕೂ ಹೆಚ್ಚು ಮುಕ್ತ ವಲಯಗಳಿವೆ. ಈ ವಲಯಗಳಲ್ಲಿ ವ್ಯಾಪಾರ ಪ್ರಾರಂಭಿಸುವುದು ಸುಲಭ, ಕಾರ್ಪೊರೇಟ್ ತೆರಿಗೆ ವಿನಾಯಿತಿ ಮತ್ತು ವಿದೇಶಿ ಮಾಲೀಕತ್ವಕ್ಕೆ ಸಂಪೂರ್ಣ ಸ್ವಾತಂತ್ರ್ಯ ದೊರೆಯುತ್ತದೆ. ಇದು ವಿದೇಶಿ ನೇರ ಹೂಡಿಕೆಯನ್ನು ಹೆಚ್ಚಿಸಿದೆ.

**ದುಬೈ ಪ್ರಾಂತ್ಯದಲ್ಲಿ ಅನೇಕ ವರ್ಷಗಳಿಂದ ಸ್ಥಿರ ಆರ್ಥಿಕತೆಯನ್ನು ಸಾಧಿಸಲಾಗಿದೆ. ಈ ಮೊದಲು ಯುನೈಟೆಡ್ ಅರಬ್ ಎಮಿರೇಟ್ಸ್ ದೇಶವು ತೈಲೋತ್ಪನ್ನಗಳಿಂದ ಮಾತ್ರ ತನ್ನ ಆದಾಯವನ್ನು ಪಡೆಯುತ್ತಿತ್ತು. ಇತ್ತೀಚಿನ ವರ್ಷಗಳಲ್ಲಿ ತೈಲೋತ್ಪನ್ನಗಳ ವ್ಯಾಪಾರದ ಹೊರತಾಗಿಯೂ ಆ ದೇಶ, ಪ್ರವಾಸೋದ್ಯಮ ಮತ್ತಿತರ ಕ್ಷೇತ್ರಗಳ ಮೂಲಕ ತನ್ನ ಆದಾಯವನ್ನು ಹೆಚ್ಚಿಸಿಕೊಂಡಿದೆ. ರಾಜಕೀಯ ಸ್ಥಿರತೆ ಇರುವುದರಿಂದ ಆ ದೇಶದ ಆರ್ಥಿಕ ಸ್ಥಿರತೆಯೂ ಚೆನ್ನಾಗಿದೆ.**

### ರಾಜಕೀಯ ಸ್ಥಿರತೆ

**ಹೌದು, ಅಲ್ಲಿ ರಾಜರ ಆಳ್ವಿಕೆಯಿದೆ. ಅಲ್ಲಿನ ಏಳು ಪ್ರಾಂತ್ಯಗಳಲ್ಲೂ ಒಂದೊಂದು ರಾಜನ ಆಳ್ವಿಕೆಯಲ್ಲಿದೆ. ಆ ಏಳು ರಾಜ್ಯಗಳು ಸೇರಿ ಒಂದು ಕೇಂದ್ರ ಸರ್ಕಾರವನ್ನು ರೂಪಿಸಿವೆ. ಆ ಒಂದೊಂದು ಪ್ರಾಂತ್ಯಗಳನ್ನು ಆಳುವಾತನಿಗೆ ಎಮಿರ್ ಎಂದು ಕರೆಯಲಾಗುತ್ತದೆ. ಆತ ಆಳುವ ಪ್ರಾಂತ್ಯಗಳು ಎಮಿರೇಟ್ ಎಂದು ಕರೆಯಲ್ಪಡುತ್ತವೆ. ಆ ಏಳು ಎಮಿರೇಟ್‌ಗಳು ಸೇರಿ ಒಂದು ದೇಶವನ್ನಾಗಿ ಸಿಕೊಂಡಿರುವುದರಿಂದ ಅದಕ್ಕೆ ಯುನೈಟೆಡ್ ಅರಬ್ ಎಮಿರೇಟ್ಸ್ ಎಂದು ಹೆಸರು. ಹೀಗೆ ಅಲ್ಲಿ ರಾಜರ ಆಳ್ವಿಕೆ ಇರುವುದರಿಂದ ಅಲ್ಲಿ ಸ್ಥಿರ ಸರ್ಕಾರಗಳಿವೆ. ದುಬೈನಲ್ಲೂ ರಾಜಕೀಯ ಸ್ಥಿರತೆಯಿದೆ. ರಾಜಕೀಯ ಸ್ಥಿರತೆ ಇರುವುದರಿಂದ ಸರ್ಕಾರದ ಪಾಲಿಸಿಗಳು, ಅಜೆಂಡಾಗಳಲ್ಲಿ ಸ್ಥಿರತೆ ಇರುತ್ತದೆ. ಪದೇ ಪದೇ ಸರ್ಕಾರ ಬದಲಾಗಿ ಪಾಲಿಸಿಗಳು ಚೇಂಜ್ ಆಗುವ ಭಯವಿಲ್ಲ.**

---

## ಪೊಲೀಸ್ ಹೆಲಿಕಾಪ್ಟರ್ ಮೇಲೆ ನಡೆದ ದಾಳಿಯಲ್ಲಿ 13 ಬಲಿ



**30ಕ್ಕೂ ಹೆಚ್ಚು ಜನರಿಗೆ ಗಾಯ**

**ಬೊಗೋಟಾ:** ಕೊಲಂಬಿಯಾದಲ್ಲಿ ಕಾರ್ ಬಾಂಬ್, ಪೊಲೀಸ್ ಹೆಲಿಕಾಪ್ಟರ್ ಮೇಲೆ ನಡೆದ ಪ್ರತ್ಯೇಕ ದಾಳಿಯಲ್ಲಿ ಕನಿಷ್ಠ 13 ಜನರು ಸಾವನ್ನಪ್ಪಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಈ ಎರಡೂ ಘಟನೆಗಳಿಗೆ ಅಧ್ಯಕ್ಷ ಗುಸ್ತಾವೊ ಪೆಟ್ರೋ ಅವರು ಫಾರ್ಕ್ ಎಂದು ಕರೆಯಲ್ಪಡುವ ನಿಷ್ಕ್ರಿಯ ಕೊಲಂಬಿಯಾದ ಕ್ರಾಂತಿಕಾರಿ ಸಶಸ್ತ್ರ ಪಡೆಗಳ ಭಿನ್ನಮತೀಯರು ಕಾರಣ ಎಂದು ಹೇಳಿದ್ದಾರೆ. ಹೆಲಿಕಾಪ್ಟರ್ ದಾಳಿಯಲ್ಲಿ ಎಂಟು ಪೊಲೀಸ್ ಅಧಿಕಾರಿಗಳು ಸಾವನ್ನಪ್ಪಿದ್ದಾರೆ ಎಂದು ಪೆಟ್ರೋ ಎಕ್ಸ್‌ನಲ್ಲಿ ಹೇಳಿದ್ದಾರೆ. ಕೊಕೇನ್‌ಗೆ ಕಚ್ಚಾ ವಸ್ತುವಾದ ಕೋಕಾ ಎಲೆ ಬೆಳೆಗಳನ್ನು ನಿರ್ಮೂಲನೆ ಮಾಡಲು ವಿಮಾನವು ಉತ್ತರ ಕೊಲಂಬಿಯಾದ ಆಂಟಿಯೋಕ್ವಿಯಾದ ಪ್ರದೇಶಕ್ಕೆ ಸಿಬ್ಬಂದಿಯನ್ನು ಸಾಗಿಸುತ್ತಿತ್ತು ಎಂದು ಗಮನಿಸಿದರು. ಆಂಟಿಯೋಕ್ವಿಯಾ ಗವರ್ನರ್ ಆಂಡ್ರೆಸ್ ಜೂಲಿಯನ್ ಅದೇ ಸಾಮಾಜಿಕ ಮಾಧ್ಯಮ ವೇದಿಕೆಯಲ್ಲಿ ಕೋಕಾ ಎಲೆ ಬೆಳೆಗಳ ಮೇಲೆ ಹಾರುವಾಗ ಹೆಲಿಕಾಪ್ಟರ್ ಮೇಲೆ ಡ್ರೋನ್ ದಾಳಿ ಮಾಡಿದೆ ಎಂದು ಹೇಳಿದರು.

ಪ್ರಾಥಮಿಕ ಮಾಹಿತಿಯ ಪ್ರಕಾರ ದಾಳಿಯು ವಿಮಾನದಲ್ಲಿ ಬೆಂಕಿ ಕಾಣಿಸಿಕೊಂಡಿದೆ ಎಂದು ಕೊಲಂಬಿಯಾದ ರಕ್ಷಣಾ ಸಚಿವ ಪೆಡ್ರೊ ಸ್ಯಾಂಚೆಜ್ ಹೇಳಿದ್ದಾರೆ.

ಹೆಲಿಕಾಪ್ಟರ್ ದಾಳಿಯಲ್ಲಿ ಗಾಯಗೊಂಡ ಎಂಟು ಜನರ ಸ್ಥಿತಿಯ ವಿವರಗಳನ್ನು ಅಧಿಕಾರಿಗಳು ತಕ್ಷಣ ನೀಡಿಲ್ಲ. ಏತನ್ಮಧ್ಯೆ, ನೈಋತ್ಯ ನಗರ ಕ್ಯಾಲಿಯಲ್ಲಿನ ಅಧಿಕಾರಿಗಳು, ಸ್ಫೋಟಕಗಳನ್ನು ತುಂಬಿದ ವಾಹನವು ಮಿಲಿಟರಿ ವಾಯುಯಾನ ಶಾಲೆಯ ಬಳಿ ಸ್ಫೋಟಗೊಂಡು ಐದು ಜನರು ಸಾವನ್ನಪ್ಪಿ 30ಕ್ಕೂ ಹೆಚ್ಚು ಜನರು ಗಾಯಗೊಂಡಿದ್ದಾರೆ ಎಂದು ವರದಿ ಮಾಡಿದ್ದಾರೆ.


ಕೊಲಂಬಿಯಾದ ಏರೋಸ್ಪೇಸ್ ಫೋರ್ಸ್ ಸ್ಫೋಟದ ಕುರಿತು ಹೆಚ್ಚುವರಿ ವಿವರಗಳನ್ನು ತಕ್ಷಣ ನೀಡಲಿಲ್ಲ. ಪೆಟ್ರೋ ಆರಂಭದಲ್ಲಿ ದೇಶದ ಅತಿದೊಡ್ಡ ಸಕ್ರಿಯ ಡ್ರಗ್ ಕಾರ್ಟೆಲ್ ಆಗಿರುವ ಗಲ್ಫ್ ಕ್ಲಾನ್ ಅನ್ನು ಹೆಲಿಕಾಪ್ಟರ್ ದಾಳಿಗೆ ದೂಷಿಸಿದರು.

### ಕೃಷಿ ಪ್ರದೇಶವು ದಾಖಲೆ

**ಫಾರ್ಕ್ ಗುಂಪಿಗೆ ಸೇರಿದೆ ಎಂದು ಹೇಳಲಾದ ಕೊಕೇನ್ ವಶಪಡಿಸಿಕೊಳ್ಳುವಿಕೆಗೆ ಪ್ರತೀಕಾರವಾಗಿ ವಿಮಾನವನ್ನು ಗುರಿಯಾಗಿಸಲಾಗಿದೆ ಎಂದು ಅವರು ಪ್ರತಿಪಾದಿಸಿದರು. 2016ರಲ್ಲಿ ಸರ್ಕಾರದೊಂದಿಗೆ ಶಾಂತಿ ಒಪ್ಪಂದವನ್ನು ತಿರಸ್ಕರಿಸಿದ ಭಿನ್ನಮತೀಯರು ಮತ್ತು ಗಲ್ಫ್ ಕ್ಲಾನ್‌ನ ಸದಸ್ಯರು ಆಂಟಿಯೋಕ್ವಿಯಾದಲ್ಲಿ ಕಾರ್ಯನಿರ್ವಹಿಸುತ್ತಾರೆ. ಕೊಲಂಬಿಯಾದಲ್ಲಿ ಕೋಕಾ ಎಲೆ ಕೃಷಿ ಹೆಚ್ಚುತ್ತಿದೆ. ಯುನೈಟೆಡ್ ನೇಷನ್ಸ್ ಆಫೀಸ್ ಆನ್ ಡ್ರಗ್ಸ್ ಅಂಡ್ ಕ್ರೈಮ್‌ನಿಂದ ಲಭ್ಯವಿರುವ ಇತ್ತೀಚಿನ ವರದಿಯ ಪ್ರಕಾರ, 2023ರಲ್ಲಿ ಕೃಷಿ ಪ್ರದೇಶವು ದಾಖಲೆಯ 253,000 ಹೆಕ್ಟೇರ್ ತಲುಪಿದೆ.**

---

## ಅಮೆರಿಕದ ಡ್ರೇಕ್ ಪ್ಯಾಸೇಜ್ ಪ್ರದೇಶದಲ್ಲಿ 7.5 ತೀವ್ರತೆಯ ಪ್ರಬಲ ಭೂಕಂಪ




**ವಾಷಿಂಗ್ಟನ್:** ಅಮೆರಿಕದಲ್ಲಿ ಡ್ರೇಕ್ ಪ್ಯಾಸೇಜ್ ಪ್ರದೇಶದಲ್ಲಿ ಪ್ರಬಲ ಭೂಕಂಪ ಸಂಭವಿಸಿದೆ.ಇದರ ತೀವ್ರತೆ ರಿಕ್ಟರ್ ಮಾಪಕದಲ್ಲಿ 7.5 ರಷ್ಟು ದಾಖಲಾಗಿದೆ. ಭೂಕಂಪದ ನಂತರ ಸುನಾಮಿ ಭೀತಿ ಕಾಡಲಾರಂಭಿಸಿದೆ. ರಾಷ್ಟ್ರೀಯ ಭೂಕಂಪಶಾಸ್ತ್ರ ಕೇಂದ್ರದ ಪ್ರಕಾರ, ಈ ಭೂಕಂಪವು ಭಾರತೀಯ ಸಮಯ 07.46 ಕ್ಕೆ ಸಂಭವಿಸಿದೆ. ಇದರ ಕೇಂದ್ರಬಿಂದು ಡ್ರೇಕ್ ಪ್ಯಾಸೇಜ್‌ನಲ್ಲಿದೆ. ಡ್ರೇಕ್ ಪ್ಯಾಸೇಜ್ ದಕ್ಷಿಣ ಅಮೆರಿಕ ಮತ್ತು ಅಂಟಾರ್ಕ್‌ಟಿಕಾ ನಡುವೆ ಇದೆ. ಯುನೈಟೆಡ್ ಸ್ಟೇಟ್ಸ್ ಭೂವೈಜ್ಞಾನಿಕ ಸಮೀಕ್ಷೆಯ ಆರಂಭಿಕ ವರದಿಗಳು ಭೂಕಂಪದ ತೀವ್ರತೆಯನ್ನು 8.0 ಎಂದು ಹೇಳಿದ್ದವು. ದಕ್ಷಿಣ ಅಮೆರಿಕ, ಅಂಟಾರ್ಕ್‌ಟಿಕ್ ಟೆಕ್ಟೋನಿಕ್ ಪ್ಲೇಟ್‌ಗಳ ಜಂಕ್ಷನ್‌ನಲ್ಲಿ ಈ ಪ್ರದೇಶ ಇರುವುದರಿಂದ ಕಂಪನಗಳು ಹೆಚ್ಚಿವೆ. ಭೂಕಂಪದ ನಂತರ ಸುನಾಮಿ ಎಚ್ಚರಿಕೆ ನೀಡಲಾಗಿದೆ. ಆದಾಗ್ಯೂ, ಯಾವುದೇ ದೊಡ್ಡ ಹಾನಿ ಸಂಭವಿಸಿದ ಬಗ್ಗೆ ಇನ್ನೂ ವರದಿಯಾಗಿಲ್ಲ. ಇದು ಪೂರ್ವದಲ್ಲಿ ಅಟ್ಲಾಂಟಿಕ್ ಸಾಗರವನ್ನು ಪಶ್ಚಿಮದಲ್ಲಿ ಪೆಸಿಫಿಕ್ ಮಹಾಸಾಗರಕ್ಕೆ ಸಂಪರ್ಕಿಸುತ್ತದೆ. ಡ್ರೇಕ್ ಪ್ಯಾಸೇಜ್‌ನ ಅಗಲ ಕನಿಷ್ಠ 800 ಕಿ.ಮೀ. ಇದೆ. ಭೂಕಂಪಗಳು ಏಕೆ ಸಂಭವಿಸುತ್ತವೆ ಭೂಮಿಯೊಳಗೆ 7 ಫಲಕಗಳಿವೆ, ಅವು ನಿರಂತರವಾಗಿ ತಿರುಗುತ್ತಲೇ ಇರುತ್ತವೆ. ಈ ಫಲಕಗಳು ಹೆಚ್ಚು ಡಿಕ್ಕಿ ಹೊಡೆಯುವ ವಲಯವನ್ನು ದೋಷ ರೇಖೆ ಎಂದು ಕರೆಯಲಾಗುತ್ತದೆ. ಪುನರಾವರ್ತಿತ ಘರ್ಷಣೆಯಿಂದಾಗಿ, ಫಲಕಗಳ ಮೂಲೆಗಳು ಬಾಗುತ್ತವೆ. ಆಗ ಕಂಪನ ಸಂಭವಿಸುತ್ತದೆ. ಭೂಕಂಪದ ಕೇಂದ್ರಬಿಂದು ಎಂದರೆ ಫಲಕಗಳ ಚಲನೆಯಿಂದಾಗಿ ಭೂವೈಜ್ಞಾನಿಕ ಶಕ್ತಿ ಬಿಡುಗಡೆಯಾಗುವ ಸ್ವಲ್ಪ ಕೆಳಗಿನ ಸ್ಥಳ. ಈ ಸ್ಥಳದಲ್ಲಿ ಭೂಕಂಪದ ಕಂಪನ ಹೆಚ್ಚಾಗಿರುತ್ತದೆ. ಕಂಪನದ ಆವರ್ತನ ಹೆಚ್ಚಾದಂತೆ, ಅದರ ಪರಿಣಾಮ ಕಡಿಮೆಯಾಗುತ್ತದೆ. ಆದಾಗ್ಯೂ, ರಿಕ್ಟರ್ ಮಾಪಕದಲ್ಲಿ 7, ಅದಕ್ಕಿಂತ ಹೆಚ್ಚಿನ ತೀವ್ರತೆಯ ಭೂಕಂಪ ಸಂಭವಿಸಿದಲ್ಲಿ, ಸುತ್ತಮುತ್ತಲಿನ 40 ಕಿಮೀ ತ್ರಿಜ್ಯದಲ್ಲಿ ಕಂಪನವು ಬಲವಾಗಿರುತ್ತದೆ. ರಿಕ್ಟರ್ ಮಾಪಕವನ್ನು ಬಳಸಿಕೊಂಡು ಭೂಕಂಪಗಳನ್ನು ಅಳೆಯಲಾಗುತ್ತದೆ.

ಇದನ್ನು ರಿಕ್ಟರ್ ಮ್ಯಾಗ್ನಿಟ್ಯೂಡ್ ಟೆಸ್ಟ್ ಮಾಪಕ ಎಂದು ಕರೆಯಲಾಗುತ್ತದೆ. ರಿಕ್ಟರ್ ಮಾಪಕದಲ್ಲಿ, ಭೂಕಂಪಗಳನ್ನು 1ರಿಂದ 9ರ ಆಧಾರದ ಮೇಲೆ ಅಳೆಯಲಾಗುತ್ತದೆ. ಭೂಕಂಪಗಳನ್ನು ಅದರ ಕೇಂದ್ರದಿಂದ ಅಂದರೆ ಅಧಿಕೇಂದ್ರದಿಂದ ಅಳೆಯಲಾಗುತ್ತದೆ. ಭೂಕಂಪದ ಸಮಯದಲ್ಲಿ ಭೂಮಿಯ ಒಳಗಿನಿಂದ ಬಿಡುಗಡೆಯಾಗುವ ಶಕ್ತಿಯ ತೀವ್ರತೆಯನ್ನು ಇದರಿಂದ ಅಳೆಯಲಾಗುತ್ತದೆ.

---

# ಗಾಜಾದಲ್ಲಿರುವ ಒತ್ತೆಯಾಳುಗಳನ್ನು ಬಿಡುಗಡೆಗೊಳಿಸಲು ಸಿದ್ಧ

## ಸದ್ಯಕ್ಕೆ ಇಸ್ರೇಲ್ ಸೇನೆ ಗಾಜಾ ನಗರದ ಮೇಲೆ ಒತ್ತಡ, ಷರತ್ತುಗಳೊಂದಿಗೆ ಯುದ್ಧ ಕೊನೆಗೊಳಿಸಲು ಮಾತುಕತೆಗೆ ತೀರ್ಮಾನ

**ಕದನ ವಿರಾಮಕ್ಕೆ ಪ್ರಸ್ತಾಪ**



**ಗಾಜಾ:** ಇಸ್ರೇಲ್ ಗಾಜಾದಲ್ಲಿರುವ ಒತ್ತೆಯಾಳುಗಳನ್ನು ಬಿಡುಗಡೆ ಮಾಡಲು ಮಾತುಕತೆ ನಡೆಸಲು ತೀರ್ಮಾನಿಸಿದೆ. ಪ್ರಧಾನ ಮಂತ್ರಿ ಬೆಂಜಮಿನ್ ನೆತನ್ಯಾಹು ಈ ವಿಷಯ ತಿಳಿಸಿದ್ದಾರೆ. ಇಸ್ರೇಲ್‌ಗೆ ಒಪ್ಪಿಗೆಯಾಗುವ ಷರತ್ತುಗಳೊಂದಿಗೆ ಯುದ್ಧವನ್ನು ಕೊನೆಗೊಳಿಸಲು ಮಾತುಕತೆ ನಡೆಸಲು ತೀರ್ಮಾನಿಸಲಾಗಿದೆ. ಗಾಜಾ ನಗರವನ್ನು ವಶಪಡಿಸಿಕೊಳ್ಳಲು ಮತ್ತು ಹಮಾಸ್ ಅನ್ನು ಸೋಲಿಸಲು ಸೈನಿಕರಿಗೆ ನೆತನ್ಯಾಹು ಸೂಚನೆ ನೀಡಿದ್ದಾರೆ. ಸದ್ಯಕ್ಕೆ ಇಸ್ರೇಲ್ ಸೇನೆ ಗಾಜಾ ನಗರದ ಮೇಲೆ ಒತ್ತಡ ಹೇರುತ್ತಿದೆ.

**ಸೈನಿಕರನ್ನು ಭೇಟಿ ಮಾಡಿದ ನೆತನ್ಯಾಹು:** ಗಾಜಾದಲ್ಲಿ ಸೇವೆ ಸಲ್ಲಿಸುತ್ತಿರುವ ಸೈನಿಕರನ್ನು ನೆತನ್ಯಾಹು ಭೇಟಿಯಾದರು. ಗಾಜಾ ನಗರವನ್ನು ವಶಪಡಿಸಿಕೊಳ್ಳುವ ಯೋಜನೆಗೆ ಅನುಮೋದನೆ ನೀಡಿದರು. ಹಮಾಸ್ ಅನ್ನು ಸೋಲಿಸಲು ಸೈನಿಕರಿಗೆ ಸೂಚನೆ ನೀಡಿದರು. ನಾವು ನಿರ್ಧಾರ ತೆಗೆದುಕೊಳ್ಳುವ ಹಂತದಲ್ಲಿದ್ದೇವೆ ಎಂದು ಅವರು ತಿಳಿಸಿದ್ದಾರೆ. ಇಸ್ರೇಲ್ ಸೇನೆ ಗಾಜಾ ನಗರದ ಮೇಲೆ ಒತ್ತಡ ಹೇರುತ್ತಲೇ ಇದೆ. 60,000 ಮೀಸಲು ಸೈನಿಕರನ್ನು ಕರೆಸಿಕೊಳ್ಳಲಾಗಿದೆ. ಅಂತರಾಷ್ಟ್ರೀಯ ಖಂಡನೆಗಳ ನಡುವೆಯೂ ಸರ್ಕಾರವು ತನ್ನ ಯೋಜನೆಯನ್ನು ಮುಂದುವರಿಸುತ್ತಿದೆ ಎಂಬುದಕ್ಕೆ ಇದು ಒಂದು ಸೂಚನೆಯಾಗಿದೆ.

**ಹೊಸ ತಾತ್ಕಾಲಿಕ ಕದನ ವಿರಾಮ ಪ್ರಸ್ತಾಪಕ್ಕೆ ಹಮಾಸ್ ಒಪ್ಪಿಗೆ:** ಹೊಸ ತಾತ್ಕಾಲಿಕ ಕದನ ವಿರಾಮ ಪ್ರಸ್ತಾಪಕ್ಕೆ ಹಮಾಸ್ ಒಪ್ಪಿಗೆ ನೀಡಿದೆ. ಆದರೆ ಇಸ್ರೇಲ್ ಸರ್ಕಾರ ಇನ್ನೂ ಅಧಿಕೃತವಾಗಿ ಪ್ರತಿಕ್ರಿಯಿಸಿಲ್ಲ. ಈ ಪ್ರಸ್ತಾಪದ ಬಗ್ಗೆ ಮಾತುಕತೆ ನಡೆಸಲು ಇದು ಸಮಯ ನೀಡುತ್ತದೆ. 60 ದಿನಗಳ ಕದನ ವಿರಾಮಕ್ಕೆ ಪ್ರಸ್ತಾಪದಲ್ಲಿ ತಿಳಿಸಲಾಗಿದೆ. ಹಮಾಸ್ ಉಗ್ರಗಾಮಿಗಳು ಗಾಜಾದಲ್ಲಿ ಇರಿಸಿಕೊಂಡಿರುವ 10 ಜೀವಂತ ಒತ್ತೆಯಾಳುಗಳು, 18 ಮೃತದೇಹಗಳನ್ನು ಬಿಡುಗಡೆ ಮಾಡಬೇಕಿದೆ. ಇದಕ್ಕೆ ಪ್ರತಿಯಾಗಿ ಇಸ್ರೇಲ್ ಸುಮಾರು 200 ದೀರ್ಘಕಾಲದ ಪ್ಯಾಲೆಸ್ಟೀನಿಯನ್ ಕೈದಿಗಳನ್ನು ಬಿಡುಗಡೆ ಮಾಡಬೇಕಾಗುತ್ತದೆ. ಗಾಜಾದಲ್ಲಿರುವ ಉಗ್ರಗಾಮಿಗಳು ಉಳಿದ 50 ಒತ್ತೆಯಾಳುಗಳನ್ನು ತಕ್ಷಣವೇ ಬಿಡುಗಡೆ ಮಾಡಬೇಕು ಎಂದು ಇಸ್ರೇಲ್ ಸರ್ಕಾರ ಹೇಳಿದೆ. ಅವರಲ್ಲಿ ಸುಮಾರು 20 ಜನರು ಇನ್ನೂ ಜೀವಂತವಾಗಿದ್ದಾರೆ ಎಂದು ಇಸ್ರೇಲ್ ಅಧಿಕಾರಿಗಳು ನಂಬಿದ್ದಾರೆ.

ನೆತನ್ಯಾಹು ಅವರ ಹೇಳಿಕೆಯ ಪ್ರಕಾರ, ಇಸ್ರೇಲ್ ತನ್ನ ಷರತ್ತುಗಳನ್ನು ಪೂರೈಸುವ ರೀತಿಯಲ್ಲಿ ಒತ್ತೆಯಾಳುಗಳನ್ನು ಬಿಡುಗಡೆ ಮಾಡಲು, ಯುದ್ಧವನ್ನು ಕೊನೆಗೊಳಿಸಲು ಸಿದ್ಧವಾಗಿದೆ. ಮಾತುಕತೆಗಳು ಶೀಘ್ರದಲ್ಲೇ ಪ್ರಾರಂಭವಾಗುವ ನಿರೀಕ್ಷೆಯಿದೆ. ಆದರೆ ಫಲಿತಾಂಶವು ಅನಿಶ್ಚಿತವಾಗಿದೆ. ಇಸ್ರೇಲ್ ತನ್ನ ಮಿಲಿಟರಿ ಕಾರ್ಯಾಚರಣೆಗಳನ್ನು ಮುಂದುವರೆಸಿದೆ. ಗಾಜಾ ನಗರದ ಮೇಲೆ ಒತ್ತಡ ಹೇರುತ್ತಿದೆ.

### ಹಮಾಸ್‌ಅನ್ನು ಸೋಲಿಸಲು ಸೂಚನೆ

**ಗಾಜಾದಲ್ಲಿ ಒತ್ತೆಯಾಳುಗಳ ಬಿಡುಗಡೆಗಾಗಿ ಮಾತುಕತೆ ನಡೆಸಲು ಇಸ್ರೇಲ್ ನಿರ್ಧರಿಸಿದೆ. ಪ್ರಧಾನ ಮಂತ್ರಿ ನೆತನ್ಯಾಹು, ಇಸ್ರೇಲ್‌ಗೆ ಒಪ್ಪಿಗೆಯಾಗುವ ಷರತ್ತುಗಳೊಂದಿಗೆ ಯುದ್ಧವನ್ನು ಕೊನೆಗೊಳಿಸಲು ಸಿದ್ಧ ಎಂದಿದ್ದಾರೆ. ಗಾಜಾ ನಗರವನ್ನು ವಶಪಡಿಸಿಕೊಳ್ಳಲು ಸೈನಿಕರಿಗೆ ಸೂಚನೆ ನೀಡಲಾಗಿದ್ದು, ಹಮಾಸ್‌ಅನ್ನು ಸೋಲಿಸಲು ಸೂಚಿಸಲಾಗಿದೆ. ಹೊಸ ಕದನ ವಿರಾಮ ಪ್ರಸ್ತಾಪಕ್ಕೆ ಹಮಾಸ್ ಒಪ್ಪಿಗೆ ಸೂಚಿಸಿದ್ದು, ಇಸ್ರೇಲ್ ಪ್ರತಿಕ್ರಿಯೆಗಾಗಿ ಕಾಯಲಾಗುತ್ತಿದೆ.**

> **ನಮ್ಮ ಒತ್ತೆಯಾಳುಗಳ ಬಿಡುಗಡೆಗೆ ತಕ್ಷಣ ಮಾತುಕತೆ ಆರಂಭಿಸಲು ಸೂಚನೆ ನೀಡಿದ್ದೇನೆ. ಇಸ್ರೇಲ್‌ಗೆ ಒಪ್ಪಿಗೆಯಾಗುವ ಷರತ್ತುಗಳೊಂದಿಗೆ ಯುದ್ಧವನ್ನು ಕೊನೆಗೊಳಿಸಲು ತೀರ್ಮಾನಿಸಲಾಗಿದೆ.**
> **-ಬೆಂಜಮಿನ್‌ನೆತನ್ಯಾಹು, ಪ್ರಧಾನ ಮಂತ್ರಿ**

---

## ಮಿನಿ ನ್ಯೂಸ್

### ಮೋದಿ ಪ್ಯಾಲಿ: ಆರ್‌ಡಿಜೆ ಅತೃಪ್ತ ಶಾಸಕರು ಎನ್‌ಡಿಎಗೆ ಸೇರ್ಪಡೆ ಸಾಧ್ಯತೆ

**ಪಟ್ನಾ:** ಬಿಹಾರದ ಗಯಾಜಿಯಲ್ಲಿ ಪ್ರಧಾನಿ ನರೇಂದ್ರ ಮೋದಿ ಪಾಲ್ಗೊಂಡ ರ‍್ಯಾಲಿಯಲ್ಲಿ ಇಬ್ಬರು ಅತೃಪ್ತ ಆರ್‌ಜೆಡಿ ಶಾಸಕರು ಕಾಣಿಸಿಕೊಂಡಿದ್ದು, ಮುಂಬರುವ ವಿಧಾನಸಭಾ ಚುನಾವಣೆಗೂ ಮುನ್ನ ಬಿಜೆಪಿ ನೇತೃತ್ವದ ಎನ್‌ಡಿಎ ಮೈತ್ರಿಕೂಟಕ್ಕೆ ಸೇರ್ಪಡೆಯಾಗಲಿದ್ದಾರೆ ಎಂಬ ಊಹಾಪೋಹಗಳಿಗೆ ಪುಷ್ಟಿ ಸಿಕ್ಕಂತಾಗಿದೆ. ಮಗಧ ವಿಶ್ವವಿದ್ಯಾಲಯದ ಆವರಣದಲ್ಲಿ ನಿರ್ಮಿಸಲಾದ ವೇದಿಕೆಯಲ್ಲಿ ನವಾದಾ ಶಾಸಕಿ ವಿಭಾ ದೇವಿ, ರಾಜಲಿ ಶಾಸಕ ಪ್ರಕಾಶ್ ವೀರ್ ಕಾಣಿಸಿಕೊಂಡರು. ವಿಭಾ ದೇವಿಯ ಪತಿ ರಾಜ್ ಬಲ್ಲಬ್ ಯಾದವ್ ಹಲವು ಬಾರಿ ಗೆದ್ದು ಶಾಸಕರಾಗಿದ್ದರು. ಇತ್ತೀಚೆಗೆ ಪಟ್ನಾ ಹೈಕೋರ್ಟ್ ಪೋಕ್ಸ ಪ್ರಕರಣದಲ್ಲಿ ಖುಲಾಸೆಗೊಂಡ ಬಳಿಕ ಜೈಲಿನಿಂದ ಹೊರಬಂದರು. ಅವರು ಹಲವು ವರ್ಷಗಳ ಕಾಲ ಜೈಲಿನಲ್ಲಿದ್ದರು. ನವಾದಾ ಜಿಲ್ಲೆಯಲ್ಲಿ ಅಪಾರ ಪ್ರಭಾವ ಹೊಂದಿರುವ ಯಾದವ್, ಕಳೆದ ಲೋಕಸಭಾ ಚುನಾವಣೆಯಲ್ಲಿ ತಮ್ಮ ಕುಟುಂಬದ ಸದಸ್ಯರಿಗೆ ಆರ್‌ಜೆಡಿ ಟಿಕೆಟ್ ನಿರಾಕರಿಸಿದಾಗ ಅಸಮಾಧಾನಗೊಂಡಿದ್ದರು ಎನ್ನಲಾಗಿದೆ. ಅವರ ಸಹೋದರ ಬಿನೋದ್ ಯಾದವ್, ಆರ್‌ಜೆಡಿ ತೊರೆದು ನವಾದಾ ಲೋಕಸಭಾ ಕ್ಷೇತ್ರದಿಂದ ಸ್ವತಂತ್ರ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದರು. ಎಸ್‌ಸಿ ಮೀಸಲು ಕ್ಷೇತ್ರದಿಂದ ಎರಡನೇ ಅವಧಿಗೆ ಆಯ್ಕೆಯಾಗಿರುವ ಪ್ರಕಾಶ್ ವೀರ್, ಆರ್‌ಜೆಡಿ ಅಧ್ಯಕ್ಷ ಲಾಲು ಪ್ರಸಾದ್ ಹಾಗೂ ತೇಜಸ್ವಿ ಯಾದವ್ ಅವರ ಒಲವು ಕಳೆದುಕೊಂಡಿದ್ದಾರೆ ಎನ್ನಲಾಗಿದೆ.

### ಹಲ್ಲೆ ಪ್ರಕರಣ, ಹೆದರುವುದಿಲ್ಲ, ಸೋಲುವುದೂ ಇಲ್ಲ: ರೇಖಾ ಗುಪ್ತಾ

**ನವದೆಹಲಿ:** ಜನ ಸಂವಾದ ಕಾರ್ಯಕ್ರಮದಲ್ಲಿ ನಡೆದ ಹಲ್ಲೆಯಿಂದಾಗಿ ಗಾಯಗೊಂಡಿದ್ದ ದೆಹಲಿ ಸಿಎಂ ರೇಖಾ ಗುಪ್ತಾ ಅವರು ಚೇತರಿಸಿಕೊಂಡಿದ್ದು, ಎರಡು ದಿನಗಳ ಬಳಿಕ ಸಾರ್ವಜನಿಕವಾಗಿ ಕಾಣಿಸಿಕೊಂಡಿದ್ದು, ನಾನು ಎಂದಿಗೂ ಹೆದರುವುದೂ ಇಲ್ಲ, ಸೋಲುವುದೂ ಇಲ್ಲ. ಹಕ್ಕುಗಳಿಗಾಗಿ ಹೋರಾಟ ಮುಂದುವರಿಸುತ್ತೇನೆ ಎಂದು ಹೇಳಿದ್ದಾರೆ. ನಗರದ ಗಾಂಧಿನಗರದಲ್ಲಿ ನಡೆದ ಕಾರ್ಯಕ್ರಮವೊಂದರಲ್ಲಿ ಭಾಗವಹಿಸಿ ಮಾತನಾಡಿದ ಅವರು, ನಿಮ್ಮ ಸಿಎಂ ಹೆದರುವುದೂ ಇಲ್ಲ, ಬಳಲಿಕೆ ಮತ್ತು ಸೋಲಿನಿಂದ ಹಿಂದೆ ಸರಿಯುವುದೂ ಇಲ್ಲ. ದೆಹಲಿಗೆ ಸಿಗಬೇಕಾದ ಹಕ್ಕು ಸಿಗುವವರೆಗೂ ಹೋರಾಡುತ್ತೇನೆ. ನಿಮ್ಮೊಂದಿಗಿರುತ್ತೇನೆ. ಇದು ನನ್ನ ದೃಢನಿಶ್ಚಯ ಎಂದು ಹೇಳಿದ್ದಾರೆ. ಜನ ಸಂವಾದ ಕಾರ್ಯಕ್ರಮದಲ್ಲಿ ವ್ಯಕ್ತಿಯೊಬ್ಬ ರೇಖಾ ಅವರ ಮೇಲೆ ಹಲ್ಲೆ ನಡೆಸಿದ್ದ. ಇದರಿಂದಾಗಿ ರೇಖಾ ಗುಪ್ತಾ ಅವರ ಕೈ, ಭುಜ ಮತ್ತು ತಲೆಗೆ ಪೆಟ್ಟಾಗಿತ್ತು. ಆರೋಪಿಯನ್ನು ಗುಜರಾತ್‌ನ ರಾಜ್‌ಕೋಟ್ ನಿವಾಸಿ ಸಕರಿಯಾ ರಾಜೇಶ್‌ಭಾಯಿ ಖಿಮ್ಜಿಭಾಯಿ ಎಂದು ಗುರುತಿಸಲಾಗಿದೆ. ಹತ್ಯೆ ಯತ್ನ ಆರೋಪದ ಮೇಲೆ ಆತನನ್ನು ಪೊಲೀಸರು ಬಂಧಿಸಿದ್ದಾರೆ.

### ಪಾರ್ಕಿಂಗ್ ಜಾಗಕ್ಕಾಗಿ ಜಟಾಪಟಿ; ಶಿಕ್ಷಕರೊಬ್ಬರ ಕೊಲೆಯಲ್ಲಿ ಅಂತ್ಯ

**ವಾರಾಣಸಿ:** ವಾಹನ ನಿಲುಗಡೆಗಾಗಿ ಉತ್ತರ ಪ್ರದೇಶದ ವಾರಾಣಸಿಯಲ್ಲಿ ಶಿಕ್ಷಕರೊಬ್ಬರೊಂದಿಗೆ ವಾಗ್ವಾದ ನಡೆಸಿದ ಮೂವರು ಅವರನ್ನು ಕೊಲೆ ಮಾಡಿದ್ದಾರೆ. ಕೊಲೆಯಾದ ಪ್ರವೀಣ್ ಜಾ (48) ಅವರು ಪ್ರತಿಷ್ಠಿತ ಖಾಸಗಿ ಶಾಲೆಯಲ್ಲಿ ಶಿಕ್ಷಕರಾಗಿ ಕೆಲಸ ಮಾಡುತ್ತಿದ್ದರು. ಕೊಲೆ ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ.

ರಾತ್ರಿ ಪಾರ್ಕಿಂಗ್ ಸ್ಥಳಕ್ಕಾಗಿ ಪ್ರವೀಣ್, ಆದರ್ಶ ಸಿಂಗ್ ಎಂಬುವವರ ನಡುವೆ ಜಗಳ ನಡೆದಿದೆ. ಇದು ವಿಕೋಪಕ್ಕೆ ತಿರುಗಿದ ಪರಿಣಾಮ ಆದರ್ಶ್ ಅವರೊಂದಿಗೆ ಸೇರಿಕೊಂಡ ಇಬ್ಬರು ಪ್ರವೀಣ್ ಮೇಲೆ ಇಟ್ಟಿಗೆ ಮತ್ತು ಕಬ್ಬಿಣದ ಸರಳಿನಿಂದ ಹಲ್ಲೆ ನಡೆಸಿದ್ದಾರೆ.

ಗಂಭೀರವಾಗಿ ಗಾಯಗೊಂಡ ಪ್ರವೀಣ್ ಅವರನ್ನು ಆಸ್ಪತ್ರೆ ದಾಖಲಿಸಲಾಯಿತು. ಆದರೆ ಅವರು ಅದಾಗಾಗಲೇ ಮೃತಪಟ್ಟಿರುವುದಾಗಿ ವೈದ್ಯರು ತಿಳಿಸಿದ್ದಾರೆ ಎಂದು ಡಿವೈಎಸ್‌ಪಿ ಟಿ. ಸರವಣನ್ ತಿಳಿಸಿದ್ದಾರೆ. ಪ್ರವೀಣ್ ಅವರ ಕುಟುಂಬದವರ ದೂರಿನ ಆಧಾರದಲ್ಲಿ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

### ಸರ್ಕಾರದ ಹಣ ದುರುಪಯೋಗ ಆರೋಪ: ವಿಕ್ರಮ್‌ಸಿಂಘೆ ಬಂಧನ

**ಕೊಲಂಬೊ:** ಸರ್ಕಾರದ ನಿಧಿಯನ್ನು ದುರುಪಯೋಗ ಮಾಡಿಕೊಂಡ ಆರೋಪದ ಮೇಲೆ ಶ್ರೀಲಂಕಾದ ಮಾಜಿ ಅಧ್ಯಕ್ಷ ರಾನಿಲ್ ವಿಕ್ರಮ್‌ಸಿಂಘೆ ಅವರನ್ನು ಅಪರಾಧ ತನಿಖಾ ವಿಭಾಗ ಬಂಧಿಸಿದೆ. 2023ರ ಸೆ.ನಲ್ಲಿ ವಿಕ್ರಮ್ ಸಿಂಘೆ ಅವರು ಇಂಗ್ಲೆಂಡ್‌ಗೆ ಪ್ರಯಾಣಿಸಲು ಸಾರ್ವಜನಿಕ ನಿಧಿಯ ಹಣವನ್ನು ಬಳಸಿದ್ದಾರೆ ಎಂದು ಆರೋಪಿಸಲಾಗಿದೆ. ಸಿಂಘೆ ಅವರು ಅಮೆರಿಕದಲ್ಲಿ ಅಧಿಕೃತವಾಗಿ ಸಮಾರಂಭವೊಂದರಲ್ಲಿ ಭಾಗಿಯಾಗಿದ್ದರು. ಅಲ್ಲಿಂದ ಬಂದ ಬಳಿಕ ಖಾಸಗಿ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಇಂಗ್ಲೆಂಡ್‌ಗೆ ತೆರಳಿದ್ದರು. ತಮ್ಮ ಈ ಪ್ರವಾಸಕ್ಕೆ ಸಾರ್ವಜನಿಕ ನಿಧಿಗಾಗಿ ಮೀಸಲಿಟ್ಟಿದ್ದ ಸರ್ಕಾರದ ಹಣವನ್ನು ಬಳಸಿಕೊಂಡಿದ್ದಾರೆ ಎಂದು ಆರೋಪಿಸಲಾಗಿದೆ. ಸಿಂಘೆ, 2022ರ ಜುಲೈನಿಂದ 2024ರ ಸೆಪ್ಟೆಂಬರ್ ವರೆಗೆ ಶ್ರೀಲಂಕಾದ ಅಧ್ಯಕ್ಷರಾಗಿದ್ದರು. ದೇಶದ ಆರ್ಥಿಕ ಪರಿಸ್ಥಿತಿಯ ವಿರುದ್ಧ ನಡೆಯುತ್ತಿದ್ದ ಪ್ರತಿಭಟನೆಯಿಂದಾಗಿ ಗೊಟಬಯಾ ರಾಜಪಕ್ಸೆ ಅವರು ಹುದ್ದೆಗೆ ರಾಜೀನಾಮೆ ನೀಡಿದ್ದರು. ಹೀಗಾಗಿ ಉಳಿದ ಅವಧಿಯನ್ನು ಪೂರೈಸಲು ಸಿಂಘೆ ಅವರನ್ನು ಅಧ್ಯಕ್ಷರನ್ನಾಗಿ ಮಾಡಲಾಗಿತ್ತು. ಸಿಂಘೆ ಅವರು ಆರು ಬಾರಿ ಶ್ರೀಲಂಕಾದ ಪ್ರಧಾನಿಯಾಗಿ ಕಾರ್ಯನಿರ್ವಹಿಸಿದ್ದಾರೆ.

### ಷರತ್ತಿಗೆ ಒಪ್ಪದಿದ್ದರೆ ಗಾಜಾ ನಗರ ನಾಶ: ಇಸ್ರೇಲ್ ಎಚ್ಚರಿಕೆ

**ದಾರ್ ಅಲ್-ಬಲಾ:** ಹಮಾಸ್ ಬಂಡುಕೋರರು ಇಸ್ರೇಲ್ ಷರತ್ತುಗಳಿಗೆ ಒಪ್ಪದಿದ್ದರೆ ಗಾಜಾ ನಗರವನ್ನೇ ನಾಶ ಮಾಡಬೇಕಾಗುತ್ತದೆ ಎಂದು ಇಸ್ರೇಲ್ ರಕ್ಷಣಾ ಸಚಿವ ಕಟ್ಸ್ ಶುಕ್ರವಾರ ಎಚ್ಚರಿಸಿದ್ದಾರೆ. ಗಾಜಾ ಸಹ ರಫಾಹ್ ಮತ್ತು ಬೈತ್ ಹನೌನ್ ರೀತಿ ಭಗ್ನಾವಶೇಷವಾಗಲಿದೆ ಎಂದು ಅವರು ಹೇಳಿದ್ದಾರೆ. ಗಾಜಾ ನಗರವನ್ನು ವಶಕ್ಕೆ ಪಡೆಯಲು ಮಹತ್ವದ ಕಾರ್ಯಾಚರಣೆ ನಡೆಸಲು ಸೇನೆಗೆ ಪರಮಾಧಿಕಾರ ನೀಡಲಾಗಿದೆ ಎಂದು ಪ್ರಧಾನಿ ಬೆಂಜಮಿನ್ ನೆತನ್ಯಾಹು ಅವರು ಹೇಳಿಕೆ ನೀಡಿದ ಬಳಿಕ ಈ ಎಚ್ಚರಿಕೆ ನೀಡಿದ್ದಾರೆ. ಗಾಜಾದಲ್ಲಿ ಕೊಲೆ, ಅತ್ಯಾಚಾರ ನಡೆಸುವ ಹಮಾಸ್ ಬಂಡುಕೋರರಿಗೆ ಶೀಘ್ರದಲ್ಲೇ ನರಕದ ಬಾಗಿಲು ತೆರೆಯಲಿದೆ ಎಂದೂ ಅವರು ಹೇಳಿದ್ದಾರೆ.

**ಗಾಜಾದಲ್ಲಿ ಕ್ಷಾಮ; ಐಪಿಸಿ:** ಗಾಜಾದಲ್ಲಿ ಕ್ಷಾಮ ತಲೆದೋರಿದೆ. ಕದನ ವಿರಾಮ ಘೋಷಣೆಯಾಗದಿದ್ದರೆ ಮತ್ತು ಮಾನವೀಯ ನೆರವು ನೀಡಲು ಇರುವ ನಿರ್ಬಂಧ ಅಂತ್ಯಗೊಳ್ಳದಿದ್ದರೆ ಇತರ ಪ್ರದೇಶಗಳಿಗೂ ಕ್ಷಾಮ ಹಬ್ಬುವ ಸಾಧ್ಯತೆ ಇದೆ ಆಹಾರ ಬಿಕ್ಕಟ್ಟು ಕುರಿತ ಸಂಸ್ಥೆ ಎಚ್ಚರಿಸಿದೆ. ಸಮಗ್ರ ಆಹಾರ ಭದ್ರತಾ ವರ್ಗೀಕರಣ (ಐಪಿಸಿ) ಸಂಸ್ಥೆಯು ಇಸ್ರೇಲ್‌ನಿಂದ ನಿರಂತರ ಆಕ್ರಮಣ ಆಹಾರ ಮತ್ತು ಮಾನವೀಯ ನೆರವಿಗೆ ನಿರ್ಬಂಧ ವ್ಯಾಪಕ ಸ್ಥಳಾಂತರ ಉತ್ಪಾದನೆಯ ಕುಸಿತವು ಪ್ಯಾಲೆಸ್ಟೀನಿಯನ್ನರನ್ನು ಹಸಿವು ಬರಗಾಲಕ್ಕೆ ದೂಡಿದೆ ಎಂದು ಹೇಳಿದೆ. 5 ಲಕ್ಷಕ್ಕೂ ಅಧಿಕ ಮಂದಿ ಅತ್ಯಂತ ಹಸಿವಿನಿಂದ ನಲುಗುತ್ತಿದ್ದಾರೆ ಹಲವರು ಅಪೌಷ್ಠಿಕತೆಯಿಂದ ಸಾಯುವ ಹಂತ ತಲುಪಿದ್ದಾರೆ ಎಂದು ಐಪಿಸಿ ಹೇಳಿದೆ.



# ಬಿಗ್ ಬಾಸ್ ಶೋಗೆ ಬರ್ತಿದ್ದಾರೆ WWE ಲೆಜೆಂಡ್ ಅಂಡರ್‌ಟೇಕರ್

ಸಲ್ಮಾನ್ ಖಾನ್ ನೇತೃತ್ವದಲ್ಲಿ ಆರಂಭವಾಗಲಿರುವ 'ಬಿಗ್ ಬಾಸ್ ಸೀಸನ್ 19 ಶೋ ಬಗ್ಗೆ ಸಾಕಷ್ಟು ನಿರೀಕ್ಷೆ ಇಟ್ಟುಕೊಳ್ಳಲಾಗಿದೆ. ಈ ಬಾರಿ ಸಾಕಷ್ಟು ಹೊಸತನವನ್ನು ಕಿರುತೆರೆ ವೀಕ್ಷಕರಿಗೆ ನೀಡಲು ಬಿಗ್ ಬಾಸ್ ತಂಡ ರೆಡಿ ಆಗಿದೆ. ಅದಕ್ಕೆ ತಕ್ಕಂತೆ ವಿಶ್ವವಿಖ್ಯಾತ WWE ಲೆಜೆಂಡ್ 'ದಿ ಅಂಡರ್‌ಟೇಕರ್' ಅವರನ್ನು ಈ ಬಾರಿ ಬಿಗ್ ಬಾಸ್ ಮನೆಗೆ ಕರೆತರುವುದಕ್ಕೆ ಸಿದ್ಧತೆ ಮಾಡಿಕೊಳ್ಳಲಾಗಿದೆಯಂತೆ. ವರ್ಲ್ಡ್ ರೆಸ್ಲಿಂಗ್ ಎಂಟರ್‌ಟೇನ್‌ಮೆಂಟ್ ಕ್ಷೇತ್ರದಲ್ಲಿ ಫೇಮಸ್ ಆಗಿರುವ ಅಂಡರ್‌ಟೇಕರ್ ಈಗ ಬಿಗ್ ಬಾಸ್ ಶೋಗೆ ಕಾಲಿಡುವುದಕ್ಕೆ ಸಜ್ಜಾಗಿದ್ದಾರೆ ಎಂಬ ಮಾತುಗಳು ಕೇಳಿಬಂದಿವೆ. WWEನಲ್ಲಿ ದಿ ಅಂಡರ್‌ಟೇಕರ್ ಎಂದೇ ಫೇಮಸ್ ಆಗಿರುವ ಇವರ ಮೂಲ ಹೆಸರು ಮಾರ್ಕ್ ವಿಲಿಯಂ ಕ್ಯಾಲವೆ. ನಾಲ್ಕು ಬಾರಿ WWE ಚಾಂಪಿಯನ್‌ಶಿಪ್, 3 ಬಾರಿ ವರ್ಲ್ಡ್ ಹೆವಿವೇಯ್ಟ್ ಚಾಂಪಿಯನ್‌ಶಿಪ್, 1 ಬಾರಿ ಹಾರ್ಡ್‌ಕೋರ್ ಚಾಂಪಿಯನ್‌ಶಿಪ್ ಮತ್ತು 6 ಬಾರಿ ವರ್ಲ್ಡ್ ಟ್ಯಾಗ್ ಟೀಮ್ ಚಾಂಪಿಯನ್‌ಶಿಪ್ ಗೆದ್ದಿರುವ ಈ ಮಹಾನ್ ಸಾಧಕನಿಗೆ ಈಗ 60 ವರ್ಷ ವಯಸ್ಸು. 90ರ ಮಕ್ಕಳಿಗೆ ಅಂಡರ್‌ಟೇಕರ್ ಎಂದರೆ ಸಿಕ್ಕಾಪಟ್ಟೆ ಪ್ರೀತಿ.

**ಇವರಿಗೆ ಸಂಭಾವನೆ ಎಷ್ಟು:** ಸದ್ಯಕ್ಕೆ ಸಿಕ್ಕಿರುವ ಮಾಹಿತಿ ಪ್ರಕಾರ, ಅಂಡರ್‌ಟೇಕರ್ ಅವರು ಬಿಗ್ ಬಾಸ್ 19 ಶೋನಲ್ಲಿ ಪೂರ್ಣಪ್ರಮಾಣದ ಸ್ಪರ್ಧಿಯಾಗಿ ಭಾಗಿಯಾಗುವುದಿಲ್ಲ. ಬದಲಿಗೆ ಅವರನ್ನು ವೈಲ್ಡ್ ಕಾರ್ಡ್ ಸ್ಪರ್ಧಿಯಾಗಿ ಬಿಗ್ ಬಾಸ್ ಮನೆಯೊಳಗೆ ಕಳುಹಿಸುವುದಕ್ಕೆ ನಿರ್ಧರಿಸಲಾಗಿದೆ. ಬಿಗ್ ಬಾಸ್ ನಲ್ಲಿ ಕಾಣಿಸಿಕೊಳ್ಳಲು ದಿ ಅಂಡರ್ ಟೇಕರ್ ಎಷ್ಟು ಹಣ ಪಡೆಯಲಿದ್ದಾರೆ ಎಂಬುದು ಇನ್ನೂ ಬಹಿರಂಗವಾಗಿಲ್ಲ. ಈ ಹಿಂದೆ ಗ್ರೇಟ್ ಖಲಿ ಅವರು ಬಿಗ್ ಬಾಸ್ ಶೋಗೆ ಬಂದಾಗ, ವಾರಕ್ಕೆ 50 ಲಕ್ಷ ರೂ. ಪಡೆದಿದ್ದರು. ಇದೇ ಈವರೆಗಿನ ಅತ್ಯಧಿಕ ಮೊತ್ತವಾಗಿದೆ. ಆದರೆ ಅಂಡರ್‌ಟೇಕರ್‌ಗೆ ಅದಕ್ಕಿಂತಲೂ ಅಧಿಕ ಮೊತ್ತ ಸಿಗುವ ಸಾಧ್ಯತೆ ಇದೆ. ಒಂದುವೇಳೆ ಸಿಕ್ಕರೆ, ಅಂಡರ್‌ಟೇಕರ್ ಆ ವಿಚಾರದಲ್ಲಿ ಹೊಸ ದಾಖಲೆ ಬರೆಯಲಿದ್ದಾರೆ. ಸದ್ಯ ಅಂಡರ್‌ಟೇಕರ್ ಅವರನ್ನು ಒಂದು ವಾರ ಅಥವಾ 10 ದಿನಗಳ ಕಾಲ ಬಿಗ್ ಬಾಸ್ ಮನೆಯಲ್ಲಿ ಇರಿಸಿಕೊಳ್ಳುವುದಕ್ಕೆ ಪ್ಲ್ಯಾನ್ ಮಾಡಿಕೊಳ್ಳಲಾಗಿದೆಯಂತೆ.





# ನಿರ್ಮಾಪಕನಿಗೆ ಸಂಕಷ್ಟ

# ಬಾಲಿವುಡ್‌ನಲ್ಲೂ ಜೂ.ಎನ್‌ಟಿಆರ್‌ಗೆ ಸೋಲು

ಟಾಲಿವುಡ್‌ನ ಎಂಗ್ ಟೈಗರ್ ಎಂತಲೇ ಅಭಿಮಾನಿಗಳಿಂದ ಕರೆಸಿಕೊಳ್ಳುವ ನಟ ಜೂ.ಎನ್‌ಟಿಆರ್ ಆರ್‌ಆರ್‌ಆರ್ ಸಿನಿಮಾದ ನಂತರ ದೇವರ ಸಿನಿಮಾದಲ್ಲಿ ನಟಿಸಿದ್ದರು. ದೇವರ ಸಿನಿಮಾ ಅಂದುಕೊಟ್ಟ ಮಟ್ಟಿಗೆ ಹಿಟ್ ಆಗಲಿಲ್ಲ. ಜೂ.ಎನ್‌ಟಿಆರ್ ಅಭಿಮಾನಿಗಳಿಗೆ ಇದರಿಂದ ನಿರಾಸೆ ಉಂಟಾಗಿತ್ತು. ಇದೀಗ ಮತ್ತೊಮ್ಮೆ ತಾರಕ್‌ಗೆ ಹಿನ್ನಡೆಯಾಗಿದೆ. ಜೂ.ಎನ್‌ಟಿಆರ್ ದೇವರ ಸಿನಿಮಾ ಬಳಿಕ ಬಾಲಿವುಡ್‌ನ ವಾರ್-2 ಸಿನಿಮಾದಲ್ಲಿ ನಟಿಸಿದ್ದರು. ವಾರ್-2 ಸಿನಿಮಾ ಕೂಡಾ ಬಂಡವಾಳ ಹೂಡಿದ ನಿರ್ಮಾಪಕನಿಗೆ ಸಂಕಷ್ಟ ತಂದೊಡ್ಡಿದೆ.

ಹೃತಿಕ್ ರೋಷನ್ ಹಾಗೂ ಜೂ.ಎನ್‌ಟಿಆರ್ ನಟಿಸಿದ ವಾರ್-2 ಸಿನಿಮಾ ಇದೇ ಆ.14ಕ್ಕೆ ತೆರೆಕಂಡಿತ್ತು. ತೆರೆಕಂಡು ಒಂದು ವಾರವಾದರೂ ಸಿನಿಮಾ 200 ಕೋಟಿ ಗಳಿಕೆ ಕಂಡಿಲ್ಲ. 150 ಕೋಟಿ ಕಲೆಹಾಕುವಲ್ಲಿ ಸಿನಿಮಾ ತೆವಳುತ್ತ ಸಾಗುತ್ತಿದೆ. ಯಶ್‌ರಾಜ್ ಫಿಲಂಸ್ ಸಂಸ್ಥೆ ನಿರ್ಮಾಣ ಮಾಡಿದ್ದ ವಾರ್-2 ಕಲೆಕ್ಷನ್ ಸಿಂಗಲ್ ನಂಬರ್‌ಗೆ ಬಂದು ನಿಂತಿದೆ. ಕಳೆದ ವರ್ಷ ಸೆಪ್ಟೆಂಬರ್‌ನಲ್ಲಿ ತೆರೆಗೆ ಬಂದಿದ್ದ ದೇವರ ಸಿನಿಮಾ ಕೂಡಾ ಸೋತು ಸುಣ್ಣವಾಗಿತ್ತು.

ಈ ವರ್ಷ ತೆರೆಕಂಡ ವಾರ್-2 ಕೂಡ ತಾರಕ್‌ಗೆ ಸಕ್ಸಸ್ ತಂದುಕೊಟ್ಟಿಲ್ಲ. ಒಂದು ಕಡೆ ವಾರ್-2 ಸಿನಿಮಾ ರಿಲೀಸ್ ಆದ ದಿನವೇ ರಜನಿಕಾಂತ್ ನಟನೆಯ ಕೂಲಿ ಸಿನಿಮಾ ಕೂಡ ತೆರೆಗೆ ಬಂದಿತ್ತು. ಇದು ಸಿನಿಮಾದ ಕಲೆಕ್ಷನ್‌ಗೆ ಮುಳುವಾಯ್ತು ಎಂದು ಕೆಲವರ ಅಭಿಪ್ರಾಯವಾದ್ರೆ, ಇನ್ನು ಕೆಲವರು ಸಿನಿಮಾ ಚೆನ್ನಾಗಿಲ್ಲ ಎಂದು ನೇರವಾಗಿ ಜಾಲತಾಣದಲ್ಲಿ ಹಂಚಿಕೊಂಡಿದ್ದಾರೆ. ಒಟ್ಟಿನಲ್ಲಿ ಬಾಲಿವುಡ್‌ನಲ್ಲಿ ಅದೃಷ್ಟ ಪರೀಕ್ಷೆಗಿಳಿದ ತಾರಕ್‌ಗೆ ಸೋಲಿನ ಪಟ್ಟ ಸಿಕ್ಕಿದೆ.



# ಟಾಲಿವುಡ್‌ನಲ್ಲಿ ಮಿಂಚುತ್ತಿರುವ ಪ್ರಿಯಾ ಹೆಗ್ಡೆ

ಪ್ರತಿಭಾವಂತ ಕನ್ನಡ ನಟಿಯರು ಇಲ್ಲಿ ಒಳ್ಳೆಯ ಸಿನಿಮಾಗಳು ಸಿಗದೆ ಪರಭಾಷೆಗೆ ಹೋಗಿ ನ್ಯಾಷನಲ್ ಕ್ರಶ್ ಆಗಿದ್ದಾರೆ. ಸಂಭಾವನೆಯಲ್ಲೂ ಕನ್ನಡ ನಟಿಯರನ್ನು ಕಡೆಗಣಿಸಿರುವ ಚಿತ್ರರಂಗದಿಂದಾಗಿ ಪರಭಾಷಾ ಸಿನಿಮಾದವರು ಗುರುತಿಸಿ ಅವಕಾಶ ನೀಡುತ್ತಿರುವ ನಟಿಯರಿಗೂ ಇಲ್ಲಿ ಉತ್ತಮ ಆಫರ್ ಸಿಗುತ್ತಿಲ್ಲ. ಅಂತಹ ನಟಿಯರಲ್ಲಿ ಕರಾವಳಿಯ ಮುದ್ದು ಚೆಲುವೆ ಪ್ರಿಯಾ ಹೆಗ್ಡೆ ಕೂಡ ಒಬ್ಬರು. ಪ್ರಿಯಾ ಅವರು ನಟಿಸಿದ ಮೊದಲ ತುಳು ಸಿನಿಮಾ 'ದಗಲ್ ಬಾಜಿಲು' 100 ದಿನಗಳ ಪ್ರದರ್ಶನ ಕಂಡಿದ್ದು, ಕನ್ನಡದಲ್ಲಿ 'ಜಿಲ್ಕ', 'ಕುದ್ರು', 'ಹಗ್ಗ' ಸಿನಿಮಾಗಳಲ್ಲಿ ನಟಿಸಿದ್ದಾರೆ. 'ಉಸಿರು' ಚಿತ್ರದಲ್ಲಿಯೂ ನಟಿಸಿರುವ ಅವರೀಗ ಕನ್ನಡದಿಂದ ತೆಲುಗಿಗೆ ಎಂಟ್ರಿ ಕೊಟ್ಟು ಟಾಲಿವುಡ್ ಸಿನಿ ಪ್ರೇಕ್ಷಕರ ಗಮನ ಸೆಳೆದಿದ್ದಾರೆ. ರಶ್ಮಿಕಾ ಮಂದಣ್ಣ, ಶ್ರೀಲೀಲಾ ಈಗಾಗಲೇ ತೆಲುಗಿನಲ್ಲಿ ಮಿಂಚುತ್ತಿದ್ದಾರೆ. ಅವರಂತೆಯೇ ಟಾಲಿವುಡ್‌ನಲ್ಲಿ ಹೆಚ್ಚೆಚ್ಚು ಅವಕಾಶಗಳನ್ನು ಪಡೆಯುವತ್ತ ಹೆಜ್ಜೆ ಹಾಕುತ್ತಿದ್ದಾರೆ ಪ್ರಿಯಾ ಹೆಗ್ಡೆ. ದೇವರ ದಯೆಯಿಂದ ನಾನು ಮಾಡಿರುವ ಸಿನಿಮಾಗಳಿಗೆಲ್ಲಾ ಪ್ರಶಂಸೆ ಸಿಕ್ಕಿದೆ. ನನ್ನ ಎತ್ತರ ಜಾಸ್ತಿ ಇರುವ ಕಾರಣ ಗ್ಲಾಮರಸ್ ಹುಡುಗಿಯ ಪಾತ್ರಗಳು ಹೆಚ್ಚು ಸಿಗುತ್ತಿವೆ. 'ಉಸಿರು' ಚಿತ್ರದಲ್ಲಿ ಚಾಲೆಂಜಿಂಗ್ ಪಾತ್ರವಿದೆ. ಆದರೆ ನನಗೆ ಹಳ್ಳಿ ಹಿನ್ನೆಲೆಯ ಸಾಂಪ್ರದಾಯಿಕ ಹುಡುಗಿ ಪಾತ್ರ ಮಾಡಲು ಇಷ್ಟ. ಎಲ್ಲಕ್ಕಿಂತ ಹೆಚ್ಚಾಗಿ ನನಗೆ ದರ್ಶನ್ ಜತೆ ಸಿನಿಮಾ ಮಾಡಬೇಕೆಂದು, ಅದರಲ್ಲೂ ಅವರೊಂದಿಗೆ ಹಳ್ಳಿ ಹುಡುಗಿಯಾಗಿ ಕಾಣಿಸಿಕೊಳ್ಳಬೇಕು ಎಂದು ತುಂಬಾ ಆಸೆ ಇದೆ ಎಂದಿದ್ದಾರೆ ಪ್ರಿಯಾ.



# 28ರಂದು ನಿರೂಪಕಿ ಅನುಶ್ರೀ ಮದುವೆ

ಕನ್ನಡದ ಖ್ಯಾತ ನಿರೂಪಕಿ ಅನುಶ್ರೀ ಅವರು ದಾಂಪತ್ಯ ಜೀವನಕ್ಕೆ ಕಾಲಿಡಲು ಸಜ್ಜಾಗಿದ್ದಾರೆ. ಈ ಬಗ್ಗೆ ಕೆಲವೇ ದಿನಗಳ ಹಿಂದೆ ಸುದ್ದಿ ಹೊರಬಿದ್ದಿತ್ತು. ಕೊಡಗು ಮೂಲದ ರೋಷನ್ ಜೊತೆ ಆಯಂಕರ್ ಅನುಶ್ರೀ ಅವರು ಹಸೆಮಣೆ ಏರಲಿದ್ದಾರೆ. ಮದುವೆಗೆ ದಿನಾಂಕ ಕೂಡ ನಿಗದಿ ಆಗಿದೆ. ಆಗಸ್ಟ್ 28ರಂದು ಅನುಶ್ರೀ ಮತ್ತು ರೋಷನ್ ಅವರ ಮದುವೆ ನಡೆಯಲಿದೆ. ಈಗಾಗಲೇ ಆಪ್ತರಿಗೆ ಮದುವೆ ಆಮಂತ್ರಣ ಪತ್ರಿಕೆ ನೀಡಲಾಗಿದೆ. ಅನುಶ್ರೀ ಮದುವೆಯ ಆಹ್ವಾನ ಪತ್ರಿಕೆ ತುಂಬಾ ಸರಳವಾಗಿದೆ.

'ನೀವೆಲ್ಲ ಕೇಳುತ್ತಿದ್ದ ಏಕೈಕ ಪ್ರಶ್ನೆಗೆ ಈಗ ಉತ್ತರ. ಏಕಾಂಗಿ ನಿರೂಪಣೆಯ ನಂತರ ಅರ್ಧಾಂಗಿ ಆಗುವ ಹೊಸ ಮನ್ವಂತರ' ಎಂದು ಆಹ್ವಾನ ಪತ್ರಿಕೆಯಲ್ಲಿ ಬರೆಯಲಾಗಿದೆ. ಆ.28ಕ್ಕೆ ರೋಷನ್ ಜೊತೆ ನಿರೂಪಕಿ ಅನುಶ್ರೀ ಸಪ್ತಪದಿ ತುಳಿಯಲಿದ್ದಾರೆ. ಅಂದು ಬೆಳಗ್ಗೆ 10.56ಕ್ಕೆ ಮಾಂಗಲ್ಯ ಧಾರಣೆ ಆಗಲಿದೆ. ಬೆಂಗಳೂರಿನ ಹೊರವಲಯದ ರೆಸಾರ್ಟ್‌ನಲ್ಲಿ ಮದುವೆ ನಡೆಯಲಿದೆ.

ಬಣ್ಣದ ಲೋಕದಲ್ಲಿ ಅನುಶ್ರೀ ಅವರು ಹಲವು ವರ್ಷಗಳಿಂದ ಆ್ಯಕ್ಟೀವ್ ಆಗಿದ್ದಾರೆ. ಕಿರುತೆರೆಯ ಅನೇಕ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನಡೆಸಿಕೊಟ್ಟಿದ್ದಾರೆ.

# ರಮೋಲಾ ವಿರುದ್ಧ ಫಿಲ್ಮ್ ಚೇಂಬರ್‌ಗೆ ದೂರು

ಕಿರುತೆರೆ ಧಾರಾವಾಹಿ ಹಾಗೂ ಭರ್ಜರಿ ಬ್ಯಾಚುಲರ್ಸ್ ಸೀಸನ್ 2 ರಿಯಾಲಿಟಿ ಶೋನಲ್ಲಿ ಸ್ಪರ್ಧಿಸಿ ಕನ್ನಡಿಗರ ಮನೆ ಮಾತಾಗಿರುವ ರಮೋಲಾ ವಿರುದ್ಧ ಫಿಲ್ಮ್ ಚೇಂಬರ್ ನಲ್ಲಿ ದೂರು ದಾಖಲಿಸಿದ್ದಾರೆ. ರಿಚ್ಚಿ ಸಿನಿಮಾದ ನಾಯಕಿಯ ಪಾತ್ರದಲ್ಲಿ ಕಾಣಿಸಿಕೊಂಡಿರುವ ರಮೋಲಾ, ಸಿನಿಮಾ ಪ್ರಮೋಷನ್‌ಗೆ ಬರುತ್ತಿಲ್ಲ ಎಂದು ನಿರ್ಮಾಪಕರು ದೂರು ನೀಡಿದ್ದಾರೆ. ''ನಮ್ಮ ಚಿತ್ರದಲ್ಲಿ ಇಬ್ಬರು ನಾಯಕ ನಟಿಯರಿದ್ದಾರೆ. ಒಬ್ಬರು ಮಾನ್ವಿತಾ ಹರೀಶ್ ಹಾಗೂ ಇನ್ನೊಬ್ಬರು ರಮೋಲಾ. ರಮೋಲಾ ಅವರು ಮೇಜರ್ ರೋಲ್ ಮಾಡಿದ್ದಾರೆ. ಪ್ರಮೋಷನ್‌ಗೆ ಬನ್ನಿ, ಸಿನಿಮಾಗೆ ಸಪೋರ್ಟ್ ಮಾಡಿ ಅಂತ ನಾವು ಫೋನ್ ಮಾಡುತ್ತಲೇ ಇದ್ದೇವೆ, ಆದರೆ ಅವರು ರೆಸ್ಪಾನ್ಸ್ ಮಾಡುತ್ತಲೇ ಇಲ್ಲ. ಒಬ್ಬ ನಿರ್ಮಾಪಕ ಕಷ್ಟಪಟ್ಟು ಎಲ್ಲಿಂದಲೋ ಸಾಲ ತಂದು ಸಿನಿಮಾ ಮಾಡಿರುತ್ತಾನೆ. ನಮಗೆ ಪ್ರಮೋಷನ್ ಮಾಡಿ ಕೊಡಿ ಅಂತ ನಾವು ಕೇಳುತ್ತಿದ್ದೇವೆ. ಒಂದು ಸಿನಿಮಾದಲ್ಲಿ ಆಕ್ಟಿಂಗ್ ಮಾಡಿದ ಮೇಲೆ ಪ್ರಮೋಷನ್ ಮಾಡೋದು ಅವರ ಕರ್ತವ್ಯ. ಒಬ್ಬ ನಿರ್ಮಾಪಕ ಗೆದ್ದರೆ, ಎಷ್ಟೋ ಜನಕ್ಕೆ ಕೆಲಸ ಸಿಗುತ್ತದೆ. ಇನ್ನೊಂದು ಎರಡ್ಮೂರು ಸಿನಿಮಾ ಮಾಡುತ್ತಾನೆ. ಹೀಗೆ ಮಾಡಿದ್ರೆ, ಹೇಗೆ? ಎಂದು ರಿಚ್ಚಿ ಸಿನಿಮಾ ನಿರ್ಮಾಪಕ ಹೇಮಂತ್ ರಿಚ್ಚಿ ಫಿಲ್ಮ್ ಚೇಂಬರ್‌ಗೆ ದೂರು ನೀಡಿದ್ದಾರೆ.

# ಆಸ್ಟ್ರೇಲಿಯಾ ವಿರುದ್ಧ ಸತತ 5ನೇ ಏಕದಿನ ಸರಣಿ ಗೆದ್ದ ದ.ಆಫ್ರಿಕಾ



ವಿಶ್ವ ಚಾಂಪಿಯನ್ ಆಸ್ಟ್ರೇಲಿಯಾ ತವರಿನಲ್ಲಿ ಹೀನಾಯ ಸೋಲು ಎದುರಿಸಿದೆ. ನಾಯಕ ಪ್ಯಾಟ್ ಕಮ್ಮಿನ್ಸ್, ಮಿಚೆಲ್ ಸ್ಟಾರ್ಕ್, ಸ್ಟೀವ್ ಸ್ಮಿತ್ ಮತ್ತು ಗ್ಲೆನ್ ಮ್ಯಾಕ್ಸ್‌ವೆಲ್‌ರಂತಹ ಶ್ರೇಷ್ಠ ಆಟಗಾರರಿಲ್ಲದೆ ದಕ್ಷಿಣ ಆಫ್ರಿಕಾವಿರುದ್ಧ ಏಕದಿನ ಸರಣಿಯನ್ನು ಆಡಿದ ಆಸ್ಟ್ರೇಲಿಯಾ, ಏಕದಿನ ಸರಣಿಯಲ್ಲಿ ಸತತ ಎರಡನೇ ಪಂದ್ಯವನ್ನು ಸೋತು ಸರಣಿಯನ್ನು ಕಳೆದುಕೊಂಡಿದೆ. ಸರಣಿಯ ಎರಡನೇ ಪಂದ್ಯದಲ್ಲಿ, ದಕ್ಷಿಣ ಆಫ್ರಿಕಾ ಮತ್ತೊಮ್ಮೆ ಆತಿಥೇಯ ಆಸ್ಟ್ರೇಲಿಯಾವನ್ನು 84 ರನ್‌ಗಳಿಂದ ಏಕಪಕ್ಷೀಯ ರೀತಿಯಲ್ಲಿ ಸೋಲಿಸಿ 3 ಪಂದ್ಯಗಳ ಏಕದಿನ ಸರಣಿಯನ್ನು 2-0 ಅಂತರದಿಂದ ವಶಪಡಿಸಿಕೊಂಡಿದೆ.

**ಟಿ20 ಗೆದ್ದು ಏಕದಿನ ಸರಣಿ ಸೋತ ಆಫ್ರಿಕಾ:** ಏಕದಿನ ಸರಣಿಗೂ ಮುನ್ನ ನಡೆದಿದ್ದ ಟಿ20 ಸರಣಿಯನ್ನು ಆಸ್ಟ್ರೇಲಿಯಾ 2-1 ಅಂತರದಿಂದ ಗೆದ್ದುಕೊಂಡಿತ್ತು. ಆದರೆ ಏಕದಿನ ಸರಣಿಯಲ್ಲಿನ ಸವಾಲು ಹೆಚ್ಚು ಕಷ್ಟಕರವಾಗಿತ್ತು. ಏಕೆಂದರೆ ಮೊದಲನೆಯದಾಗಿ ನಾಯಕ ಪ್ಯಾಟ್ ಕಮ್ಮಿನ್ಸ್ ಮತ್ತು ಸ್ಟಾರ್ಕ್‌ರಂತಹ ಅನುಭವಿ ಬೌಲರ್‌ಗಳಿಗೆ ಈ ಸರಣಿಯಿಂದ ವಿಶ್ರಾಂತಿ ನೀಡಲಾಯಿತು. ಎರಡನೆಯದಾಗಿ, ಸ್ಟೀವ್ ಸ್ಮಿತ್ ಮತ್ತು ಮ್ಯಾಕ್ಸ್‌ವೆಲ್‌ರಂತಹ ಸ್ಟಾರ್ ಬ್ಯಾಟ್ಸ್‌ಮನ್‌ಗಳು ತಿಂಗಳ ಹಿಂದೆ ಈ ಸಸ್ವರೂಪದಿಂದ ನಿವೃತ್ತಿ ಘೋಷಿಸಿದ್ದರು. ಅಂತಹ ಪರಿಸ್ಥಿತಿಯಲ್ಲಿ, ಬದಲಾವಣೆಯ ಹಂತದಲ್ಲಿ ಆಸ್ಟ್ರೇಲಿಯಾಕ್ಕೆ ಈ ಸರಣಿ ಸವಾಲಿನದ್ದಾಗಿತ್ತು. ಆದಾಗ್ಯೂ, ಉತ್ತಮ ಲಯದಲ್ಲಿ ಕಾಣುತ್ತಿದ್ದ ದಕ್ಷಿಣ ಆಫ್ರಿಕಾ, ಆಸ್ಟ್ರೇಲಿಯಾವನ್ನು ಮಣಿಸುವಲ್ಲಿ ಯಶಸ್ವಿಯಾಗಿದೆ.

**277 ರನ್‌ಗಳ ಗುರಿ ನೀಡಿದ ಆಫ್ರಿಕಾ:** ಸರಣಿಯ ಮೊದಲ ಪಂದ್ಯದಲ್ಲಿ 98 ರನ್‌ಗಳ ಭರ್ಜರಿ ಗೆಲುವು ಸಾಧಿಸಿದ್ದ ದಕ್ಷಿಣ ಆಫ್ರಿಕಾ ತಂಡಕ್ಕೆ ಎರಡನೇ ಏಕದಿನ ಪಂದ್ಯದಲ್ಲಿ ಉತ್ತಮ ಆರಂಭ ಸಿಗಲಿಲ್ಲ. ಇಬ್ಬರೂ ಆರಂಭಿಕರು ಕೇವಲ 23 ರನ್‌ಗಳಿಗೆ ಪೆವಿಲಿಯನ್ ಸೇರಿಕೊಂಡರು. ಆದರೆ ಇಲ್ಲಿಂದ ಮ್ಯಾಥ್ಯೂ ಬ್ರೆಟ್ಜ್ಕೆ, ಟ್ರಿಸ್ಟನ್ ಸ್ಟಬ್ಸ್ ಅವರೊಂದಿಗೆ ಇನ್ನಿಂಗ್ಸ್ ನಿಭಾಯಿಸಿ 89 ರನ್‌ಗಳ ಉತ್ತಮ ಜೊತೆಯಾಟ ಕಟ್ಟಿದರು. ಇದರೊಂದಿಗೆ ತಮ್ಮ ಅರ್ಧಶತಕಗಳನ್ನು ಸಹ ಪೂರ್ಣಗೊಳಿಸಿದರು. ಆದಾಗ್ಯೂ, ಇಬ್ಬರೂ ಬ್ಯಾಟ್ಸ್‌ಮನ್‌ಗಳು ತಮ್ಮ ಶತಕಗಳನ್ನು ಪೂರ್ಣಗೊಳಿಸಲು ಸಾಧ್ಯವಾಗಲಿಲ್ಲ. ಈ ಇಬ್ಬರನ್ನು ಹೊರತುಪಡಿಸಿ, ಟೋನಿ ಡಿಜಾರ್ಜ್ ಕೂಡ 38 ರನ್‌ಗಳ ಕಾಣಿಕೆ ನೀಡಿದರು. ಉಳಿದಂತೆ ಕೆಳ ಕ್ರಮಾಂಕದ ಬ್ಯಾಟರ್‌ಗಳ ಸಹಾಯದಿಂದ ಆಫ್ರಿಕಾ ತಂಡ 277 ರನ್‌ಗಳ ಸವಾಲಿನ ಗುರಿ ನೀಡಿತು. ಆಸ್ಟ್ರೇಲಿಯಾ ಪರ, ಲೆಗ್-ಸ್ಪಿನ್ನರ್ ಆಡಮ್ ಜಂಪಾ ಗರಿಷ್ಠ 3 ವಿಕೆಟ್‌ಗಳನ್ನು ಪಡೆದರು.

**ಆಸೀಸ್‌ಗೆ ಆರಂಭಿಕ ಆಘಾತ:** ಈ ಗುರಿ ಬೆನ್ನಟ್ಟಿದ ಆಸ್ಟ್ರೇಲಿಯಾ ತಂಡ ಆರಂಭದಲ್ಲೇ ಆಘಾತ ಎದುರಿಸಿತು. 10 ಓವರ್‌ಗಳಲ್ಲಿ ತಂಡವು ನಾಯಕ ಮಿಚೆಲ್ ಮಾರ್ಷ್ ಸೇರಿದಂತೆ 3 ವಿಕೆಟ್‌ಗಳನ್ನು ಕಳೆದುಕೊಂಡಿತು. ನಂತರ ಕ್ಯಾಮರೂನ್ ಗ್ರೀನ್ ಮತ್ತು ಜೋಶ್ ಇಂಗ್ಲಿಸ್ 66 ರನ್‌ಗಳ ಜೊತೆಯಾಟವಾಡಿ ಇನ್ನಿಂಗ್ಸ್ ಕಟ್ಟುವ ಕೆಲಸ ಮಾಡಿದರು. ಆದರೆ ತಂಡವು 100 ರನ್‌ಗಳ ಸ್ಕೋರ್ ದಾಟಿದ ತಕ್ಷಣ ಮತ್ತೆರಡು ವಿಕೆಟ್‌ಗಳು ಪತನಗೊಂಡವು. ಮೊದಲು ಗ್ರೀನ್ (35) ಪೆವಿಲಿಯನ್‌ಗೆ ಮರಳಿದರೆ ಅಲೆಕ್ಸ್ ಕ್ಯಾರಿ ಕೂಡ ಸ್ವಲ್ಪ ಸಮಯದ ನಂತರ ನಿರ್ಗಮಿಸಿದರು. ಇದೆಲ್ಲದರ ನಡುವೆ, ಏಕಾಂಗಿ ಹೋರಾಟ ನೀಡಿದ ಇಂಗ್ಲಿಸ್ ಅರ್ಧಶತಕದ ಇನ್ನಿಂಗ್ಸ್ ಕೂಡ ಆಡಿದರು. ಆದರೆ ಇನ್ನೊಂದು ಕಡೆಯಿಂದ ಅವರಿಗೆ ಹೆಚ್ಚಿನ ಬೆಂಬಲ ಸಿಗಲಿಲ್ಲ.

**ಸತತ 5ನೇ ಏಕದಿನ ಸರಣಿ ಗೆಲುವು:** ಈ ವೇಳೆ ದಾಳಿಗಿಳಿದ ದಕ್ಷಿಣ ಆಫ್ರಿಕಾದ ವೇಗಿ ಲುಂಗಿ ಎನ್‌ಗಿಡಿ 34 ಮತ್ತು 38 ನೇ ಓವರ್‌ಗಳ ನಡುವೆ ಕೇವಲ 16 ಎಸೆತಗಳಲ್ಲಿ 4 ವಿಕೆಟ್‌ಗಳನ್ನು ಕಬಳಿಸಿದರು. ಅಂತಿಮವಾಗಿ ಆಸ್ಟ್ರೇಲಿಯಾ ಕೇವಲ 193 ರನ್‌ಗಳಿಗೆ ಆಲೌಟ್ ಆಯಿತು. ಇತ್ತ ಆಫ್ರಿಕಾ ತಂಡಕ್ಕೆ 84 ರನ್‌ಗಳ ಸ್ಮರಣೀಯ ಜಯ ಸಿಕ್ಕಿತು. ಆಫ್ರಿಕಾ ಪರ ಎನ್‌ಗಿಡಿ 5 ವಿಕೆಟ್‌ಗಳನ್ನು ಪಡೆದರು. ಈ ಗೆಲುವಿನೊಂದಿಗೆ ದಕ್ಷಿಣ ಆಫ್ರಿಕಾ ಸತತ 5 ನೇ ಬಾರಿಗೆ ಆಸ್ಟ್ರೇಲಿಯಾ ವಿರುದ್ಧ ಏಕದಿನ ಸರಣಿಯನ್ನು ಗೆದ್ದ ಸಾಧನೆಯನ್ನು ಮಾಡಿತು.

# ಅಯ್ಯರ್ ಬಗ್ಗೆ ಬಿಸಿಸಿಐ ವಿಚಿತ್ರ ಹೇಳಿಕೆ

ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿ ಇತ್ತೀಚೆಗೆ ಏಷ್ಯಾ ಕಪ್ ಟೂರ್ನಿಗೆ ಭಾರತ ತಂಡವನ್ನು ಪ್ರಕಟಿಸಿದೆ. ಈ ಪಂದ್ಯಾವಳಿಗಾಗಿ, ಆಯ್ಕೆದಾರರು ಯುವ ಆಟಗಾರರಿಂದ ತುಂಬಿದ ತಂಡವನ್ನು ಆಯ್ಕೆ ಮಾಡಿದರು. ಆದರೆ ಆಶ್ಚರ್ಯಕರ ಸಂಗತಿಯೆಂದರೆ, ಐಪಿಎಲ್ 2025 ರಲ್ಲಿ ಅದ್ಭುತ ಪ್ರದರ್ಶನ ನೀಡಿದ ಶ್ರೇಯಸ್ ಅಯ್ಯರ್ ಅವರಿಗೆ ಆಯ್ಕೆದಾರರು ಪ್ರಾಮುಖ್ಯತೆ ನೀಡಲಿಲ್ಲ. ಇದು ಸಾಮಾಜಿಕ ಜಾಲತಾಣಗಳಲ್ಲಿ ಗದ್ದಲ ಎಬ್ಬಿದೆ. ಅಲ್ಲದೆ ಭಾರತ ಕೆಲ ಮಾಜಿ ಆಟಗಾರರು ಕೂಡ ಅಯ್ಯರ್ ಅವರನ್ನು ಕಡೆಗಣಿಸಿದ್ದಕ್ಕೆ ಬೇಸರ ಹೊರಹಾಕಿದ್ದಾರೆ.

**ಶ್ರೇಯಸ್ ಅಯ್ಯರ್ ಆಯ್ಕೆ ಆಗದಿರುವುದು ಆಘಾತ:** ಶ್ರೇಯಸ್ ಅಯ್ಯರ್ ಅವರು ಏಷ್ಯಾ ಕಪ್‌ಗೆ ಖಂಡಿತವಾಗಿಯೂ ಆಯ್ಕೆ ಆಗುತ್ತಾರೆ ಎಂದು ನಂಬಲಾಗಿತ್ತು. ಅವರು ಐಪಿಎಲ್ 2025 ರಲ್ಲಿ 604 ರನ್ ಗಳಿಸಿದರು ಮತ್ತು ಸೈಯದ್ ಮುಷ್ತಾಕ್ ಅಲಿ ಟ್ರೋಫಿಯಲ್ಲಿ ಮುಂಬೈ ಪರ 345 ರನ್ ಚಚ್ಚಿದ್ದರು. ಆದರೆ ಅವರಿಗೆ ಏಷ್ಯಾ ಕಪ್ ತಂಡದಲ್ಲಿ ಸ್ಥಾನ ಸಿಗಲಿಲ್ಲ. ಈಗ ಅವರು ಟಿ 20 ವಿಶ್ವಕಪ್‌ಗೆ ಅರ್ಹತೆ ಪಡೆಯಲು ಬಹಳ ಸಮಯ ಕಾಯಬೇಕಾಗಿದೆ. ಟೈಮ್ಸ್ ಆಫ್ ಇಂಡಿಯಾದ ವರದಿಯ ಪ್ರಕಾರ, ಏಷ್ಯಾ ಕಪ್‌ಗೆ ಖಂಡಿತವಾಗಿಯೂ ನಾನು ಸೆಲೆಕ್ಟ್ ಆಗುತ್ತೇನೆ ಎಂದು ಅಯ್ಯರ್ ಆಶಿಸಿದ್ದರು. ಆದರೆ ಇದು ಆಗದಿದ್ದಾಗ ಅವರು ನಿರಾಶೆಗೊಂಡರು.



ಈ ವಿಷಯದ ಬಗ್ಗೆ ಅಜಿತ್ ಅಗರ್ಕರ್, 'ಶ್ರೇಯಸ್ ಯಾರ ಸ್ಥಾನವನ್ನು ಪಡೆಯುತ್ತಾರೆ ಅದು ಅವರ ತಪ್ಪೂ ಅಲ್ಲ ಅಥವಾ ನಮ್ಮ ತಪ್ಪೂ ಅಲ್ಲ. ನೀವು 15 ಆಟಗಾರರನ್ನು ಮಾತ್ರ ಆಯ್ಕೆ ಮಾಡಬಹುದು. ಆದ್ದರಿಂದ ಅವರು ತಮ್ಮ ಅವಕಾಶಕ್ಕಾಗಿ ಕಾಯಬೇಕಾಗುತ್ತದೆ' ಎಂದು ಹೇಳಿದರು. ಅಗರ್ಕರ್ ಅವರ ಈ ಉತ್ತರದಿಂದ ಜನರು ಇನ್ನಷ್ಟು ಕೋಪಗೊಂಡರು. ಅಯ್ಯರ್ ಅವರನ್ನು ಸ್ಟ್ಯಾಂಡ್‌ಬೈ ಆಟಗಾರರ ಪಟ್ಟಿಯಲ್ಲಿಯೂ ಇರಿಸಲಾಗಿಲ್ಲ. ಇದು ಆಯ್ಕೆ ಸಮಿತಿಯು ಅವರನ್ನು ಇಷ್ಟಪಡದಿರಬಹುದು ಎಂದು ಅಭಿಮಾನಿಗಳು ಭಾವಿಸುವಂತೆ ಮಾಡಿತು. ಆದರೆ ಅಯ್ಯರ್ ಅವರನ್ನು ಸ್ಟ್ಯಾಂಡ್‌ಬೈ ಪಟ್ಟಿಯಲ್ಲಿ ಏಕೆ ಇರಿಸಲಾಗಿಲ್ಲ ಎಂದು ಬಿಸಿಸಿಐ ಮೂಲವೊಂದು ತಿಳಿಸಿದೆ. ಆಯ್ಕೆದಾರರಿಗೆ ಅಯ್ಯರ್ ಬಗ್ಗೆ ಯಾವುದೇ ದ್ವೇಷವಿಲ್ಲ ಎಂದು ಅವರು ಹೇಳಿದ್ದಾರೆ. ಶ್ರೇಯಸ್‌ನಂತಹ ಅನುಭವಿ ಆಟಗಾರನನ್ನು ಮೀಸಲು ಆಟಗಾರರ ಪಟ್ಟಿಯಲ್ಲಿ ಇಡಲು ಸಾಧ್ಯವಿಲ್ಲ ಎಂದು ಅರ್ಥಮಾಡಿಕೊಳ್ಳಬೇಕು. ನೀವು ಅವರನ್ನು ಆಯ್ಕೆ ಮಾಡಿದರೆ, ಅವರು ಪ್ಲೇಯಿಂಗ್ 11ರಲ್ಲಿ ಆಡುತ್ತಾರೆ. ಅಯ್ಯರ್ ವಿರುದ್ಧ ಯಾರಿಗೂ ಯಾವುದೇ ದೂರು ಇಲ್ಲ. ಅವರಿಗೆ ಅವಕಾಶಗಳು ಸಿಗುತ್ತವೆ ಮತ್ತು ಮುಂದಿನ ದಿನಗಳಲ್ಲಿ ಅವರು ಮೂರೂ ಸ್ವರೂಪಗಳಲ್ಲಿ ಭಾರತಕ್ಕಾಗಿ ಹಲವು ಪಂದ್ಯಗಳನ್ನು ಆಡುತ್ತಾರೆ.'' ಎಂದು ಮೂಲಗಳು ತಿಳಿಸಿವೆ.





# ಏಕದಿನ ವಿಶ್ವಕಪ್ ಪಂದ್ಯಗಳು ಬೆಂಗಳೂರಿನಿಂದ ಶಿಫ್ಟ್

2025 ರ ಐಸಿಸಿ ಮಹಿಳಾ ಏಕದಿನ ವಿಶ್ವಕಪ್ ವೇಳಾಪಟ್ಟಿಯಲ್ಲಿ ದೊಡ್ಡ ಬದಲಾವಣೆಯಾಗಿದೆ. ಮೊದಲೇ ಊಹಿಸಿದಂತೆ ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆಯಬೇಕಿದ್ದ ಲೀಗ್ ಹಂತದ ಹಾಗೂ ಸೆಮಿಫೈನಲ್ ಪಂದ್ಯಗಳನ್ನು ಮುಂಬೈನಲ್ಲಿ ನಡೆಸಲು ಐಸಿಸಿ ನಿರ್ಧರಿಸಿದೆ. ಐಸಿಸಿ ನಿರ್ಧಾರಕ್ಕೆ ಚಿನ್ನಸ್ವಾಮಿ ಕ್ರೀಡಾಂಗಣದ ಹೊರಗೆ ಉಂಟಾಗಿದ್ದ ಕಾಲ್ತುಳಿತ ದುರಂತವೇ ಪ್ರಮುಖ ಕಾರಣ ಎನ್ನಬಹುದು. ಇದರಿಂದಾಗಿ ವಿಶ್ವಕಪ್ ಪಂದ್ಯಗಳು ಬೆಂಗಳೂರಿನ ಎಂ ಚಿನ್ನಸ್ವಾಮಿ ಕ್ರೀಡಾಂಗಣದ ಬದಲು ನವಿ ಮುಂಬೈನ ಡಿವೈ ಪಾಟೀಲ್ ಕ್ರೀಡಾಂಗಣದಲ್ಲಿ ನಡೆಯಲಿವೆ. ಹೊಸ ವೇಳಾಪಟ್ಟಿ ಪ್ರಕಟ ಮಹಿಳಾ ವಿಶ್ವಕಪ್‌ನ ಹೊಸ ವೇಳಾಪಟ್ಟಿಯ ಪ್ರಕಾರ, ಐದು ಪಂದ್ಯಗಳು ಡಿವೈ ಪಾಟೀಲ್ ಕ್ರೀಡಾಂಗಣದಲ್ಲಿ ನಡೆಯಲಿವೆ. ಈ ಪಂದ್ಯಗಳಲ್ಲಿ ಮೂರು ಲೀಗ್ ಪಂದ್ಯಗಳು ಮತ್ತು ಒಂದು ಸೆಮಿಫೈನಲ್ ಸೇರಿವೆ. ಪಾಕಿಸ್ತಾನ ಫೈನಲ್ ತಲುಪದಿದ್ದರೆ, ಪಂದ್ಯಾವಳಿಯ ಫೈನಲ್ ಕೂಡ ಈ ಕ್ರೀಡಾಂಗಣದಲ್ಲಿ ನಡೆಯಲಿದೆ. ನವಿ ಮುಂಬೈ ಜೊತೆಗೆ, ವಿಶ್ವಕಪ್ ಪಂದ್ಯಗಳನ್ನು ಎಸಿಎ ಕ್ರೀಡಾಂಗಣ ಹೋಳ್ಕರ್ ಕ್ರೀಡಾಂಗಣ , ಎಸಿಎ-ವಿಡಿಸಿಎ ಕ್ರೀಡಾಂಗಣ ಮತ್ತು ಆರ್. ಪ್ರೇಮದಾಸ ಕ್ರೀಡಾಂಗಣ (ಕೊಲಂಬೊ,) ಗಳಲ್ಲಿಯೂ ನಡೆಸಲಾಗುವುದು.



# ರಿಂಕು ಸಿಂಗ್ ಸ್ಫೋಟಕ ಬ್ಯಾಟಿಂಗ್

2025 ರ ಏಷ್ಯಾ ಕಪ್‌ಗಾಗಿ ಟೀಮ್ ಇಂಡಿಯಾವನ್ನು ಘೋಷಿಸಲಾಗಿದೆ. ಈ ತಂಡದಲ್ಲಿ, ಆಯ್ಕೆದಾರರು ಶ್ರೇಯಸ್ ಅಯ್ಯರ್ ಬದಲಿಗೆ ರಿಂಕು ಸಿಂಗ್ ಅವರನ್ನು ಆಯ್ಕೆ ಮಾಡಿದ್ದಾರೆ. ರಿಂಕು ಕಳೆದ ಐಪಿಎಲ್ ಸೇರಿದಂತೆ ಕೆಲವು ಸಮಯದಿಂದ ಅದ್ಭುತ ಫಾರ್ಮ್‌ನಲ್ಲಿಲ್ಲ. ಹೀಗಿದ್ದರೂ ಇವರನ್ನು ಏಷ್ಯಾ ಕಪ್‌ಗೆ ಆಯ್ಕೆ ಮಾಡಿದ್ದಕ್ಕೆ ಸಾಕಷ್ಟು ಪ್ರಶ್ನೆಗಳು ಎದ್ದವು. ಹೀಗಿರುವಾಗ ಈಗ ಏಷ್ಯಾ ಕಪ್ ಆರಂಭಕ್ಕೆ ಸ್ವಲ್ಪ ದಿನ ಇರುವಾಗ ರಿಂಕು ಸಿಂಗ್ ಭರ್ಜರಿ ಫಾರ್ಮ್‌ಗೆ ಮರಳಿದ್ದಾರೆ. ಯುಪಿ ಟಿ20 ಲೀಗ್‌ನಲ್ಲಿ ಅದ್ಭುತ ಶತಕ ಗಳಿಸುವ ಮೂಲಕ ರಿಂಕು ಸಂಚಲನ ಸೃಷ್ಟಿಸಿದ್ದಾರೆ. ಯುಪಿ ಟಿ20 ಲೀಗ್ 2025 ರ 9 ನೇ ಪಂದ್ಯದಲ್ಲಿ ಮೀರತ್ ಮಾವೆರಿಕ್ಸ್ ಪರ ಟೀಮ್ ಇಂಡಿಯಾದ ಸ್ಟಾರ್ ಬ್ಯಾಟ್ಸ್‌ಮನ್ ರಿಂಕು ಸಿಂಗ್ ಸ್ಫೋಟಕ ಬ್ಯಾಟಿಂಗ್ ಪ್ರದರ್ಶನ ನೀಡಿದರು. ಏಕಾನಾ ಕ್ರಿಕೆಟ್ ಕ್ರೀಡಾಂಗಣದಲ್ಲಿ ಗೋರಖ್‌ಪುರ ಲಯನ್ಸ್ ವಿರುದ್ಧದ ಪಂದ್ಯದಲ್ಲಿ, ರಿಂಕು ಅವರ ಅದ್ಭುತ ಶತಕವು ಮೀರತ್‌ಗೆ ದೊಡ್ಡ ಗೆಲುವು ತಂದುಕೊಟ್ಟಿತು. ರಿಂಕು ಸಿಂಗ್ ಕೇವಲ 48 ಎಸೆತಗಳಲ್ಲಿ 108 ರನ್ ಗಳಿಸಿದರು. ಅವರ ಇನ್ನಿಂಗ್ಸ್ ನಲ್ಲಿ 7 ಬೌಂಡರಿಗಳು ಮತ್ತು 8 ಸಿಕ್ಸರ್‌ಗಳು ಸೇರಿದ್ದವು. ಈ ಇನ್ನಿಂಗ್ಸ್ ನಿಂದಾಗಿ, ಮೀರತ್ ಮಾವೆರಿಕ್ಸ್ ಗೋರಖ್‌ಪುರ ಲಯನ್ಸ್ ತಂಡವನ್ನು 6 ವಿಕೆಟ್‌ಗಳಿಂದ ಸೋಲಿಸಿತು.



# ಸೂರ್ಯಗೆ ಸುವರ್ಣಾವಕಾಶ

ಇಲ್ಲಿಯವರೆಗೆ ಎರಡು ಆವೃತ್ತಿಯ ಟಿ20 ಏಷ್ಯಾ ಕಪ್ ಟೂರ್ನಿ ನಡೆದಿವೆ. ಮೊದಲ ಬಾರಿಗೆ 2016 ರಲ್ಲಿ ಮತ್ತು ಎರಡನೇ ಬಾರಿಗೆ 2022 ರಲ್ಲಿ. ಈಗ, ಟಿ20 ವಿಶ್ವಕಪ್ 2026 ರ ದೃಷ್ಟಿಯಿಂದ, ಏಷ್ಯಾ ಕಪ್ ಅನ್ನು ಮತ್ತೊಮ್ಮೆ ಟಿ20 ಸ್ವರೂಪದಲ್ಲಿ ಆಡಲಾಗುತ್ತಿದೆ. ಏಷ್ಯಾ ಕಪ್ 2025 ಪ್ರಾರಂಭವಾಗಲು ಕೆಲವೇ ದಿನಗಳು ಮಾತ್ರ ಉಳಿದಿದೆ. ಭಾರತ ತಂಡವು ಸೆಪ್ಟೆಂಬರ್ 10 ರಂದು ಯುಎಇ ವಿರುದ್ಧ ತನ್ನ ಮೊದಲ ಪಂದ್ಯವನ್ನು ಆಡಲಿದೆ. ಇಲ್ಲಿಯವರೆಗೆ, ಒರ್ವ ಭಾರತೀಯ ನಾಯಕ ಮಾತ್ರ ಟಿ20 ಏಷ್ಯಾ ಕಪ್ ಪ್ರಶಸ್ತಿಯನ್ನು ಗೆಲ್ಲಲು ಸಾಧ್ಯವಾಗಿದೆ.

**ಧೋನಿ ನಾಯಕತ್ವದಲ್ಲಿ 2016 ರ ಟಿ20 ಏಷ್ಯಾ ಕಪ್ ಪ್ರಶಸ್ತಿ:** ಮಹೇಂದ್ರ ಸಿಂಗ್ ಧೋನಿ 2016 ರ ಟಿ20 ಏಷ್ಯಾ ಕಪ್ ನಲ್ಲಿ ಭಾರತ ತಂಡದ ನಾಯಕರಾಗಿದ್ದರು ಮತ್ತು ಅವರ ನಾಯಕತ್ವದಲ್ಲಿ ತಂಡವು ಬಾಂಗ್ಲಾದೇಶವನ್ನು ಫೈನಲ್ ನಲ್ಲಿ 8 ವಿಕೆಟ್ ಗಳಿಂದ ಸೋಲಿಸಿ ಪ್ರಶಸ್ತಿ ಗೆದ್ದುಕೊಂಡಿತು. ಬಾಂಗ್ಲಾದೇಶ ತಂಡ ಮೊದಲು ಬ್ಯಾಟ್ ಮಾಡಿ 120 ರನ್ ಗಳಿಸಿತು. ಇದರ ನಂತರ ಶಿಖರ್ ಧವನ್ ಭಾರತ ಪರ 60 ರನ್ ಗಳನ್ನು ಗಳಿಸಿದರು. ವಿರಾಟ್ ಕೊಹ್ಲಿ 41 ರನ್ ಗಳ ಕೊಡುಗೆ ನೀಡಿದರು. ಮಹೇಂದ್ರ ಸಿಂಗ್ ಧೋನಿ ನಾಲ್ಕನೇ ಕ್ರಮಾಂಕದಲ್ಲಿ ಬ್ಯಾಟಿಂಗ್ ಮಾಡಿ 6 ಎಸೆತಗಳಲ್ಲಿ 20 ರನ್ ಗಳಿಸಿದರು, ಇದರಲ್ಲಿ ಒಂದು ಬೌಂಡರಿ ಮತ್ತು ಎರಡು ಸಿಕ್ಸರ್‌ಗಳು ಸೇರಿವೆ. ನಂತರ 2022 ರಲ್ಲಿ ಏಷ್ಯಾ ಕಪ್ ಅನ್ನು ಟಿ20 ಸ್ವರೂಪದಲ್ಲಿ ಆಡಲಾಯಿತು. ಆಗ ಭಾರತ ತಂಡದ ನಾಯಕ ರೋಹಿತ್ ಶರ್ಮಾ. ಅವರ ನಾಯಕತ್ವದಲ್ಲಿ ತಂಡವು ಫೈನಲ್ ತಲುಪಲು ಸಾಧ್ಯವಾಗಲಿಲ್ಲ. 2022 ರಲ್ಲಿ, ಶ್ರೀಲಂಕಾ ತಂಡವು ದಾಸುನ್ ಶನಕ ನಾಯಕತ್ವದಲ್ಲಿ ಪಾಕಿಸ್ತಾನವನ್ನು ಸೋಲಿಸುವ ಮೂಲಕ ಏಷ್ಯಾ ಕಪ್ ಟ್ರೋಫಿಯನ್ನು ಗೆದ್ದುಕೊಂಡಿತು.

**ಸೂರ್ಯಗೆ ದೊಡ್ಡ ಅಅವಕಾಶ:** ಇಲ್ಲಿಯವರೆಗೆ, ಭಾರತಕ್ಕೆ ಟಿ20 ಏಷ್ಯಾ ಕಪ್ ಪ್ರಶಸ್ತಿಯನ್ನು ಗೆದ್ದುಕೊಟ್ಟವರು ಮಹೇಂದ್ರ ಸಿಂಗ್ ಧೋನಿ ಮಾತ್ರ. ಈಗ ಮುಂಬರುವ ಟಿ20 ಏಷ್ಯಾ ಕಪ್‌ಗಾಗಿ ಭಾರತೀಯ ತಂಡದ ನಾಯಕತ್ವ ಸೂರ್ಯಕುಮಾರ್ ಯಾದವ್ ಅವರ ಕೈಯಲ್ಲಿದೆ. ಅವರ ನಾಯಕತ್ವದಲ್ಲಿ ತಂಡವು ಪ್ರಶಸ್ತಿಯನ್ನು ಗೆದ್ದರೆ, ಅವರು ಟಿ20 ಏಷ್ಯಾ ಕಪ್ ಗೆದ್ದ ಎರಡನೇ ಭಾರತೀಯ ನಾಯಕರಾಗುತ್ತಾರೆ. ಅವರು ಮೊದಲ ಬಾರಿಗೆ ಏಷ್ಯಾ ಕಪ್‌ನಲ್ಲಿ ಭಾರತ ತಂಡವನ್ನು ಮುನ್ನಡೆಸಲಿದ್ದಾರೆ. ಮತ್ತೊಂದೆಡೆ, ರೋಹಿತ್ ಶರ್ಮಾ ನಾಯಕನಾಗಿದ್ದರೂ, ಏಕದಿನ ಸ್ವರೂಪದಲ್ಲಿ ಎರಡು ಬಾರಿ (2018, 2023) ಏಷ್ಯಾ ಕಪ್ ಪ್ರಶಸ್ತಿಯನ್ನು ಗೆದ್ದಿದ್ದಾರೆ. ಆದರೆ ಟಿ20 ಏಷ್ಯಾ ಕಪ್‌ನಲ್ಲಿ ಅವರು ಖಾಲಿ ಕೈಯಲ್ಲಿ ಉಳಿದರು.

**ಏಷ್ಯಾ ಕಪ್‌ಗೆ ಭಾರತ ತಂಡ:** ಸಂಜು ಸ್ಯಾಮ್ಸನ್ (ವಿಕೆಟ್ ಕೀಪರ್), ಅಭಿಷೇಕ್ ಶರ್ಮಾ, ತಿಲಕ್ ವರ್ಮಾ, ಸೂರ್ಯಕುಮಾರ್ ಯಾದವ್ (ನಾಯಕ), ಶುಭ್‌ಮನ್ ಗಿಲ್ (ಉಪನಾಯಕ), ಹಾರ್ದಿಕ್ ಪಾಂಡ್ಯ, ಶಿವಂ ದುಬೆ, ಅಕ್ಷರ್ ಪಟೇಲ್, ಜಸ್ಪ್ರೀತ್ ಬುಮ್ರಾ, ಅರ್ಷದೀಪ್ ಸಿಂಗ್, ವರುಣ್ ಚಕ್ರವರ್ತಿ, ಜಿತೇಶ್ ಶರ್ಮಾ (ವಿಕೆಟ್ ಕೀಪರ್), ಕುಲ್ದೀಪ್ ಯಾದವ್, ಹರ್ಷಿತ್ ರಾಣಾ, ರಿಂಕು ಸಿಂಗ್.

Printed by : A. BALACHANDRA, Printed at : RAJHANS ENTERPRISES No. 134, 4th Main Road, Industrial Town, Rajajinagar, Bengaluru - 560044, Karnataka. Owned By, Published By, Editor :T. HOMBE GOWDA, No. 1230, Jayamahal, Ground Floor, 13th Cross, 2nd Phase, Girinagar, Bengaluru - 560 085, Karnataka. Email Id: udayavahininews@yahoo.com , epaper.udayavahini.in www.udayavahini.in Udaya vahini news Udaya vahini news
ಉದಯವಾಹಿನಿ ಪತ್ರಿಕೆ ಹೆಸರಿನಲ್ಲಿ ಯಾರಾದರೂ ಬ್ಲ್ಯಾಕ್‌ಮೇಲ್ ಮಾಡಿದರೆ ಅಥವಾ ಹೆಸರು ದುರ್ಬಳಕೆ ಮಾಡಿಕೊಳ್ಳುತ್ತಿದ್ದರೆ ಕೂಡಲೇ ಈ ನಂಬರ್‌ಗೆ ಕರೆ ಮಾಡಿ: 9448225966